ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 22 ಸಂಚಿಕೆ 5 ಜನವರಿ 25-31, 1999 ರೂ. 2.00

ಜನವರಿ 26-30 ಕೋಮುಸೌಹಾರ್ದ ಆಂದೋಲನ

ವಿಶೇಷ ಲೇಖನಗಳು ಪುಟ 4-5

ಠಾಕ್ರೆ ಬೆದರಿಸಿದರು! ನಮ್ಮ ಕೇಂದ್ರ ಗೃಹಮಂತ್ರಿಗಳು ಭಿಕ್ಷಾಪಾತ್ರೆ ಹಿಡಿದರು!!

ಆಹಾ! ಎಂತಹ ಸಮರ್ಥ ಸರ್ಕಾರ

ಭಾರತ-ಪಾಕಿಸ್ತಾನ ಕ್ರಿಕೆಟ್ ಸರಣಿಯನ್ನು ಕ್ರಿಕೆಟ್ ಪ್ರೇಮಿಗಳು ಮಾತ್ರವಲ್ಲ, ಉಭಯ ದೇಶಗಳ ನಡುವೆ ಸಂಬಂಧಗಳು ಉತ್ತಮಗೊಳ್ಳಬೇಕೆಂದು ಬಯಸುವವರೆಲ್ಲ ಕಾತುರದಿಂದ ಎದುರುನೋಡುತ್ತಿದ್ದಾಗ ಶಿವಸೇನೆಯ ಮುಖ್ಯಸ್ಥ ಬಾಳಾಸಾಹೇಬ್ ಠಾಕ್ರೆ ಬೆದರಿಸಿದರು - ಈ ಸರಣಿ ನಡೆಯಲು ನಾವು ಬಿಡುವುದಿಲ್ಲ- ಪ್ರಧಾನಿಗಳು ಗೊಣಗೊಣ ಎಂದರು. ಕೇಂದ್ರ ಗೃಹಮಂತ್ರಿಗಳು ತುಟಿಪಿಟಿಕ್ಕೆನ್ನಲಿಲ್ಲ. ಸರಣಿಗೆ ಭದ್ರತೆ ನೀಡಲಾಗುವುದು ಎಂದಷ್ಟೇ ಹೇಳಲಾಯಿತು. ಆದರೆ ಸರಣಿಯ ಪಟ್ಟಿಯಲ್ಲಿ ಕ್ರಿಕೆಟ್‌ನ ತವರಾದ ಮುಂಬೈ ಹೆಸರನ್ನೇ ಕೈಬಿಟ್ಟು ಮುಂಬೈಯ ಪರಂಪರೆಗೆ ಮಸಿ ಬಳಿಯಲಾಯಿತು.

ಠಾಕ್ರೆಯ, ಠಾಕ್ರೆಯ ಮಂದಿಯ ಬೆದರಿಕೆ ನಿಲ್ಲಲಿಲ್ಲ. ಶಿವಸೇನೆಯ ಭಟರು ಕೇಂದ್ರ ಗೃಹ ಮಂತ್ರಿಗಳ ಮೂಗಿನ ಕೆಳಗೇ ದಿಲ್ಲಿಯ ಫಿರೋಜ್ ಷಾ ಕೋಟ್ಲಾ ಕ್ರಿಕೆಟ್ ಮೈದಾನವನ್ನು ಅಗೆದು ಹಾಳುಗೆಡವಿದರು. ಬಾಳಾಠಾಕ್ರೆ ಶಹಬ್ಬಾಸ್ ಎಂದರು. ದೇಶದೆಲ್ಲೆಡೆ ಕ್ರೋಧ, ಪ್ರತಿಭಟನೆ ಮೊಳಗಿತು. ಭಯೋತ್ಪಾದಕರಿಗೆ ತಾನು ರಣಭಯಂಕರ ಎಂದು ಹೇಳಿಕೊಳ್ಳುವ ಕೇಂದ್ರ ಗೃಹಮಂತ್ರಿಗಳ ಬಾಯಿಂದ ಈ ಭಯೋತ್ಪಾದಕನ ಬಗ್ಗೆ ಒಂದೇ ಒಂದು ಖಂಡನೆಯ ಮಾತು ಬರಲಿಲ್ಲ. ಕ್ರಿಕೆಟ್ ಸರಣಿಗೆ ಭದ್ರತೆ ನೀಡಲಾಗುವುದು ಎಂದು ಮತ್ತೆ ಹೇಳಲಾಯಿತು. ಆದರೆ ಮೊದಲ ಪಂದ್ಯವನ್ನು ದಿಲ್ಲಿಯಿಂದ ಚೆನ್ನೈಗೆ ವರ್ಗಾಯಿಸಲಾಯಿತು.

ಶಿವಸೇನೆಯ ಸರಕಾರ ಇರುವ, ಬಿಜೆಪಿ ಗೃಹಮಂತ್ರಿ ಇರುವ ಮುಂಬೈಯಲ್ಲಿ ಭಾರತ ಕ್ರಿಕೆಟ್ ಹತೋಟಿ ಮಂಡಳಿಯ ಕಚೇರಿಗೆ ನುಗ್ಗಿ ಠಾಕ್ರೆ ಭಟರು ಇನ್ನೊಂದು ಧಾಂದಲೆ ಎಬ್ಬಿಸಿದರು. ಭಾರತ ಕ್ರಿಕೆಟ್ ಇತಿಹಾಸದ ಸುವರ್ಣನೆನಪುಗಳನ್ನೆಲ್ಲಾ ಪುಡಿ-ಪುಡಿ ಮಾಡಿದರು. ಆಗ ಕೇಂದ್ರ ಗೃಹಮಂತ್ರಿಗಳೂ ಮೇಲ್‌ಸೇತುವೆಯ ಉದ್ಘಾಟನೆಗೆ ಬಂದವರು ಮುಂಬೈಯಲ್ಲೇ ಇದ್ದರು. ಪತ್ರಕರ್ತರ ಪ್ರಶ್ನೆಗೆ ಉತ್ತರಿಸಲೂ ನಿರಾಕರಿಸಿದರು. ಈಗಲೂ ಖಂಡನೆಯ ಸೊಲ್ಲು ಬರಲಿಲ್ಲ. ಕ್ರಿಕೆಟ್ ಸರಣಿಗೆ ಭದ್ರತೆಯ ಮಾತು ಪುನರಾವರ್ತನೆಗೊಂಡಿತಷ್ಟೆ.

ದೇಶದಲ್ಲಿ ಕ್ರೋಧದ ಜ್ವಾಲೆ ತೀವ್ರಗೊಂಡಿತು. ದಿಲ್ಲಿಯಲ್ಲಿ, ಮುಂಬೈಯಲ್ಲಿ ಸರಕಾರವೆಂಬುದಿದೆಯೇ ಎಂದು ಕ್ರಿಕೆಟ್‌ನಲ್ಲಿ ಆಸಕ್ತಿಯಿಲ್ಲದವರೂ ಕೇಳುವಂತಾಯಿತು. ಕ್ರಿಕೆಟ್ ಹತೋಟಿ ಮಂಡಳಿ ತನ್ನ ಕೇಂದ್ರ ಕಛೇರಿಯನ್ನು ಕಲ್ಕತ್ತೆಗೆ ವರ್ಗಾಯಿಸಲು ನಿರ್ಧರಿಸಿತು. (ಹಿಂದೆ ಡಿಸೆಂಬರ್ 1992 ರಲ್ಲಿ ಬಾಬ್ರಿ ಮಸೀದಿ ಧ್ವಂಸದ ನಂತರ ಹಲವರು ಸಿಪಿಐ(ಎಂ) ಕೇಂದ್ರ ಕಚೇರಿಗೆ ಬಂದು ನಮ್ಮನ್ನು ಕಲ್ಕತ್ತೆಗೆ ಕಳಿಸಿ ಎಂದು ಕೇಳಿದ್ದರಂತೆ- ಏಕೆ ಎಂದು ನೀವೇ ಊಹಿಸಿಕೊಳ್ಳಬಹುದು) ಎಸ್‌ಎಫ್‌ಐ ಮತ್ತಿತರ ವಿದ್ಯಾರ್ಥಿ ಸಂಘಟನೆಗಳು ಜನವರಿ 28 ರಂದು ಭಾರತ-ಪಾಕಿಸ್ತಾನಸರಣಿ ಆರಂಭವಾಗುವ ದಿನ ದೇಶಾದ್ಯಂತ ಎಲ್ಲಾ ಕ್ಯಾಂಪಸ್‌ಗಳಲ್ಲಿ 'ಕ್ರೀಡೆಯನ್ನು ಕೋಮುವಾದಿ ಧ್ವಂಸಕೋರರಿಂದ ರಕ್ಷಿಸಿ' ದಿನ ಆಚರಿಸಲು ನಿರ್ಧರಿಸಿದರು; 'ವಿದ್ಯಾರ್ಥಿ ಅಸೆಂಬ್ಲಿ' ಕರೆದು ಸತತವಾಗಿ ಅಸಹನೆ ಹಾಗೂ ಕೋಮುವಾದಿ ದ್ವೇಷ ಪ್ರತಿಪಾದಿಸುವ ಕೋಮುವಾದಿ ಕಿರಾತಕ ಬಾಳಾಠಾಕ್ರೆಯನ್ನು ವಿಚಾರಣೆಗೆ ಗುರಿಪಡಿಸಬೇಕು ಎಂದು ನಿರ್ಧರಿಸಿದರು; ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗದೆ ಮೂಕ ಪ್ರೇಕ್ಷಕನಂತಿರುವ ವಾಜಪೇಯಿ ಸರಕಾರವನ್ನು ಬಲವಾಗಿ ಖಂಡಿಸಿದರು. ಅತ್ತ ಮೊದಲ ಪಂದ್ಯ ನಡೆಯುವ ಚೆನ್ನೈನಲ್ಲೂ ಬಾಲ ಬಿಚ್ಚುವ ಶಿವಸೈನಿಕರ ಪ್ರಯತ್ನವನ್ನು ಡಿ.ಎಂ.ಕೆ. ಸರಕಾರ ವಿಫಲಗೊಳಿಸಲು ಮುಂದಾಯಿತು. ಹಲವು ಪ್ರಮುಖ ಶಿವಸೈನಿಕರನ್ನು ಬಂಧಿಸಿತು. ಬಿಜೆಪಿ ಸರಕಾರದ ಮಿತ್ರರಾದ ಮಮತಾ ಬ್ಯಾನರ್ಜಿ ಶಿವಸೇನೆ ನೇತೃತ್ವದ ಸರಕಾರಕ್ಕೆ ಬೆಂಬಲ ಹಿಂತೆಗೆದುಕೊಳ್ಳಬೇಕೆಂದು ಗುಡುಗಿದರು. ಇನ್ನೊಬ್ಬ ಮಿತ್ರ ಚಂದ್ರಬಾಬು ನಾಯ್ಡುರವರೂ ಇದು ಅತಿಯಾಯಿತು, ಕೂಡಲೇ ಕ್ರಮ ಕೈಗೊಳ್ಳಿ ಎಂದರು.

ಇದನ್ನು ಕಂಡ ಬೆದರಿಸುವವರೇ ಹೆದರಿದರು ಕೇಂದ್ರ ಗೃಹ ಮಂತ್ರಿಗಳು ಎಚ್ಚೆತ್ತರು. ಆದರೆ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮಗಳಿಗೆ ಮುಂದಾದರೇ? ಇಲ್ಲ. ಮುಂಬೈಗೆ ಧಾವಿಸಿದರು ಠಾಕ್ರೆಯವರ ಬಂಧನಕ್ಕೆ ಆಜ್ಞೆ ಹೊರಡಿಸಿದರೆ? ಇಲ್ಲ. ಅವರೊಡನೆ ಚರ್ಚಿಸಲು ಹೋದರು! ಶಾಂತಿಯ ಭಿಕ್ಷಾಪಾತ್ರೆ ಹಿಡಿದು! ವಿಮಾನ ನಿಲ್ದಾಣದ ಹೋಟೆಲೊಂದರಲ್ಲಿ ಪಿಚ್ ಅಗೆಯುವವರಿಗೆ, ಅಮೂಲ್ಯ ಟ್ರೋಫಿಗಳನ್ನು ಒಡೆಯುವವರಿಗೆ ಶಹಬ್ಬಾಸ್‌ಗಿರಿ ಕೊಡುವವನೊಂದಿಗೆ ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವದ ಗೃಹಮಂತ್ರಿಗಳು ಒಂದು ಗಂಟೆ ಮಾತನಾಡಿದರಂತೆ ಆ ಮಹಾನುಭಾವ ದೊಡ್ಡ ಮನಸ್ಸು ಮಾಡಿ ಒಂದು ವರ್ಷದ ಕಾಲ ತನ್ನ ವಿರೋಧವನ್ನು ಸ್ಥಗಿತಗೊಳಿಸಲು ಒಪ್ಪಿದರಂತೆ. ಧನ್ಯನಾದೆ ಎಂದು ನಮ್ಮ ಕೇಂದ್ರ ಗೃಹಮಂತ್ರಿಗಳು ದಿಲ್ಲಿಗೆ ಮರಳಿದರು. ಇದಕ್ಕಿಂತ ನಾಚಿಕೆಗೇಡಿನ ಸಂಗತಿ ದೇಶಕ್ಕೆ ಬೇರೆಯಿದೆಯೇ? ಇಂತಹ ಸರಕಾರವನ್ನು ನಾವು ಸಹಿಸಿಕೊಳ್ಳಬೇಕೆ?

ಬಾಳಾಠಾಕ್ರೆಯ ಈ ನಿರ್ಧಾರದ ನಂತರವೂ ಭದ್ರತಾ ಕ್ರಮಗಳು ಮುಂದುವರಿಯುತ್ತವೆಯಂತೆ. ಏಕೆಂದರೆ ಈಗಲೂ ಈ ಸರಕಾರಕ್ಕೇ ತನ್ನ 'ಯಶಸ್ಸಿ'ನ ಬಗ್ಗೆ ವಿಶ್ವಾಸವಿಲ್ಲ. ಜನಗಳಿಗಂತೂ ಖಂಡಿತಾ ಇಲ್ಲ. ಏಕೆದರೆ ಸರಕಾರದ ವಿಶ್ವಾಸಾರ್ಹತೆ ಈಗ ತಳಮುಟ್ಟಿದೆ.

ಕಳೆದ ಎರಡು ವರ್ಷಗಳಲ್ಲಿ ಪಾಕಿಸ್ತಾನೀ ತಂಡ ಎರಡು ಬಾರಿ ಭಾರತಕ್ಕೆ ಬಂದಿದೆ. ಈಗ ಇಲ್ಲದ ಇಂತಹ ಪ್ರತಿಭಟನೆ ಈಗ ಏಕೆ? ಹೀಗೆಂದು ಐ.ಸಿ.ಸಿ. ಅಧ್ಯಕ್ಷ ದಾಲ್ಮಿಯಾರಿಗೆ ಆಶ್ಚರ್ಯವಾಗಿದೆಯಂತೆ. ಇದರಲ್ಲಿ ಆಶ್ಚರ್ಯವೇನು ಬಂತು? ಆಗ ಚುನಾವಣೆಗಳಿರಲಿಲ್ಲ. ಆಗ ಮಹಾರಾಷ್ಟ್ರಗಳಲ್ಲಿ ಚುನಾವಣೆಗಳು ಹತ್ತಿರ ಬಂದಿವೆ. ಮುಂಬೈಯಲ್ಲಿ ಕಳೆದ ಸಂಸದೀಯ ಚುನಾವಣೆಗಳ ಸೋಲಿನ ನಂತರ, ಪರಮಾಣು ತಂತ್ರ ಠುಸ್ಸೆಂದ ನಂತರ ಇತ್ತೀಚೆಗೆ ತನ್ನ ಮೂರು 'ಕೋಟೆ'ಗಳಲ್ಲಿ ಕಾವಿ ಪಡೆಗಳು ನೆಲಕಚ್ಚಿದ ನಂತರ ಕೋಮು ಭಾವೋದ್ರೇಕ ಎಬ್ಬಿಸುವುದೇ ತಮಗುಳಿದ ಏಕೈಕ ಮಾರ್ಗ ಎಂದು ಮತ್ತೆ ಇವರಿಗೆ ಅನಿಸಿದೆ. ಆದರಿಂದಲೇ ಠಾಕ್ರೆಯ ಬೆದರಿಕೆಗಳು, ವಾಜಪೇಯಿಯ ಆಶ್ವಾಸನೆಗಳು, ಅಡ್ವಾಣಿಯವರ ಭಿಕ್ಷಾ ಪಾತ್ರೆಗಳು! ○

ಬೆಲೆಯೇರಿಕೆ ತಡೆಯಲು ಮುತುವರ್ಜಿ ವಹಿಸಿ ಪಡಿತರ ವ್ಯವಸ್ಥೆಯನ್ನು ಬಲಪಡಿಸಲು ಕ್ರಮಕೈಗೊಳ್ಳಿ

ಎಂದು ಆಗ್ರಹಿಸಿ ಫೆಬ್ರವರಿ 9 ರಂದು ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗೆ ಸಿಪಿಐ(ಎಂ) ಕರೆ

ಮೂರು ರಾಜ್ಯಗಳಲ್ಲಿ ವಿಧಾನಸಭೆಗಳಲ್ಲಿ ವ್ಯಕ್ತಪಟ್ಟ ಜನಗಳ ಆಕ್ರೋಶ, ಡಿಸೆಂಬರ್ 11 ರ ಮುಷ್ಕರಕ್ಕೆ ವ್ಯಕ್ತಪಟ್ಟ ಭಾರೀ ಸ್ಪಂದನದಿಂದಾದರೂ ಎಚ್ಚೆತ್ತು ಬಿಜೆಪಿ ನೇತೃತ್ವದ ಸರಕಾರ ಬೆಲೆಯೇರಿಕೆಯನ್ನು ತಡೆಗಟ್ಟಲು ತುರ್ತು ಕ್ರಮಗಳನ್ನು ಕೈಗೊಳ್ಳಬಹುದೆಂದು ನಿರೀಕ್ಷೆ ಬಹಳ ಬೇಗನೇ ಹುಸಿಯಾಗಿದೆ. ಬೆಂಗಳೂರಿನಲ್ಲಿ ನಡೆದ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ತನ್ನ ಹೀನ ಪರಾಭವದ ಬಗ್ಗೆ ಆತ್ಮ ಪರೀಕ್ಷಣೆ ನಡೆಸಬೇಕೆಂದು ನಿರೀಕ್ಷಿಸಿದ್ದ ಅದರ ಬೆಂಬಲಿಗರಿಗೆ ಭಾರಿ ನಿರಾಸೆ ಕಾದಿತ್ತು. ಅದು ಲಾಭಕೋರ ವ್ಯಾಪಾರಸ್ಥರ ಪಕ್ಷ ಎಂಬುದು ಯಾವುದೇ ಸಂದೇಹ ಕೈಡೆಯಿಲ್ಲದಂತೆ ಈಗ ಸಾಬೀತಾಗಿದೆ. ಹೀಗಿರುವಾಗ ಹಣದುಬ್ಬರ ಎರಡಂಕಿಯಲ್ಲೇ ಮುಂದುವರೆದಿದ್ದು ಅದರೊಂದಿಗೆ ಬೆಲೆಯೇರಿಕೆಯ ಪ್ರವೃತ್ತಿಯೂ ಮುಂದುವರೆದಿದ್ದರೆ ಆಶ್ಚರ್ಯವೇನು?

ಬೆಲೆಯೇರಿಕೆ ಮತ್ತಿತರ ವಿಧಾನಗಳಲ್ಲಿ ಜನಗಳನ್ನು ಹಿಂಡಿ ಹಿಪ್ಪೆ ಮಾಡುತ್ತಿರುವ ನರಸಿಂಹ ರಾವ್ ಸರಕಾರದ ನೀತಿಗಳನ್ನೇ ಅತ್ಯಂತ ತರಾತುರಿಯಿಂದ ವಾಜಪೇಯಿ ಸರಕಾರವೂ ಮುಂದುವರೆಸುತ್ತಿರುವಾಗ ಜನಗಳು ತಮ್ಮ ಸಂಕಟಗಳಿಗೆ ಪರಿಹಾರದ ಯಾವುದೇ ಭರವಸೆಯನ್ನು ಇಟ್ಟುಕೊಳ್ಳುವಂತಿಲ್ಲ. ಡೀಸೆಲ್ ಬೆಲೆ ಇಳಿಸಿದರೂ ರೈಲು-ರಸ್ತೆ ಸಾಕಾಣಿಕೆ ದರಗಳನ್ನು ಇಳಿಸಲು ಸರಕಾರ ನಿರಾಕರಿಸುತ್ತಿರುವುದು ಇದಕ್ಕೊಂದು ಉದಾಹರಣೆ. ಆದ್ದರಿಂದ ಜನಾಂದೋಲನವೊಂದೇ ನಮ್ಮ ಮುಂದಿರುವ ಮಾರ್ಗ. ಆದ್ದರಿಂದಲೇ ಜನವರಿ 13-14 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಫೆಬ್ರವರಿ 9 ರಂದು ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗಳನ್ನು ನಡೆಸಲು ಕರೆ ನೀಡಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆ ಅಥವಾ ಪಡಿತರ ವ್ಯವಸ್ಥೆ ಬೆಲೆಯೇರಿಕೆಯಿಂದ ಜನಸಾಮಾನ್ಯ ರಿಗೆ ಪರಿಹಾರ ನೀಡಲೆಂದು ರೂಪಿಸಿದ ಒಂದು ವ್ಯವಸ್ಥೆ. ಆದರೆ ಬೆಲೆಯೇರಿಕೆಯ ನೀತಿಗಳನ್ನೇ ಅವಲಂಬಿಸಿರುವ ಭೂಮಾಲಕ ಬಂಡವಾಳಶಾಹಿ ಸರಕಾರಗಳು ಇದನ್ನು ಮೂಲೆಗುಂಪು ಮಾಡಲು ಪ್ರಯತ್ನಿಸುತ್ತಲೇ ಬಂದಿವೆ. ಅದಕ್ಕೆ ಪ್ರತಿಯಾಗಿ ಸಾಮೂಹಿಕ ಸಂಘಟನೆಗಳು ಇದನ್ನು ಬಲಪಡಿಸಬೇಕು ಎಂದು ಆಗ್ರಹಿಸುತ್ತಲೇ ಬಂದಿವೆ. ಈಗಿನ ಬೆಲೆಯೇರಿಕೆಯ ನೀತಿಗಳ ನಡುವೆಯೂ ಸರಿಯಾದ ಪಡಿತರ ವ್ಯವಸ್ಥೆಯೊಂದು ಜನಗಳಿಗೆ ಗಮನಾರ್ಹ ಪ್ರಮಾಣದಲ್ಲಿ ಪರಿಹಾರ ನೀಡಲು ಸಾಧ್ಯ ಎಂಬುದು ಎಡ ನೇತೃತ್ವದ ಸರಕಾರಗಳಿರುವಲ್ಲಿ ಸಾಬೀತಾಗಿದೆ. ಈ ಪಡಿತರ ವ್ಯವಸ್ಥೆಯಲ್ಲಿ ಆಹಾರ ಧಾನ್ಯಗಳ ವಿತರಣಾ ಪ್ರಮಾಣವನ್ನು ಹೆಚ್ಚಿಸಬೇಕು, ಬಡವರಿಗೆಲ್ಲರಿಗೂ ಪಡಿತರ ಕಾರ್ಡು ವಿತರಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಒತ್ತಾಯಿಸಿದೆ.

ನ್ಯಾಯ ಬೆಲೆ ಅಂಗಡಿಗಳಲ್ಲಿ ಭ್ರಷ್ಟಾಚಾರ ಈ ವ್ಯವಸ್ಥೆಯನ್ನು ಸಂಪೂರ್ಣ ನಿರುಪಯೋಗಿಯಾಗಿ ಮಾಡುತ್ತಿದೆ. ಇದರ ವಿರುದ್ಧ ಜನರ ಹೋರಾಟ ಈಗ ಅನಿವಾರ್ಯ. ತಂತಮ್ಮ ಪ್ರದೇಶಗಳಲ್ಲಿ ಇಂತಹ ಭ್ರಷ್ಟಾಚಾರಗಳನ್ನು, ಲೋಪ-ದೋಷಗಳನ್ನು ಬಯಲಿಗೆಳೆಯಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ. ಮಹಿಳೆಯರನ್ನು ಈ ಹೋರಾಟದಲ್ಲಿ ದೊಡ್ಡ ಸಂಖ್ಯೆಲ್ಲಿ ಒಳಗೊಳ್ಳಬೇಕು ಎಂದೂ ಅದು ಕರೆ ನೀಡಿದೆ.

ಗ್ರಾಮ ಪಂಚಾಯತ್ ಚುನಾವಣೆ ಮುಂದೂಡಿಕೆ ಅಪ್ರಜಾಸತ್ತಾತ್ಮಕ

ಸಿಪಿಐ(ಎಂ) ಖಂಡನೆ

ನಿಗದಿತ ಸಮಯದಲ್ಲಿ ನಡೆಯಬೇಕಿದ್ದ ಗ್ರಾಮ ಪಂಚಾಯತ್ ಚುನಾವಣೆಗಳನ್ನು ಮುಂದೂಡಿದ ಕರ್ನಾಟಕ ಸರ್ಕಾರದ ಕ್ರಮವನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ರಾಜ್ಯ ಕಾರ್ಯದರ್ಶಿ ಮಂಡಳಿ ತೀವ್ರವಾಗಿ ಖಂಡಿಸಿದೆ.

ಗ್ರಾಮಪಂಚಾಯತ್ ಚುನಾವಣೆಗಳನ್ನು ಮುಂದೂಡಲಾಗುವುದಿಲ್ಲ, ನಿಗದಿತ ಕಾಲಕ್ಕೆ ನಡೆಯುವುದೆಂದು ಪಂಚಾಯತ್ ರಾಜ್ ಮಂತ್ರಿ ಎಂ.ಪಿ.ಪ್ರಕಾಶ್ ಅವರು ಹೇಳುತ್ತಲೇ ಬಂದಿದ್ದರು. ಇದೀಗ ಜನತಾದಳದಲ್ಲಿನ ಆಂತರಿಕ ಜಗಳವು ಈ ಚುನಾವಣೆಗಳ ಮುಂದೂಡಿಕೆಗೆ ಕಾರಣವಾಗಿದೆ.

ಐದು ವರ್ಷ ಅವಧಿ ಮುಗಿಯುವ ಮುನ್ನವೇ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕಾಗಿದ್ದರೂ ಇನ್ನೂ ಕೂಡಾ ಚುನಾವಣೆ ಮುಂದಕ್ಕೆ ಹಾಕುವುದು ಅಪ್ರಜಾಸತ್ತಾತ್ಮಕ ಎಂದು ಸಿಪಿಐ(ಎಂ) ಟೀಕಿಸಿದೆ.

ಗ್ರಾಮ ಪಂಚಾಯತ್ ಚುನಾವಣೆಗಳನ್ನು ನಡೆಸಲು ತಕ್ಷಣವೇ ಪ್ರಕ್ರಿಯೆ ಆರಂಭಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ರೇಷ್ಮೆ ಆಮದು ಆಜ್ಞೆ ತಕ್ಷಣ ವಾಪಸ್ಸಿಗೆ ರಾಜ್ಯಪಾಲರಿಗೆ ಮನವಿ

ಫೆ.12 ರಂದು ರಾಜ್ಯ ಮಟ್ಟದ ಸಮಾವೇಶ

ರೇಷ್ಮೆ ಕೃಷಿಕರ ಮತ್ತು ಉದ್ದಿಮೆಗೆ ಮಾರಕವಾಗಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಕಚ್ಚಾರೇಷ್ಮೆ ಆಮದು ನೀತಿಯನ್ನು ತಕ್ಷಣ ವಾಪಸ್ಸು ಪಡೆಯಬೇಕು, ಸಧ್ಯ ದೇಶಕ್ಕೆ ಕೊರತೆಯಿರುವಷ್ಟು ಕಚ್ಚಾ ರೇಷ್ಮೆಯನ್ನು ಬೆಳೆಗಾರರಿಗೆ ತೊಂದರೆಯಾಗದಂತೆ ಸರ್ಕಾರದ ಏಜೆನ್ಸಿ ಮೂಲಕವೇ ಆಮದು ಮಾಡಿಕೊಳ್ಳ ಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿಐಟಿಯು ರಾಜ್ಯ ಸಮಿತಿ ಜಂಟಿಯಾಗಿ ಜನವರಿ 21 ರಂದು ರಾಜ್ಯಪಾಲರಿಗೆ ಮನವಿ ಸಲ್ಲಿಸಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿವೆ.

ಮಾರುಕಟ್ಟೆಗೆ ಅಗತ್ಯವಿರುವಷ್ಟು ಪ್ರಮಾಣ ಹಾಗೂ ಗುಣಮಟ್ಟದ ರೇಷ್ಮೆಯನ್ನು ದೇಶದಲ್ಲಿ ಉತ್ಪಾದಿಸಲು ಅಗತ್ಯವಿರುವ ವಿಶೇಷ ಹಿಪ್ಪುನೇರಳೆ ತಳಿಗಳು, ಉತ್ತಮ ಗುಣಮಟ್ಟದ ಮೊಟ್ಟೆ, ಹನಿ ನೀರಾವರಿ, ಪ್ರತ್ಯೇಕವಾದ ಹುಳು ಸಾಕಾಣಿಕೆ ಮನೆ, ತಾಂತ್ರಿಕತೆ ಇತ್ಯಾದಿ ಸೌಲಭ್ಯಗಳನ್ನು ನೀಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯೋಜನಾಬದ್ಧ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವಂತೆ ಮಧ್ಯ ಪ್ರವೇಶ ಮಾಡುವಂತೆ ಈ ಎರಡು ರೈತ-ಕಾರ್ಮಿಕ ಸಂಘಟನೆಗಳು ರಾಜ್ಯಪಾಲರನ್ನು ಮನವಿಯಲ್ಲಿ ಆಗ್ರಹಿಸಿವೆ.

ಕೇಂದ್ರ ಸರ್ಕಾರಗಳ ಹೊಸ ಆರ್ಥಿಕ, ಕೃಷಿ ಧೋರಣೆಗಳಿಂದ ಸಾಮಾನ್ಯ ರೈತರಿಗೆ

ಪುಟ 2 ನೋಡಿ

ವಾರದ ನುಡಿ

"ಗೃಹಮಂತ್ರಿಗಳು ಶಾಂತಿಯ ಭರವಸೆ ನೀಡಲಾರರು, ಶಾಂತಿಗಾಗಿ ಯಾಚಿಸಬಲ್ಲರು ಎಂಬುದರ ಸಂಕೇತ ಇದು. ಭೂಗತ ದೊರೆ ದಾವೂದ್ ಇಬ್ರಾಹಿಂನೊಂದಿಗೂ ಶ್ರೀಯುತ ಅಡ್ವಾಣಿ ಇಂತಹ ವ್ಯವಹಾರ ಕುದುರಿಸುತ್ತಾರೆಯೇ?"

ಮಾಜಿ ಪ್ರಧಾನಿ ವಿ.ಪಿ.ಸಿಂಗ್

ರಪ್ತುಮಾಯೆ ಕಂಡಿರಾ?

ನಮ್ಮ ಕರ್ನಾಟಕದವರೇ ಆದ ಖ್ಯಾತ ಅರ್ಥಶಾಸ್ತ್ರಜ್ಞರಾದ ಡಾ. ಡಿ.ಎಂ. ನಂಜುಂಡಪ್ಪ ಹೇಳಿದ ಮಾತಿದು. ಉದಾರೀಕರಣಕ್ಕೂ ಹೂಂ ಸಮಾಜವಾದಕ್ಕೂ ಹೂಂ ಎಂಬಂತೆ ಇದ್ದ ನಂಜುಂಡಪ್ಪನವರು ಭಾರತ ರಫ್ತಿನ ಮೇಲೆ ಅತಿಯಾಗಿ ಅವಲಂಬಿಸು ವುದು ಸರಿಯಲ್ಲ ಎಂದಿದ್ದಾರೆ. ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಸಂಸ್ಥೆಯ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಮಾತನಾಡುತ್ತಿದ್ದ ಡಾ. ನಂಜುಂಡಪ್ಪ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮುಂದಿನ ಮೂರು ತಿಂಗಳುಗಳಲ್ಲಿ ಭಾರತ 1991 ರಲ್ಲಿ ಎದುರಿಸಿದಂತಹ ವ್ಯಾಪಾರ ಬಾಕಿ ಪರಿಸ್ಥಿತಿಯನ್ನು ಎದುರಿಸಲಿದೆ ಎಂದಿದ್ದಾರೆ.


ಕೃಷಿ ಬೆಳವಣಿಗೆ ದರ, ಔದ್ಯಮಿಕ ಬೆಳವಣಿಗೆ ದರ, ಬಂಡವಾಳ ಶೇಖರಣೆ ಮತ್ತು ರಫ್ತು ಬೆಳವಣಿಗೆ ದರ ಇವೆಲ್ಲವೂ ಈಗ ನೆಲ ನೋಡುತ್ತಿರುವುದರಿಂದ ಇಂತಹ ಪರಿಸ್ಥಿತಿ ಅನಿವಾರ್ಯವಾಗಿ ಉದ್ಭವಿಸಲಿದೆ ಎಂದಿದ್ದಾರೆ. ಒಟ್ಟಾರೆ ಬೆಳವಣಿಗೆ ಗುರಿ ಶೇ 7 ರಷ್ಟಿದ್ದರೂ ಆಗಿರುವ ಬೆಳವಣಿಗೆ ಬರೀ ಶೇ 5 ರಷ್ಟು ಎಂಬುದನ್ನು ಅವರು ಖೇದದಿಂದ ಎತ್ತಿ ತೋರಿದ್ದಾರೆ.

ಆಗ್ನೇಯ ಏಶಿಯಾದ ರಾಷ್ಟ್ರಗಳ ಆರ್ಥಿಕ ಬಿಕ್ಕಟ್ಟುಗಳಲ್ಲಿ ಭಾರತಕ್ಕೆ ಹಲವು ಪಾಠಗಳಿವೆ ಎಂದು ಅವರು ಹೇಳಿದ್ದಾರೆ. ಅವರ ಪ್ರಕಾರ ಈ ಆಗ್ನೇಯ ಏಶಿಯಾದ ದೇಶಗಳು ಅತಿಯಾಗಿ ರಫ್ತಿನ ಮೇಲೆ ಅವಲಂಬಿಸಿದ್ದವು. ವಿದೇಶಿ ಬಂಡವಾಳದ ಮೇಲೂ ಅವು ಅತಿಯಾಗಿ ಅವಲಂಬಿಸಿದ್ದವು. ಹೀಗಿರುವಾಗ ವಿದೇಶಗಳಲ್ಲಿ ಆಗುವ ಅಲ್ಪ ಬದಲಾವಣೆಯೂ ತನ್ನ ಪರಿಣಾಮವನ್ನು ಈ ದೇಶಗಳ ಆರ್ಥಿಕದ ಮೇಲೆ ಬೀರಿತು. ಆದ್ದರಿಂದಲೇ ಅಂತಹ ಆರ್ಥಿಕ ಬಿಕ್ಕಟ್ಟು ಉಂಟಾಯಿತು.

ಶೇರು ಮಾರಾಟ ಮಾಡಲು ಒಂದು ಬೇರೆ ಸಂಸ್ಥೆ ಇದ್ದು ಸಾಮಾಜಿಕ ಭದ್ರತೆ ಯೋಜನೆಗಳ ನಿಧಿಯನ್ನು ರೂಪಿಸಬೇಕು. ಇಂತಹ ನಿಧಿಗೆ ಶೇರು ಮಾರಾಟದ ಹಣದಿಂದಲೂ ಒಂದು ಭಾಗವನ್ನು ಮೀಸಲಿಡಬೇಕು ಎಂದಿದ್ದಾರೆ.

ಹೀಗೆ ಉದಾರೀಕರಣ ಬಂದಾಗ ಸೋವಿಯತ್ ಯೂನಿಯನ್ನಿನ ವಿಘಟನೆಯಾದಾಗ ಬಂಡವಾಳಶಾಹಿ ವ್ಯವಸ್ಥೆಯೇ ಶ್ರೇಷ್ಠವಾದದ್ದೇನೋ ಎಂಬ ಸಂಶಯದ ಸುಳಿಯಲ್ಲಿ ಸಿಕ್ಕಿದವರೂ ಇಂದು ಅಂತಹ ಸುಳಿಯಿಂದ ಹೊರಗೆ ಬಂದು ಉದಾರೀಕರಣವನ್ನು ಪ್ರಶ್ನಿಸುವಂತಹ ಪರಿಸ್ಥಿತಿ ಉಂಟಾಗಿದೆ.

ರಫ್ತು, ವಿದೇಶಿ ಬಂಡವಾಳ ಇವೆಲ್ಲ ಮಾಯೆ ಎಂಬ ಅರಿವು ನಿಧಾನವಾಗಿ ಒಳಗಿಳಿಯುತ್ತಿದೆಯೇ?



ಪ್ರಾರಂಭವಾಗಿದೆ ಬಜೆಟ್ ನಾಟಕ

ಬಜೆಟ್ಟಿನ ನಾಟಕ ಆಗಲೇ ಆರಂಭವಾಗಿದೆ. 1999 ರ ಫೆಬ್ರವರಿ 27 ರಂದು ಬೆಳಿಗ್ಗೆ 11 ಗಂಟೆಗೆ ಲೋಕಸಭೆಯಲ್ಲಿ ಮಂಡಿತವಾಗಲಿರುವ 1999-2000 ರ ಬಜೆಟ್‌ಗಾಗಿ ಆಗಲೇ ತಯಾರಿಯನ್ನು ಪ್ರಾರಂಭಿಸಲಾಗಿದೆ. ಬಂಡವಾಳಿಗರ ವಿವಿಧ ಗುಂಪುಗಳು ಹಣಕಾಸು ಮಂತ್ರಿಗಳನ್ನು ಬೇಗನೇ ಭೇಟಿ ಮಾಡಿ ತಮ್ಮಗಳ ಲಾಭಕ್ಕಾಗಿ ಒತ್ತಡಗಳನ್ನು ಆಗಲೇ ಹೇರತೊಡಗಿದ್ದಾರೆ. ತೆರಿಗೆ ಕಡಿಮೆ ಮಾಡಿ, ಸುಂಕಗಳನ್ನು ಕಡಿಮೆ ಮಾಡಿ ಆ ಉದ್ದಿಮೆಗೆ ಪ್ರೋತ್ಸಾಹ ನೀಡಿ, ಈ ಉದ್ದಿಮೆಗೆ ಪ್ರೋತ್ಸಾಹ ನೀಡಿ ಎಂದೆಲ್ಲಾ ಬೇಡಿಕೆಗಳು ಹಣಕಾಸು ಮಂತ್ರಿಗಳಿಗೆ ಹೋಗುತ್ತಲಿವೆ. ಹಣಕಾಸು ಮಂತ್ರಿಗಳು ಈ ಬೇಡಿಕೆಗಳಿಗೆ ವಿರುದ್ಧವಲ್ಲ. ಆದರೂ ಈ ಬೇಡಿಕೆಗಳನ್ನು ಈಡೇರಿಸಲು ಕಾತುರರೇ.

ಬಿಜೆಪಿ ಸರ್ಕಾರ ಉದಾರೀಕರಣದ ಜನವಿರೋಧಿ ಕ್ರಮಗಳನ್ನು ಎಷ್ಟು ಮನಸಾರೆ ಜಾರಿಗೊಳಿಸಬಯಸುತಿದೆ ಎಂಬುದು ಈ ಬಜೆಟ್ಟಿನ ಅಜೆಂಡಾದಲ್ಲಿರುವ ವಿಷಯ ಗಳನ್ನು ಗಮನಿಸಿದರೆ ಗೊತ್ತಾಗುತ್ತದೆ.

ಬಜೆಟ್ ಅಧಿವೇಶನದಲ್ಲಿ ಹಲವು ಮಸೂದೆಗಳನ್ನು ಜಾರಿಗೆ ತರುವ ಹುನ್ನಾರವನ್ನು ಬಿಜೆಪಿ ಸರ್ಕಾರ ಮಾಡುತ್ತಿದೆ. ಇವುಗಳಲ್ಲಿ ಕೆಳಗಿನವುಗಳು ಸೇರಿವೆ.

- ವಿಮಾ ವಲಯದ ಉದಾರೀಕರಣ (ಮಸೂದೆಯನ್ನು ಹಣಕಾಸಿನ ಮೇಲಿನ ಸ್ಥಾಯಿ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಗಿದೆ)
- ಕಲ್ಲಿದ್ದಲು ವಲಯದ ಉದಾರೀಕರಣ (ಇನ್ನೂ ಈ ಮಸೂದೆ ಮಂಡಿತವಾಗಬೇಕು)
- ಅಲ್ಕಾ (ಅಂದರೆ ಅರ್ಬನ್ ಲ್ಯಾಂಡ್ ಸೀಲಿಂಗ್ ಅಂಡ್ ರೆಗುಲೇಷನ್ ಆಕ್ಟ್ ಅನ್ನು ಹಿಂತೆಗೆದುಕೊಳ್ಳುವುದು)
- ಹೊಸ ಫೆಮಾ ಮಸೂದೆ / ಹಣ ಪೋಲು ಮಸೂದೆ
- ಹೊಸ ಕೇಂದ್ರ ಸುಂಕ ಕಾಯಿದೆ ತರುವುದು
- ಸಣ್ಣ ಕೈಗಾರಿಕೆಗಳಿಗೆ ಮೀಸಲಾಗಿರುವ 10 ಉತ್ಪನ್ನಗಳ ಮೀಸಲಾತಿ ತೆಗೆದುಹಾಕುವುದು ಇತ್ಯಾದಿ.

ಈ ಎಲ್ಲಾ ಮಸೂದೆಗಳ ವಿರುದ್ಧ ಬಿಜೆಪಿ ಹಿಂದೆ ಧ್ವನಿಯೆತ್ತಿತ್ತು. ಅದು ವಿರೋಧ ಪಕ್ಷದಲ್ಲಿದ್ದಾಗ ಈ ಎಲ್ಲಾ ಮಸೂದೆಗಳನ್ನು ವಿರೋಧಿಸಿದ್ದರೂ ಈಗ ಅಧಿಕಾರದಲ್ಲಿರುವಾಗ ತಾನೇ ಮುಂದಾಗಿ ಈ ಮಸೂದೆಗಳನ್ನು ಪಾಸು ಮಾಡಿಸುವ ಹುನ್ನಾರದಲ್ಲಿ ಬಿಜೆಪಿ ಇದೆ.

ಜಾಗತಿಕ ಉಕ್ಕಿನ ವ್ಯಾಪಾರದ ಜಗಳ

ಭಾರತದ ಉಕ್ಕು ಉದ್ದಿಮೆ ಬಹಳ ಕಷ್ಟದಲ್ಲಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಜಾಗತಿಕವಾಗಿ ಉಕ್ಕಿನ ಪರಿಸ್ಥಿತಿ ಏನು? ಜಾಗತಿಕವಾಗಿಯೇ ಉಕ್ಕಿನ ವಿಷಯದಲ್ಲಿ ಬಿಕ್ಕಟ್ಟು ಇದ್ದೇ ಇದೆ. ಜಾಗತಿಕ ಬಿಕ್ಕಟ್ಟಿನ ಭಾಗವಾಗಿಯೇ ಭಾರತದ ಬಿಕ್ಕಟ್ಟು ಉಂಟಾಗಿರುವುದು ಎಂಬುದೇ ನಿಜ.

ಸಾಮ್ರಾಜ್ಯಶಾಹಿ ದೇಶಗಳಾದ ಅಮೆರಿಕ, ಜಪಾನ್ ಮತ್ತು ಯುರೋಪಿನ ದೇಶಗಳ ನಡುವೆ ಉಕ್ಕಿನ ಜಗಳ ತಾರಕಕ್ಕೇರಿದೆ.

ಏಶಿಯಾ ದೇಶಗಳ ಆರ್ಥಿಕ ಬಿಕ್ಕಟ್ಟಿನಿಂದಾಗಿ ಆ ದೇಶಗಳಿಗೆ ಉಕ್ಕು ರಫ್ತಾಗುವಂತಿಲ್ಲ. ಮುಖ್ಯವಾಗಿ ಜಪಾನಿನ ಉಕ್ಕಿಗೆ ಮಾರುಕಟ್ಟೆ ಇಲ್ಲದಂತಾಗಿ ಅದು ಅಮೆರಿಕದೊಳಕ್ಕೆ ಈ ಉಕ್ಕನ್ನು ರಾಶಿ ಹಾಕತೊಡಗಿದೆ. ಅಮೆರಿಕದ ಕಾಂಗ್ರೆಸ್ 300 ಮಿಲಿಯ ಡಾಲರುಗಳ ತೆರಿಗೆ ಕಡಿತವನ್ನು (ಉಕ್ಕಿನ ಮೇಲೆ) ಪ್ರಸ್ತಾಪಿಸಿದೆ.

ಜಪಾನಿನ ಉಕ್ಕು ರಫ್ತು ಬಿಕ್ಕಟ್ಟಿನ ಪೂರ್ವದಿನಗಳ ಮಟ್ಟಕ್ಕೆ ಇಳಿಯುತ್ತಿದೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸುತ್ತ ಅಮೆರಿಕ, ಇಲ್ಲವಾದರೆ ವಿಶ್ವ ವ್ಯಾಪಾರ ಸಂಸ್ಥೆಯ ನಿಯಮಗಳಿಗನುಗುಣವಾಗಿ ಕ್ರಮಗಳನ್ನು ಕೈಗೊಳ್ಳುವ ಬೆದರಿಕೆಯನ್ನು ಪರೋಕ್ಷವಾಗಿ ಹಾಕಿದೆ.

ಯುರೋಪು ಸಹ ಈ ಬಗ್ಗೆ ಪುಕಾರು ಮಾಡುತ್ತಿದೆ. ಜಪಾನಿನಿಂದ ಉಕ್ಕಿನ ರಫ್ತು ಅತಿಯಾಗಿ ಆಗುತ್ತಿರುವುದರಿಂದ ಸ್ವಲ್ಪ ಪ್ರಮಾಣವನ್ನು ತಾನು ಹೀರಿಕೊಳ್ಳಲು ಪ್ರಯತ್ನಿಸುತ್ತಿರುವುದಾಗಿ ಅದು ಹೇಳಿಕೊಂಡಿದೆ. ಅಮೆರಿಕ ಈ ಉಕ್ಕಿಗೆ ನೀಡುತ್ತಿರುವ ಸಹಾಯಧನ ವಿಶ್ವ ವ್ಯಾಪಾರ ಸಂಸ್ಥೆಯ ನಿಯಮದಡಿ ಪ್ರಶ್ನಾರ್ಹವಾಗಿದೆ ಎಂದಿದೆ.

ಯುರೋಪಿನ ಸಮುದಾಯ ಯುರೋಪಿನ ಕಮಿಷನ್ ಬಲ್ಗೇರಿಯಾ, ಭಾರತ, ಇರಾನ್, ದ.ಆಫ್ರಿಕಾ, ತೈವಾನ್ ಮತ್ತು ಯುಗೋಸ್ಲಾವಿಯಾಗಳಿಂದ ಉಕ್ಕಿನ ರಾಶಿ ಹಾಕಲಾಗುತ್ತಿರುವ ಬಗ್ಗೆ ತನಿಖೆ ಮಾಡುವುದನ್ನು ಸ್ವಾಗತಿಸಿದೆ.

ಔದ್ಯಮೀಕರಣಕ್ಕೆ ಅತ್ಯಂತ ಅವಶ್ಯವಾದ ಹಾಗೂ ಒಂದು ಮುಖ್ಯ ಸಂಪನ್ಮೂಲವಾದ ಉಕ್ಕು ಹೆಚ್ಚಿಗೆ ಉತ್ಪಾದನೆಯಾದರೂ ಬಂಡವಾಳ ಶಾಹಿ ಪದ್ಧತಿಯಲ್ಲಿ ಎಂತಹ ಬಿಕ್ಕಟ್ಟು ತರಬಲ್ಲುದೆಂಬುದಕ್ಕೆ ಒಳ್ಳೆಯ ಉದಾಹರಣೆ ಇದು.

ವಿದೇಶಿ ಬ್ಯಾಂಕುಗಳಲ್ಲೂ ಬರಡು ಆಸ್ತಿ

ಉದಾರೀಕರಣವಾದಿಗಳು ವಿದೇಶಿ ಬ್ಯಾಂಕುಗಳು ಸಕಲ ಸದ್ಗುಣಗಳ ಆಗರಗಳು ಎಂದು ಹೊಗಳುತ್ತಿರುತ್ತಾರೆ. ಈ ಬ್ಯಾಂಕುಗಳಲ್ಲಿ ಆಸ್ತಿಗಳ ಸಾಲಗಳ ಉತ್ತಮ ನಿರ್ವಹಣೆ ಇರುತ್ತದೆ ಎಂದು ಅವುಗಳನ್ನು ಆದರ್ಶವೆಂಬಂತೆ ಪರಿಗಣಿಸುತ್ತಾರೆ.

ಆದರೆ ವಿದೇಶಿ ಬ್ಯಾಂಕುಗಳಲ್ಲೂ ಅಪಾರ ಪ್ರಮಾಣದ ಬರಡು ಆಸ್ತಿಗಳು ಇವೆ ಎಂಬುದು ವಾಸ್ತವ. ಭಾರತೀಯ ಬ್ಯಾಂಕುಗಳಷ್ಟೇ ಪ್ರಮಾಣದಲ್ಲಿ ವಿದೇಶಿ ಬ್ಯಾಂಕುಗಳಲ್ಲಿ ಬರಡು ಆಸ್ತಿಗಳಿವೆ.

ಭಾರತೀಯ ರಿಸರ್ವ್ ಬ್ಯಾಂಕಿನ ಇತ್ತೀಚಿನ ಸಮೀಕ್ಷಾ ವರದಿಯೊಂದರ ಪ್ರಕಾರ ಕೆಲವು ವಿದೇಶೀ ಬ್ಯಾಂಕುಗಳಲ್ಲಿ ಬರಡು ಆಸ್ತಿಗಳ ಪ್ರಮಾಣ ದೊಡ್ಡದಾಗಿವೆ. ಅವುಗಳಲ್ಲಿ ಅಬುದಾಬಿ ಕಮರ್ಷಿಯಲ್ ಬ್ಯಾಂಕ್, ಬ್ಯಾಂಕ್ ಆಫ್ ಬಹ್ರೇನ್ ಅಂಡ್ ಕುವೈತ್, ಬಾಕ್ಲೆಗಿಸ್ ಬ್ಯಾಂಕ್ ಡ್ರೆಸ್ಡನರ್ ಬ್ಯಾಂಕ್ ಇತ್ಯಾದಿಗಳು ಈ ಪಟ್ಟಿಯಲ್ಲಿ ಸೇರಿಕೊಂಡಿವೆ.

ನಾಲ್ಕು ಗೋಡೆಗಳಿದ್ದರೆ ಮಾತ್ರ ಕಾರ್ಖಾನೆಯಾಗುವುದಿಲ್ಲ

ಇದನ್ನು ದೇಶದ ಸರ್ವೋಚ್ಚ ನ್ಯಾಯಾಲಯ ಒಂದು ಪ್ರಕರಣದ ತೀರ್ಪಿನಲ್ಲಿ ಹೇಳಿದೆ. ಕಾರ್ಖಾನೆ ಎಂದು ಕರೆಸಿಕೊಳ್ಳಬೇಕಾದರೆ ಅದು ನಾಲ್ಕು ಗೋಡೆಗಳು ಒಂದು ಸೂರಿನಡಿ ಇರಬೇಕೆಂಬುದು ಇಲ್ಲಿಯವರೆಗಿನ ತಿಳುವಳಿಕೆ ಯಾಗಿತ್ತು. ಅಥವಾ ಅಲಿಖಿತ ನಿಯಮ ವಾಗಿತ್ತು. ಇಂತಹ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಮಾತ್ರ ಕಾರ್ಖಾನೆಗಳ ಕಾಯಿದೆ ಅನ್ವಯವಾಗುತ್ತಿತ್ತು ಹಾಗೆಯೇ ಔದ್ಯಮಿಕ ವಿವಾದ ಕಾಯಿದೆಯೂ ಅನ್ವಯವಾಗುವುದು.

ಲಾಲ್ ಮೊಹಮ್ಮದ್ ಮತ್ತು ಭಾರತೀಯ ರೈಲ್ವೆ ನಿರ್ಮಾಣ ಕಂಪನಿ ನಿಯಮಿತದ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಅಂತಹ ತೀರ್ಪು ನೀಡಿದೆ. ಈ ತೀರ್ಪಿನ ಪ್ರಕಾರ ಕಾರ್ಖಾನೆ ಎನ್ನುವುದು ಒಂದೇ ನಿಯಮಿತ ನಿವೇಶನ ದಲ್ಲಿರಬೇಕಾದ ಅಗತ್ಯವೇನೂ ಇಲ್ಲ. ಹಾಗೆಯೇ ಉತ್ಪಾದನಾ ಪ್ರಕ್ರಿಯೆ ಎಂದರೆ ಯಾವುದೇ ಒಂದು ನಿರ್ದಿಷ್ಟ ಉತ್ಪನ್ನ ಇದರಿಂದ ಉತ್ಪಾದನೆ ಆಗಬೇಕೆಂದೇನೂ ಇಲ್ಲ.

ಈ ತೀರ್ಪಿನಿಂದಾಗಿ ರೈಲ್ವೆ ಹಳಿ ಹಾಕುವ, ವಿದ್ಯುತ್ ಲೈನ್ ಹಾಕುವ, ಪೈಪ್ ಲೈನ್‌ಗಳನ್ನು ಹಾಕುವ, ರಸ್ತೆ ನಿರ್ಮಿಸುವ ಕಾರ್ಮಿಕರೆಲ್ಲ ಕಾರ್ಖಾನೆಗಳ ಕಾಯಿದೆ ಮತ್ತು ಔದ್ಯಮಿಕ ವಿವಾದಗಳ ಕಾಯಿದೆ ಅನ್ವಯವಾಗುತ್ತದೆ.

ಈ ಪ್ರಕರಣದಲ್ಲಿ ಭಾರತೀಯ ರೈಲ್ವೆ ನಿರ್ಮಾಣ ಕಂಪನಿ ನಿಯಮಿತ ಕಾರ್ಮಿಕ ರನ್ನು 50 ಕಿಲೋ ಮೀಟರ್ ರೈಲ್ವೆ ಹಳಿ ನಿರ್ಮಿಸಲು ನೇಮಕ ಮಾಡಿ ಕೊಂಡಿತ್ತು. ನಿರ್ಮಾಣ ಮುಗಿದ ಕೂಡಲೇ ಕಾರ್ಮಿಕ ರನ್ನು ಕೆಲಸದಿಂದ ತೆಗೆದು ಹಾಕಲಾಗಿತ್ತು. ಕಾರ್ಮಿಕರು ಕೋರ್ಟಿಗೆ ಹೋದರು.

ರೇಷ್ಮೆ ಆಮದು ಆಜ್ಞೆ ತಕ್ಷಣ ವಾಪಸ್ಸಿಗೆ ರಾಜ್ಯಪಾಲರಿಗೆ ಮನವಿ

ಪುಟ 1 ರಿಂದ

ಕೃಷಿಯು ಶಾಪವಾಗಿರುವ ಪರಿಸ್ಥಿತಿಯಲ್ಲಿ ಮಾರುಕಟ್ಟೆಯ ವಿಪರೀತ ಏರಿಳಿತಗಳಿಗೆ ಗುರಿಯಾಗದ ರೇಷ್ಮೆ ಕೃಷಿಯು ರಾಜ್ಯದ ರೈತನಿಗೆ ಆಶಾದಾಯಕವೆನಿಸಿದೆ., ದೇಶದ ಒಟ್ಟು ರೇಷ್ಮೆ ಉತ್ಪಾದನೆಯಲ್ಲಿ ರಾಜ್ಯದ ಪಾಲು ಶೇ 45 ಇದ್ದು, ಕೋಲಾರ, ಬೆಂಗಳೂರು, ತುಮಕೂರು, ಮಂಡ್ಯ ಹಾಗೂ ಮೈಸೂರು ಇತ್ಯಾದಿ ಜಿಲ್ಲೆಗಳ ಸುಮಾರು ಮೂರುವರೆ ಲಕ್ಷ ಸಣ್ಣ ಮಧ್ಯಮ ವರ್ಗದ ಕುಟುಂಬಗಳಿಗೆ ರೇಷ್ಮೆ ಬೆಳೆಯೇ ಜೀವನ ಆಧಾರವಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ದೇಶದಲ್ಲಿ ಪ್ರಸ್ತುತ 14 ಸಾವಿರ ಮೆಟ್ರಿಕ್ ಟನ್ ರೇಷ್ಮೆ ಉತ್ಪಾದನೆಯಾಗುತ್ತಿದ್ದು, 24 ಸಾವಿರ ಮೆಟ್ರಿಕ್ ಟನ್ ಬೇಡಿಕೆ ಇದೆ. ಈ ಕೊರತೆ ನೀಗಿಸಲು ಮತ್ತು ಗುಣಮಟ್ಟದ ರೇಷ್ಮೆ ಪಡೆಯಲು ವಿದೇಶಗಳಿಂದ ಮುಖ್ಯವಾಗಿ ಚೀನಾದಿಂದ ಹಲವು ನಿಯಂತ್ರಣಗಳೊಂದಿಗೆ ಆಮದು ಮಾಡಿಕೊಳ್ಳಲಾಗುತ್ತಿತ್ತು. ವಿದೇಶಗಳಿಂದ ಕಳ್ಳ ಸಾಗಾಣಿಕೆ ಮೂಲಕವೂ ಕಚ್ಚಾ ರೇಷ್ಮೆ ಬರುತ್ತಿತ್ತು. ಆದರೆ ಕೇಂದ್ರ ಸರ್ಕಾರದ ಈ ಹೊಸ ಆಜ್ಞೆ ಯಾವುದೇ ನಿಯಂತ್ರಣವಿಲ್ಲದೆ ಆಮದು ಮಾಡಿಕೊಳ್ಳಲು ಅವಕಾಶ ನೀಡಿರುವುದರಿಂದ ದೇಶಿಯ ರೇಷ್ಮೆ ಬೆಲೆಯ ಕುಂಠಿತವಾಗಿ 30 ಲಕ್ಷ ರೇಷ್ಮೆ ಬೆಳೆಗಾರರ ಮತ್ತು ಲಕ್ಷಾಂತರ ನೇಕಾರರು ಮತ್ತು ಪವರ್ ಲೂಂ ಕಾರ್ಮಿಕರ ಜೀವನ ಆತಂಕಕ್ಕೆ ಗುರಿಯಾಗಿದೆ ಎಂದು ಮನವಿ ವಿವರಿಸಿದೆ.

ಮನವಿ ಸ್ವೀಕರಿಸಿದ ರಾಜ್ಯಪಾಲರು ಈ ಬಗ್ಗೆ ಕೇಂದ್ರ ವಾಣಿಜ್ಯ ಸಚಿವರ ಜೊತೆ ಸಮಾಲೋಚಿಸಿ ಸಮಸ್ಯೆ ಪರಿಹಾರಕ್ಕೆ ಯತ್ನಿಸುವ ಭರವಸೆ ನೀಡಿದ್ದಾರೆ.

ಈ ಮಧ್ಯೆ ದೇಶಕ್ಕೆ ಕೊರತೆಯಿರುವಷ್ಟು ಮಾತ್ರ ಆಮದು ಮಾಡಿಕೊಳ್ಳಲಾಗುವುದೆಂಬ ಕೇಂದ್ರ ವಾಣಿಜ್ಯ ಮಂತ್ರಿಗಳ ಹೇಳಿಕೆಯನ್ನು ರೈತ ಸಂಘ ಮತ್ತು ಸಿಐಟಿಯು ರಾಜ್ಯ ಸಮಿತಿ ಸ್ವಾಗತಿಸಿವೆ.

ಫೆಬ್ರವರಿ 12 ರಂದು ರಾಜ್ಯಮಟ್ಟದ ಸಮಾವೇಶ

ರೇಷ್ಮೆಕೃಷಿ ಮತ್ತು ಉದ್ದಿಮೆಯನ್ನು ಇನ್ನಷ್ಟು ವಿಸ್ತರಣೆಗೊಳಿಸಲು ಅಗತ್ಯವಿರುವ ನಿರ್ದಿಷ್ಟ ಕಾರ್ಯಯೋಜನೆಗಳನ್ನು ಕುರಿತು

ಕ್ರಿಕೆಟ್ ಪಿಚ್ ಮೇಲೆ ಶಿವಸೇನೆ ದಾಳಿ ಖಂಡಿಸಿ ಮಾನವ ಸರಪಳಿ

ದೆಹಲಿಯ ಫಿರೋಜ್ ಷಾ ಕೋಟ್ಲಾ ಕ್ರಿಡಾಂಗಣದ ಕ್ರಿಕೆಟ್ ಪಿಚ್‌ನ್ನು ಶಿವಸೇನೆಯ ದಾಂಡಿಗರು ಅಗೆದು ಹಾಳುಗೆಡವಿ, ಪಾಕಿಸ್ತಾನದ ಕ್ರಿಕೆಟ್ ತಂಡವು ಭಾರತ ಪ್ರವಾಸವನ್ನು ರದ್ದುಗೊಳಿಸುವಂತೆ ಬೆದರಿಕೆ ಒಡ್ಡಿರುವ ಶಿವಸೈನಿಕರ ಕೃತ್ಯವನ್ನು ಖಂಡಿಸಿ ಬೆಂಗಳೂರಿನಲ್ಲಿ ಜನವರಿ16 ರಂದು ಮಾನವ ಸರಪಳಿ ನಡೆಸಲಾಯಿತು.

ಭಾರತ ಪ್ರಜಾ ಸತ್ತಾತ್ಮಕ ಯುವಜನ ಫೆಡರೇಷನ್ ಭಾರತ ವಿದ್ಯಾರ್ಥಿ ಫೆಡರೇಷನ್ ಮತ್ತು ಅಖಿಲ ಭಾರತ ಜನ ವಾದಿ ಮಹಿಳಾ ಸಂಘಟನೆಗಳು ಸಂಘಟಿಸಿದ ಈ ಕಾರ್ಯಕ್ರಮದಲ್ಲಿ ಕ್ರೀಡಾ ಪಟುಗಳು, ಬುದ್ಧಿಜೀವಿಗಳು ಸೇರಿದಂತೆ ನೂರಾರು ಕ್ರಿಕೆಟ್‌ಪ್ರೇಮಿಗಳು ಮಹಾನಗರ ಪಾಲಿಕೆ ವೃತ್ತದಲ್ಲಿ ಮಾನವ ಸರಪಳಿ ರಚಿಸಿದರು. ಕ್ರೀಡೆಗಳು ದೇಶ ದೇಶಗಳ ನಡುವಿನ ಸೌಹಾರ್ದದ ಸಂಕೇತ ಇಂತಹ ಕ್ರೀಡೆಗಳಲ್ಲಿ ಕೋಮು ಭಾವನೆ ಬಿತ್ತಿ ಕ್ರಿಡಾ ಜಗತ್ತನ್ನು ವಿಭಜಿಸುವ ಹಾಗೂ ಭಾರತದ ಜಾತ್ಯಾತೀತ ಐಕ್ಯತೆಗೆ ಧಕ್ಕೆ ತರುವ ಶಿವಸೇನೆಯ ಈ ಹೇಯ ಕೃತ್ಯ ಖಂಡನೀಯ ಎಂದು ರಾಜ್ಯ ಡಿ.ವೈ.ಎಫ್.ಐ. ಕಾರ್ಯದರ್ಶಿ ಎಸ್. ವೈ. ಗುರುಶಾಂತ್ ಇಂತಹ ವಿಧ್ವಂಸಕ ಕೃತ್ಯಗಳಿಗೆ ಬಹಿರಂಗ ಪ್ರಚೋದನೆ ನೀಡುತ್ತಿರುವ ಬಾಳ ಠಾಕ್ರೆಯನ್ನು ಕೂಡಲೇ ಬಂಧಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಸ್ವಾತಂತ್ರ್ಯ ಹೋರಾಟದ ಆಶಯಗಳ ಬಗ್ಗೆ ಬಿಜೆಪಿಯ ಸರ್ಕಾರಕ್ಕೆ ಕನಿಷ್ಠ ಕಾಳಜಿಯು ಇಲ್ಲ. ಬದಲಾಗಿ ಅಲ್ಪ ಸಂಖ್ಯಾ ತರ ಮೇಲೆ ಚರ್ಚುಗಳ ಮೇಲೆ ದಾಳಿ ಮಾಡುತ್ತಿರುವ ಶಿವಸೇನೆಗೆ ಹಾಗೂ ಸಂಘ ಪರಿವಾರದ ದುಷ್ಕೃತ್ಯಗಳಿಗೆ ಬಿಜೆಪಿ ಸರ್ಕಾರ ನೇರ ಬೆಂಬಲ ನೀಡುತ್ತಿದೆ ಎಂದು ಆರೋಪಿ ಸಿದ ಎನ್.ಕೆ. ಉಪಧ್ಯಾಯ ಕಾರ್ಯಕ್ರಮದ ಸಂಘಟಕರನ್ನು ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಡಿ.ವೈ.ಎಫ್. ಐ.ನ ಗೋಪಾಲಕೃಷ್ಣ, ಶ್ರೀನಿವಾಸ್, ಎಸ್.ಎಫ್.ಐ.ನ ಬಸಮ್ಮ ರಮೇಶ್, ಜೆ.ಎಂ.ಎಸ್.ನ ಯಶೋಧ, ಡಿ.ವೈ.ಎಫ್. ಐ.ನ ರವಿಚಂದ್ರನ್ ಮೊದಲಾದವರು ಮಾತನಾಡಿದರು.

ಕಾಂ. ಹರಿಭಟ್ ನಿಧನ

ಸಿಪಿಐ(ಎಂ) ತಮಿಳುನಾಡು ರಾಜ್ಯ ಸಮಿತಿ ಸದಸ್ಯ ಕಾಂ. ಕೆ.ಎಂ.ಹರಿಭಟ್ 22.1.99 ರಂದು ನಿಧನರಾದರು. ಮೂಲತಃ ಕರ್ನಾಟಕದ ದ.ಕ. ಜಿಲ್ಲೆಯವರಾದ ಕಾಂ. ಹರಿಭಟ್ ತೆಲಂಗಾಣ ಹೋರಾಟ ಮತ್ತಿತರ ಹಲವು ಧೀರ ಹೋರಾಟಗಳಲ್ಲಿ ಭಾಗವಹಿಸಿದವರು ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ತಮಿಳುನಾಡು ರಾಜ್ಯಸಮಿತಿಗೆ ಕಳಿಸಿದ ಸಂತಾಪ ಸಂದೇಶಗಳಲ್ಲಿ ನೆನಪಿಸಿಕೊಂಡಿದೆ.

ಬೆಂಗಳೂರಿನಲ್ಲಿ ಶಿಕ್ಷಣ ಮತ್ತು ಕೋಮುವಾದ ಕುರಿತು ವಿಚಾರ ಸಂಕಿರಣ

ಬೆಂಗಳೂರಿನ ಯವನಿಕಾ ಸಮ್ಮೇಳನ ಸಭಾಂಗಣದಲ್ಲಿ ಜನವರಿ 28, 1999 ರಂದು ಮಧ್ಯಾಹ್ನ 3 ಗಂಟೆಯಿಂದ ಶಿಕ್ಷಣ ಮತ್ತು ಕೋಮುವಾದ ಕುರಿತು ವಿಚಾರ ಸಂಕಿರಣ ನಡೆಯಲಿದೆ. ಪಶ್ಚಿಮ ಬಂಗಾಳ ಶಿಕ್ಷಣ ಸಚಿವರಾದ ಶಾಂತಿ ಬಿಸ್ವಾಸ್, ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ, ಇತಿಹಾಸಕಾರರಾದ ಡಾ.ಎಸ್.ಚಂದ್ರಶೇಖರ್ ಹಾಗೂ ವಿಚಾರವಾದಿಗಳಾದ ಡಾ. ಜಿ.ರಾಮಕೃಷ್ಣ ಭಾಗವಹಿಸಲಿದ್ದಾರೆ. 'ಅಧ್ಯಯನ' ಇದನ್ನು ಏರ್ಪಡಿಸಿದೆ.

"ಉದ್ಯೋಗರಹಿತ ಬೆಳವಣಿಗೆ - ಕಾರ್ಮಿಕ ಚಳುವಳಿಗೆ ಮಾರಕ"

ಬಿಇಎಫ್ಐ 2 ನೇ ರಾಜ್ಯಸಮ್ಮೇಳನದಲ್ಲಿ ಡಾ|| ಎಂ.ಕೆ.ಪಂಧೆ

ದೇಶದ ಕಾರ್ಮಿಕ ವರ್ಗದ ಭಾಗವಾಗಿರುವ ಬ್ಯಾಂಕು ನೌಕರರು ಉದಾರೀಕರಣ ಮತ್ತು ಜಾಗತೀಕರಣದ ಫಲವಾಗಿ ಆಳುವ ಸರ್ಕಾರಗಳು ಒಡ್ಡುತ್ತಿರುವ ಧಾಳಿಗಳನ್ನು ಐಕ್ಯತೆಯಿಂದ ಹಿಮ್ಮೆಟ್ಟಿಸಬೇಕು ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ.ಪಂಧೆ ಕರೆ ನೀಡಿದರು.

16.1.99 ರಂದು ಬೆಂಗಳೂರು ಪುರಭವನದಲ್ಲಿ ಜರುಗಿದ ಬ್ಯಾಂಕ್ ಎಂಪ್ಲಾಯಿಸ್ ಫೆಡರೇಷನ್ ಆಫ್ ಇಂಡಿಯಾದ ಕರ್ನಾಟಕ ಘಟಕದ ಎರಡನೇ ಸಮ್ಮೇಳನವನ್ನು ಉದ್ಘಾಟಿಸಿ ಕಾಂ. ಪಂಧೆ ಮಾತನಾಡುತ್ತಿದ್ದರು.

ಉದ್ಯೋಗರಹಿತ ಬೆಳವಣಿಗೆ ಇದು ಉದಾರೀಕರಣದ ನೇತಾರರಾದ ಶ್ರೀಮಂತ ರಾಷ್ಟ್ರಗಳು ವಿಶ್ವ ಬ್ಯಾಂಕ್, ವಿಶ್ವ ವ್ಯಾಪಾರ ಸಂಘಟನೆ(ಡಬ್ಲ್ಯುಟಿಓ) ಮೊದಲಾದ ಸಂಘಟನೆಗಳ ಮೂಲಕ ಜಗತ್ತಿಗೆ ನೀಡುತ್ತಿರುವ ಬಳುವಳಿ ಎಂದು ಛೇಡಿಸಿದ ಪಂಧೆಯವರು ವಿಶ್ವ ಹಣಕಾಸು ಸಂಸ್ಥೆ (ಐಎಂಎಫ್) ಯ ಒಂದು ವರದಿಯನ್ನು ಉಲ್ಲೇಖಿಸುತ್ತಾ ಮುಂದುವರೆದ ರಾಷ್ಟ್ರಗಳಲ್ಲಿ ಕಾರ್ಮಿಕ ಸಂಘಗಳ ಸದಸ್ಯತ್ವವು ಕಡಿಮೆ ಆಗುತ್ತಿರುವುದನ್ನು ಉದಾಹರಣೆ ಸಹಿತ ವಿವರಿಸಿದರು. ಕಳೆದ ಮೂರು ವರ್ಷಗಳಲ್ಲಿ ಇಂಗ್ಲೆಂಡ್ ಒಂದರಲ್ಲೇ 10 ಲಕ್ಷದಷ್ಟು ಕಾರ್ಮಿಕ ಸಂಘಗಳ ಸದಸ್ಯತ್ವ ಕಡಿಮೆ ಆಗಿದೆ ಎಂದು ತಿಳಿಸುತ್ತಾ ಅಮೆರಿಕಾದಲ್ಲಿ ಶೇ 19 ರಷ್ಟು, ಫ್ರಾನ್ಸ್‌ನಲ್ಲಿ ಶೇ 15 ರಷ್ಟು ಕಾರ್ಮಿಕ ಸಂಖ್ಯೆ ಕಡಿಮೆ ಆಗಿದೆ ಎನ್ನುವ ವಿಸ್ಮಯಕಾರಿ ಪ್ರವೃತ್ತಿಯನ್ನು ಚಿತ್ರಿಸಿದರು.

ಉದಾರೀಕರಣದಿಂದಾಗಿ ಬಹುರಾಷ್ಟ್ರೀಯ ಕಂಪನಿಗಳು ಹೊಸ ಕಾರ್ಖಾನೆಗಳನ್ನು ತೆರೆದರೂ ಉದ್ಯೋಗವಕಾಶಗಳು ಹೆಚ್ಚುತ್ತಿಲ್ಲ. ಬದಲಿಗೆ ಅವುಗಳ ಪೈಪೋಟಿಯನ್ನು ಎದುರಿಸಲಾಗದೆ ದೇಶದಲ್ಲಿರುವ ಕೈಗಾರಿಕೆಗಳು ಮುಚ್ಚಿ ಕಾರ್ಮಿಕರು ಬೀದಿಪಾಲಾಗುತ್ತಿದ್ದಾರೆ. ಭಾರತ ದೇಶದ ಕಾರ್ಮಿಕ ವರ್ಗವು ಐಕ್ಯತೆಯಿಂದ ಈ ಧಾಳಿಯನ್ನು ಎದುರಿಸಬೇಕಾಗಿದೆ ಎಂದು ಹೇಳುತ್ತಾ ಡಿಸೆಂಬರ್ 11 ರ ಐತಿಹಾಸಿಕ ಮುಷ್ಕರ ಈ ನಿಟ್ಟಿನಲ್ಲಿ ಒಂದು ಪ್ರಮುಖ ಹೆಜ್ಜೆ ಎಂದು ವಿವರಿಸಿದರು.

ತಂತ್ರಜ್ಞಾನದಲ್ಲಿ ಆಗುತ್ತಿರುವ ಕ್ರಾಂತಿಕಾರಿ ಮುನ್ನಡೆಯನ್ನು ಸ್ವಾಗತಿಸಿದ ಕಾಂ. ಪಂಧೆ ಇದು ಸಾಮಾನ್ಯ ಜನರ ಬಡತನ ಹೋಗಲಾಡಿಸಲು ಸಹಾಯವಾಗಬೇಕೇ ಹೊರತು ಕೆಲವೇ ಕೋಟ್ಯಾಧಿಪತಿಗಳ ಲಾಭ ಹೆಚ್ಚಿಸುವುದಕ್ಕಲ್ಲ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಆರ್ಥಿಕ ಧೋರಣೆ ಮತ್ತು ಕೋಮುವಾದಿ ನೀತಿಗಳನ್ನು ಟೀಕಿಸಿದ ಕಾಂ. ಪಂಧೆ, ವಾಜಪೇಯಿಯವರು ವಿರೋಧ ಪಕ್ಷದ ನಾಯಕರಾಗಿದ್ದಾಗ ವಿಮಾ ಮಸೂದೆಯನ್ನು ತೀವ್ರವಾಗಿ ವಿರೋಧಿಸಿದ್ದು, ಇದೀಗ ವಿದೇಶಿ ಹಣಕಾಸು ಸಂಸ್ಥೆಗಳ ಒತ್ತಡಕ್ಕೆ ಮಣಿದು ಅವರ ಸರಕಾರವೇ ಮಸೂದೆಯನ್ನು ಜಾರಿಗೆ ತರುತ್ತಿರುವುದು ರಾಜಕೀಯ ವಿಪರ್ಯಾಸ ಎಂದು ಟೀಕಿಸಿದರು. ಸಂಘ ಪರಿವಾರದವರು ಅಲ್ಪಸಂಖ್ಯಾತರ ಮೇಲೆ ನಡೆಸುತ್ತಿರುವ ಧಾಳಿ ಹಾಗೂ ಅದಕ್ಕೆ ಬಿಜೆಪಿ ಸರ್ಕಾರದ ಪರೋಕ್ಷ ಬೆಂಬಲವನ್ನು ಟೀಕಿಸುತ್ತಾ ದೇಶದ ಐಕ್ಯತೆಯ ದೃಷ್ಟಿಯಿಂದ ಕೋಮುವಾದವನ್ನು ಬುಡಮಟ್ಟ ತೊಲಗಿಸಬೇಕು ಎಂದು ಬ್ಯಾಂಕು ನೌಕರರಿಗೆ ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಬಂದ ಬಿಇಎಫ್ಐ ನ ಅಖಿಲ ಭಾರತ ಜಂಟಿ ಕಾರ್ಯದರ್ಶಿ ಜಿ.ಎಂ.ವಿ.ನಾಯಕ್ ಬ್ಯಾಂಕ್ ಮೂಲಕ ನೌಕರ ವಿರೋಧಿ ಧೋರಣೆಯನ್ನು ಟೀಕಿಸುತ್ತಾ 18000 ಕೋಟಿ ರೂಪಾಯಿ ಬಂಡವಾಳ ವಿನಿಯೋಗಿಸಿ ಕಂಪ್ಯೂಟರ್ ಅಳವಡಿಸುವವರಿಗೆ ನೌಕರರಿಗೆ ವೇತನ ನೀಡಲು ಹಣವಿಲ್ಲ, ನಷ್ಟ ಆಗಿದೆ ಎಂದು ಹೇಳುವುದನ್ನು ಖಂಡಿಸಿದರು.

ಬ್ಯಾಂಕ್ ನೌಕರರ ಇನ್ನೊಬ್ಬ ಮುಖಂಡ ಕಾ. ಎಂ.ಎಸ್.ಎನ್. ರಾವ್ ಮಾತನಾಡಿ ಕರ್ನಾಟಕದಲ್ಲಿ ಬಿಇಎಫ್ಐ ಸಂಘಟನೆಯನ್ನು ಬೆಳೆಸಲು, ನೌಕರರಲ್ಲಿ ಜಾಗೃತಿ ಮೂಡಿಸಲು ಶಕ್ತಿಮೀರಿ ದುಡಿಯಬೇಕೆಂದು ಕರೆ ನೀಡಿದರು.

ಬಿಇಎಫ್ಐ ನ ಕರ್ನಾಟಕ ಘಟಕದ ಅಧ್ಯಕ್ಷ ಶ್ರೀನಿವಾಸಬಾಬು ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷ ಸ್ವಾತಂತ್ರ್ಯ ಹೋರಾಟಗಾರ ಕಾಂ. ಎನ್.ಕೆ.ಉಪಾಧ್ಯಾಯ ಸ್ವಾಗತಿಸಿದರು.

ಸಿಐಟಿಯು ಪರವಾಗಿ ಶುಭಕೋರಿ ಮಾತನಾಡಿದ ಕಾಂ. ಎಸ್.ಸೂರ್ಯನಾರಾಯಣ ರಾವ್ ಬ್ಯಾಂಕ್ ನೌಕರರು ತಮ್ಮ ಬೇಡಿಕೆಗಳಿಗಾಗಿ ಹೋರಾಡುವಾಗಲೇ ಆಳುವ ವರ್ಗದ ಆರ್ಥಿಕ ನೀತಿಗಳ ವಿರುದ್ಧ ಇತರೆ ಸಂಘಟನೆಗಳೊಂದಿಗೆ ಐಕ್ಯ ಹೋರಾಟವನ್ನು ಬಲಪಡಿಸಬೇಕೆಂದು ಕರೆ ನೀಡಿದರು.

ಗ್ರಾಮೀಣ ಬ್ಯಾಂಕ್ ನೌಕರರ ಸಂಘಟನೆಯ ಮುಖಂಡ ಗಣಪತಿ ಹೆಗಡೆ ಕಾರ್ಯಕ್ರಮ ನಿರೂಪಿಸಿದರೆ, ಬಿಇಎಫ್ಐ ರಾಜ್ಯ ಘಟಕದ ಉಪಾಧ್ಯಕ್ಷ ರತ್ನಾಕರ ಶೆಣೈ ವಂದನಾರ್ಪಣೆ ಮಾಡಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸ್ವಾಗತ ಸಮಿತಿಯ ಅಧ್ಯಕ್ಷ ಎನ್.ಕೆ. ಉಪಾಧ್ಯಾಯರನ್ನು ಈ ಸಂದರ್ಭದಲ್ಲಿ 10000ರೂ.ಗಳ ಒಂದು ಚೆಕ್ ಹಾಗೂ ಅವರ ಹೋರಾಟಗಳನ್ನು ಸ್ಮರಿಸಿಕೊಳ್ಳುವ ಒಂದು ಬಿನ್ನವತ್ತಳೆ ಅರ್ಪಿಸಿ ಸನ್ಮಾನಿಸಲಾಯಿತು. ಬಿಟಿಆರ್ ಸ್ಮಾರಕ ಟ್ರಸ್ಟಿಗೆ 50000ರೂ.ಗಳ ಕಾಣಿಕೆಯನ್ನು ಡಾ.ಪಂಧೆಯವರಿಗೆ ನೀಡಲಾಯಿತು.

ಉದ್ಘಾಟನಾ ಸಮಾರಂಭದ ಮೊದಲು ಮೈಸೂರು ಬ್ಯಾಂಕ್ ವೃತ್ತದಿಂದ ಪುರಭವನದ ವರೆಗೆ ಆಕರ್ಷಕ ಮೆರವಣಿಗೆ ನಡೆಯಿತು.

ಪ್ರತಿನಿಧಿಗಳ ಅಧಿವೇಶನ

ಜನವರಿ17ರಂದು ನಡೆದ ಅಧಿವೇಶನದಲ್ಲಿ 331 ಪ್ರತಿನಿಧಿಗಳು ಭಾಗವಹಿಸಿದರು.ಬಿಇಎಫ್ಐ ಕರ್ನಾಟಕ ಘಟಕದ ಪ್ರಧಾನ ಕಾರ್ಯದರ್ಶಿ ಎಸ್ ರೇವಣ್ಣನವರು ವಿವರವಾದ ಒಂದು ವರದಿಯನ್ನು ಮಂಡಿಸಿದರು. ಅಂತರಾಷ್ಟ್ರೀಯ, ರಾಷ್ಟ್ರೀಯ ಬೆಳವಣಿಗೆ ಗಳ ಹಿನ್ನಲೆಯಲ್ಲಿ ಭಾರತದ ಹಣಕಾಸು ರಂಗದ ಸ್ಥಿತಿ-ಗತಿ,ಬ್ಯಾಂಕಿಂಗ್ ವಲಯದಲ್ಲಿ ಸರಕಾರದ ಜನ ವಿರೋಧಿ ನೀತಿಗಳ ವಿರುದ್ಧ ಬ್ಯಾಂಕು ನೌಕರರ ಹೋರಾಟಗಳ ವಿಮರ್ಶೆ ನಡೆಸಿ, ಸಂಘಟನೆಯ ಮುಂದಿರುವ ಕಾರ್ಯಭಾರಗಳನ್ನು ವಿಶ್ಲೇಷಿಸಿದ ಈ ವರದಿಯ ಮೇಲೆ 17 ಪ್ರತಿನಿಧಿಗಳು ಮಾತನಾಡಿದರು.

ಸಮ್ಮೇಳನ ವೇತನ ಪರಿಷ್ಕರಣೆ, ಗ್ರಾಮೀಣ ಬ್ಯಾಂಕ್‌ನೌಕರರ ಹೋರಾಟ, ಮಹಿಳಾ ಮೀಸಲಾತಿ, ಸಂಘಟನಾ ಕರ್ತವ್ಯಗಳು ಮತ್ತು ಇತರ ನಿರ್ಣಯಗಳನ್ನು ಅಂಗೀಕರಿಸಿತು.

ಬಿ.ಇ.ಎಫ್. ಐ.ನ ಕರ್ನಾಟಕ ಘಟಕದ ಎರಡನೇ ರಾಜ್ಯಸಮ್ಮೇಳನ ಆರಿಸಿದ ಹೊಸ ಪದಾಧಿಕಾರಿಗಳ ವಿವರ ಹೀಗಿದೆ.

ಅಧ್ಯಕ್ಷರು: ಕೆ. ಶ್ರೀನಿವಾಸ್ ಬಾಬು
ಉಪಾಧ್ಯಕ್ಷರು: ಎಮ್. ಆರ್.ಶೆಣೈ, ಗಣಪತಿ ಹೆಗ್ಡೆ
ಎಮ್.ಜಿ.ಅರುಣ ಕುಮಾರ್
ಪ್ರಧಾನ ಕಾರ್ಯದರ್ಶಿ: ಎಸ್.ರೇವಣ್ಣ
ಜೊತೆ ಕಾರ್ಯದರ್ಶಿಗಳು :ಹೆಚ್. ನಾಗಭೂಷಣ ರಾವ್, ರಾಮಮೂರ್ತಿ, ರಾಘವೇಂದ್ರ ರಾವ್
ಖಜಾಂಚಿ: ಬಿ.ಕೆ.ರಾಜಣ್ಣ
ಉಪಖಜಾಂಚಿ: ಮಹೇಂದ್ರ ಕುಮಾರ್

ಬಿ.ಇ.ಎಫ್.ಐ. ನ ಅಖಿಲ ಭಾರತ 5ನೇ ಸಮ್ಮೇಳನ ಕೇರಳದ ಕೊಚ್ಚಿಯಲ್ಲಿ ಜನವರಿ 23ರಿಂದ 26ರವರೆಗೆ ನಡೆಯಲಿದೆ. ಕರ್ನಾಟಕದಿಂದ 60ಕ್ಕೂ ಹೆಚ್ಚು ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಲಿದ್ದಾರೆ. ಕೇರಳದ ಮುಖ್ಯಮಂತ್ರಿ ಇ.ಕೆ.ನಾಯನಾರ್ ರವರು ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ.

ಕರ್ನಾಟಕದಲ್ಲಿ ಕಳೆದವಾರ

ಶರತ್‌ಚಂದ್ರ

ಬಿಜೆಪಿಗೆ ನುಂಗಲಾರದ ತುತ್ತು

ರಾಜ್ಯ ಬಿಜೆಪಿಯಲ್ಲಿ 'ಗರ್ಭಗುಡಿ ಸಂಸತಿ' ಪ್ರಾರಂಭವಾಗಿದೆ ಎಂದು ಪಕ್ಷದ ಹಿರಿಯ ನಾಯಕ ಎಚ್.ಎನ್.ನಂಜೇಗೌಡರು ಬಹಿರಂಗವಾಗಿ ಟೀಕಿಸಿದ್ದು, ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಪಕ್ಷದ ಒಂದು ವಿಭಾಗ ಒತ್ತಾಯಿಸುತ್ತಿದೆ. ಹುಬ್ಬಳ್ಳಿಯಲ್ಲಿ ನಡೆಯಲಿರುವ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಯಲಿದೆ. ಆದರೆ ಈ ಪ್ರಕರಣ ಬಿಜೆಪಿ ರಾಜ್ಯ ಹಾಗೂ ರಾಷ್ಟ್ರೀಯ ನಾಯಕತ್ವಕ್ಕೆ ನುಂಗಲಾರದ ತುತ್ತಾಗಿದೆ. ಈ ಬಗ್ಗೆ ಶಿಸ್ತು ಕ್ರಮ ಕೈಗೊಂಡರೆ ಪಕ್ಷಕ್ಕೆ ಹಾನಿ ಆಗಬಹುದು ಎಂಬ ಆತಂಕ ಒಂದು ಕಡೆ, ಕ್ರಮ ಕೈಗೊಳ್ಳದಿದ್ದರೆ ಈ ಆಪಾದನೆ ಒಪ್ಪಿಕೊಂಡಂತಾಗುತ್ತದೆ ಎಂಬ ಭಯ ಇನ್ನೊಂದೆಡೆ. ಇತ್ತೀಚೆಗೆ ಮುಖ್ಯಮಂತ್ರಿ ನಿವಾಸದ ಮುಂದೆ ನಡೆದ ಪಕ್ಷದ ಶಾಸಕರು ನಡೆಸಿದ ಪ್ರತಿಭಟನಾ ಸಭೆಯಲ್ಲಿ ಅವರು ಭಾಗವಹಿಸಿಲ್ಲ. ಈ ಬಗ್ಗೆ ಅವರಿಗೆ 'ನೋಟೀಸ್' ನೀಡಬೇಕೆಂಬುದೂ ಪಕ್ಷದೊಳಗೆ ಚರ್ಚೆಯ ವಿಷಯವಾಗಿದೆ. 'ಗರ್ಭಗುಡಿ ಸಂಸತಿ' ಖಂಡಿತ ಇದೆ ಪಕ್ಷದಲ್ಲಿ ಎಂಬ ಹಿನ್ನೆಲೆಯಲ್ಲಿ ಇದು ಬಿಜೆಪಿಗೆ ನುಂಗಲಾರದ ತುತ್ತಾಗಿದೆ.

ಪಂಚಾಯ್ತಿ ಚುನಾವಣೆ ಮುಂದಕ್ಕೆ

ಗ್ರಾಮ ಪಂಚಾಯ್ತಿ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತರುವ ಪಂಚಾಯತ್ ರಾಜ್ ಕಾಯ್ದೆಗೆ ಅಗತ್ಯ ತಿದ್ದುಪಡಿ ತರಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ. ಇದರಿಂದಾಗಿ ಪಂಚಾಯ್ತಿ ಚುನಾವಣೆ ಫೆಬ್ರವರಿ - ಮಾರ್ಚ್‌ನಲ್ಲಿ ನಡೆಯಬೇಕಾಗಿದ್ದು ಮುಂದಕ್ಕೆ ಹೋಗುವುದು ಅನಿವಾರ್ಯವಾಗಿದೆ. ಹಿಂದೆ ಇದ್ದ ಮಂಡಲ ಪಂಚಾಯ್ತಿಗಳ ಮಾದರಿಗಳಲ್ಲಿ ಗ್ರಾಮ ಪಂಚಾಯ್ತಿಗಳನ್ನು ಪುನರ್ರಚಿಸುವುದು, ಅವರನ್ನು ಆರ್ಥಿಕವಾಗಿ ಆಡಳಿತಾತ್ಮಕವಾಗಿ ಸದೃಢಗೊಳಿಸಲು ಕ್ಷೇತ್ರಗಳ ಪುನರ್ವಿಂಗಡಣೆ - ಇವು ಸರ್ಕಾರದ ಉದ್ದೇಶವಂತೆ. ಈ ಎಲ್ಲದರ ಬಗ್ಗೆ ಕೆಲಸ ಪೂರ್ಣಗೊಳಿಸಿ ಹೊಸ ಕಾಯ್ದೆ ತಂದು, ಚುನಾವಣೆ ನಡೆಸಲು ಕಾಲಮಿತಿ ಸಂಪುಟ ನಿರ್ಧರಿಸಿಲ್ಲವಾದ್ದರಿಂದ ಪಂಚಾಯ್ತಿ ಚುನಾವಣೆ ಮುಂದಕ್ಕೆ ಹಾಕಲು ಇದು ನೆಪವೇ ಎಂಬ ಸಂಶಯಕ್ಕೆ ಆಸ್ಪದ ಕೊಡುತ್ತದೆ. ಈ ಉದ್ದೇಶಗಳು ನಿಜವಾಗಿದ್ದರೂ, ಇದನ್ನು ಸಾಕಷ್ಟು ಬೇಗನೇ ಕೈಗೆತ್ತಿಕೊಂಡು ಪಂಚಾಯ್ತಿ ಚುನಾವಣೆ ಕಾಲಕ್ಕೆ ಸರಿಯಾಗಿ ನಡೆಯುವಂತೆ ಮಾಡಲು ಸಾಧ್ಯವಿರಲಿಲ್ಲವೇ? ಎಂಬ ಪ್ರಶ್ನೆ ಏಳುತ್ತದೆ.

ಸಂಪುಟ ಸಭೆಯಲ್ಲೂ ಈ ನಿರ್ಧಾರಕ್ಕೆ ಸಚಿವ ಎಂ.ಪಿ.ಪ್ರಕಾಶ್ ಮಾತ್ರ ವಿರೋಧವಿದ್ದು ಅವರು ಸಭಾತ್ಯಾಗ ಸಹ ಮಾಡಿದರು ಎಂದು ವರದಿಯಾಗಿದೆ. ಜನತಾದಳ ರಾಜಕೀಯವಾಗಿ ಪಂಚಾಯ್ತಿ ಚುನಾವಣೆ ಎದುರಿಸಲು ಸಿದ್ಧವಾಗಿಲ್ಲ. ಪಂಚಾಯ್ತಿ ಚುನಾವಣೆಯ ಫಲಿತಾಂಶ, ಆಮೇಲೆ ನಡೆಯಬೇಕಾದ ವಿಧಾನಸಭಾ ಚುನಾವಣೆಗಳ ಮೇಲೆ ಪರಿಣಾಮ ಬೀರಬಹುದು ಎಂಬ ಆತಂಕ ಹೊಂದಿರುವಂತೆ ಕಾಣುತ್ತದೆ. ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಿ ಅವು ಕೆಲಸ ಮಾಡುವಂತೆ ಮಾಡಿದ್ದು, ಆಡಳಿತ ವಿಕೇಂದ್ರೀಕರಣವನ್ನು ಜಾರಿಗೊಳಿಸುವ ಪ್ರಮುಖ ಕ್ರಮ ಕೈ ಗೊಂಡಿದ್ದು ಕಾಂಗ್ರೆಸ್ಸಿನಿಂದ ಜನತಾದಳವನ್ನು ಪ್ರತ್ಯೇಕಗೊಳಿಸುವ ಪ್ರಗತಿಪರ ಅಂಶವಾಗಿತ್ತು. ಪಂಚಾಯ್ತಿ ಚುನಾವಣೆಗಳ ಬಗ್ಗೆ ಈಗಿನ ವಿಳಂಬ ನೀತಿ ಆ ಅಂಶವನ್ನು ಮಬ್ಬುಗೊಳಿಸುತ್ತದೆ.

ರೇಷ್ಮೆ ಮುಕ್ತ ಆಮದು ನೀತಿ ಬಗ್ಗೆ ರೇಷ್ಮೆ ಬೆಳೆಗಾರರ ವಿರೋಧ - ಸರ್ಕಾರದ ಪುನರ್‌ಪರಿಶೀಲನೆ

ರೇಷ್ಮೆ ಮುಕ್ತ ಆಮದು ನೀತಿಯನ್ನು ವಿರೋಧಿಸಿ ರೇಷ್ಮೆ ಬೆಳೆಗಾರರು ಕಳೆದ ವಾರ ನಡೆಸಿದ ಪ್ರತಿಭಟನಾ ಸಮಾವೇಶ ದೆಹಲಿಯಲ್ಲಿ ಈ ಬಗ್ಗೆ ಪುನರ್‌ಪರಿಶೀಲನೆಗೆ ದಾರಿ ಮಾಡಿಕೊಟ್ಟಿದೆ. ಪ್ರತಿಭಟನಾ ಸಮಾವೇಶದ ಬಳಿಕ ತಮ್ಮ ನಿವಾಸದ ಮೇಲೆ ನಡೆದ ಕಲ್ಲು ತೂರಾಟದ ಹಿನ್ನೆಲೆಯಲ್ಲಿ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ, ಜವಳಿ ಸಚಿವ ಕಾಶಿರಾಂ ರಾಣಾ ಜತೆ ಕೇಂದ್ರ ರೇಷ್ಮೆ ಮಂಡಳಿ ಅಧ್ಯಕ್ಷ ಏಕಾಂತಯ್ಯ ಮತ್ತು ಇತರ ಉನ್ನತ ಅಧಿಕಾರಿಗಳ ಜತೆ ಚರ್ಚೆ ನಡೆಸಿದರು.

1998 ರ ಅಕ್ಟೋಬರ್‌ನಲ್ಲಿ ದೇಶಕ್ಕೆ ಬರುತ್ತಿರುವ ಕಚ್ಚಾ ರೇಷ್ಮೆ ಕಳ್ಳ ಸಾಗಾಣಿಕೆಯನ್ನು ನಿಯಂತ್ರಿಸಲಾಗದೆ, ವಾಣಿಜ್ಯ ಸಚಿವಾಲಯ ಶೇ 40 ರಷ್ಟು ಆಮದು ಸುಂಕ ವಿಧಿಸಿ ಮುಕ್ತ ಆಮದು ನೀತಿಯನ್ನು ಜಾರಿಗೆ ತಂದಿತು. ಈ ನಿರ್ಧಾರದ ನಂತರವೂ ಶೇಕಡಾ 80 ರಷ್ಟು ಕಚ್ಚಾ ರೇಷ್ಮೆ ಉತ್ಪನ್ನ ಮಾಡುವ ಕರ್ನಾಟಕದಲ್ಲಿನ ಬೆಳೆಗಳ ಮೇಲೆ ಯಾವುದೇ ಹಾನಿ ಉಂಟು ಮಾಡಿಲ್ಲ ಎಂಬುದು ವಾಣಿಜ್ಯ ಸಚಿವಾಲಯದ ಹೇಳಿಕೆ. ರೇಷ್ಮೆ ಮುಕ್ತ ಆಮದು ನೀತಿ ರಾಜ್ಯದ ರೇಷ್ಮೆ ಬೆಳೆಗಾರರಿಗೆ ಹಾನಿ ಉಂಟು ಮಾಡುತ್ತದೆ ಎಂದು ಅವರ ವಾದ. ಇನ್ನೂ ಆ ಬಗ್ಗೆ ಯಾವುದೇ ನಿರ್ಧಾರಕ್ಕೆ ಸರ್ಕಾರ ಬಂದಿಲ್ಲ.

ಹೆಗಡೆ ನಿವಾಸದ ಮೇಲೆ ಧಾಳಿ - ಪ್ರತಿಭಟನೆ

ಹೆಗಡೆ ನಿವಾಸದ ಮೇಲೆ ಕಚ್ಚಾ ರೇಷ್ಮೆ ಬೆಳೆಗಾರರ ಪ್ರತಿಭಟನಾ ಸಮಾವೇಶ ನಂತರ ನಡೆದ ಕಲ್ಲು ತೂರಾಟ, ದಾಳಿಯ ಪ್ರಕರಣದ ಬಗ್ಗೆ ಪ್ರತಿಭಟಿಸಿ ಲೋಕಶಕ್ತಿಯ ಘಟಕಗಳು ಪ್ರದರ್ಶನಗಳನ್ನು ನಡೆಸಿದರು. ಈ ಹಲ್ಲೆಯ ಹಿಂದೆ ಮಾಜಿ ಪ್ರಧಾನಿ ದೇವೇಗೌಡರು ಹಾಗೂ ಅವರ ಮಕ್ಕಳು ಇದ್ದಾರೆ ಎಂದು ಲೋಕಶಕ್ತಿ ನೇರವಾಗಿ ಆಪಾದಿಸಿದೆ - ಯಾವುದೇ ಪುರಾವೆಗಳಿಲ್ಲದೆ. ದೇವೇಗೌಡರು ಈ ಆಪಾದನೆಯನ್ನು ತಳ್ಳಿ ಹಾಕಿದ್ದಾರೆ. ಪ್ರತಿಭಟನಾ ಸಮಾವೇಶದ ಸಂಚಾಲಕರೂ ರೇಷ್ಮೆ ಬೆಳೆಗಾರರ ಗುಂಪು ಈ ಪ್ರಕರಣದಲ್ಲಿ ಭಾಗವಹಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಈ ಘಟನೆಯ ಬಗ್ಗೆ ತನಿಖೆ ಆಗಬೇಕು ಎಂದೂ ಲೋಕಶಕ್ತಿ ಒತ್ತಾಯಿಸಿದೆ.

ರಾಜ್ಯ ಲೋಕಶಕ್ತಿಯಲ್ಲಿ ಮುಂಬರುವ ಚುನಾವಣೆಗಳ ಹಿನ್ನೆಲೆಯಲ್ಲಿ ಮುಂದೇನು? ಎಂಬ ಪ್ರಶ್ನೆ ಉಂಟಾಗಿದೆ. ಹೆಗಡೆ ರಾಜ್ಯ ರಾಜಕೀಯಕ್ಕೆ ಮರಳಬೇಕು ಎಂಬ ಒತ್ತಾಯ ಒಂದು ವಿಭಾಗದ್ದು. ಕೇಂದ್ರದಲ್ಲಿ ಬಿಜೆಪಿಯ ಜತೆ ಸಮಿಶ್ರ ಸರ್ಕಾರದಲ್ಲಿ ಭಾಗವಹಿಸಿದ್ದರಿಂದ ಜನರ ಆಕ್ರೋಶಕ್ಕೆ ಗುರಿಯಾಗಬಹುದು ಎಂಬ ಆತಂಕ ಇವರಲ್ಲಿ ಇದ್ದಂತಿದೆ. ರೇಷ್ಮೆ ಬೆಳೆಗಾರರ ಪ್ರತಿಭಟನಾ ಸಭೆಯ ಹಿನ್ನಲೆಯಲ್ಲಿ ರಾಜ್ಯದ ಜನರ ಹಿತಾಸಕ್ತಿಗಳಿಗೆ ಲೋಕಶಕ್ತಿ ಏನೂ ಮಾಡಿಲ್ಲ ಮಾತ್ರವಲ್ಲ, ಅದರ ಪ್ರತಿಕೂಲವಾಗಿ ವರ್ತಿಸುತ್ತಿದೆ ಎಂಬ ಧೋರಣೆ ಬರಬಹುದು ಎಂಬ ಭಯ ಕಾಡುವಂತಿದೆ. ಇದಲ್ಲದೆ ಹೆಗಡೆ ಬಿಟ್ಟರೆ ಇತರ ನಾಯಕತ್ವ, ಸಂಘಟನಾತ್ಮಕ ಬೆಳವಣಿಗೆಯ ಅಭಾವ ಲೋಕಶಕ್ತಿಯನ್ನು ದಿಕ್ಕೆಡಿಸಿದೆ.

ಕರ್ನಾಟಕದಲ್ಲಿ ಇತರ ವಿದ್ಯಮಾನಗಳು

● ಕರ್ನಾಟಕ ಸರ್ಕಾರ ಅಮೆರಿಕ ಮೂಲದ ಕೊಜೆಂಟ್ರಿಕ್ಸ್ ಕಂಪನಿಗೆ 4500 ಕೋಟಿ ರೂ. ಗಳ ವಿದ್ಯುತ್ ಸ್ಥಾವರದ ಗುತ್ತಿಗೆ ನೀಡಿರುವ ಪ್ರಕರಣಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಸಿಬಿಐ ತನಿಖೆ ಏರ್ಪಡಿಸಬೇಕು ಎಂಬ ಕರ್ನಾಟಕ ಹೈಕೋರ್ಟಿನ ತೀರ್ಪಿನ ವಿರುದ್ಧ ಸಲ್ಲಿಸಲಾದ ಅರ್ಜಿಗಳ ವಿಷಯದಲ್ಲಿ ಸುಪ್ರೀಂ ಕೋರ್ಟು ತೀರ್ಪು ಕಾಯ್ದಿರಿಸಿದೆ.

● ಬೀದರ್ ನಗರದ ಹೊಲವಲಯದಲ್ಲಿರುವ ರಾಷ್ಟ್ರೀಯ ಸ್ಮಾರಕವೊಂದರ ಬಳಿ ಕೆಲವು ಜನರು ಪ್ರಾರ್ಥನೆ ಮಾಡಲು ಅವಕಾಶ ಕೋರುತ್ತಿರುವ ಹಿನ್ನೆಲೆಯಲ್ಲಿ ವಿವಾದ ಉಂಟಾಗಿದೆ. ಮುಂಜಾಗ್ರತಾ ಕ್ರಮವಾಗಿ ಸ್ಮಾರಕದ 200 ಮೀಟರ್ ಸುತ್ತಮುತ್ತ 144ನೇ ಕಲಂ ವಿಧಿಸಲಾಗಿದೆ. ಊಹಿಸಬಹುದಾದಂತೆ ಈ ವಿವಾದವೂ ಬಿಜೆಪಿಯ ಚಿತಾವಣೆಯೇ. ಈ ಹಿನ್ನೆಲೆಯಲ್ಲಿ ಈಗಾಗಲೇ ಆತಂಕದ ವಾತಾವರಣ ನಿರ್ಮಾಣವಾಗಿದೆ.

● ದೇವದಾಸಿ ಪದ್ಧತಿಗೆ ಕುಪ್ರಸಿದ್ಧವಾಗಿರುವ ಶೊಂಡಿಹಾಳ ಜಾತ್ರೆಯಲ್ಲಿ ಕಳೆದ ರಾತ್ರಿ 50 ಮಂದಿ ಯುವತಿಯರ ಅರೆಬೆತ್ತಲೆ ಮೆರವಣಿಗೆ ನಡೆಯಿತು. ಅವರಿಗೆ ದೇವದಾಸಿಯರಾಗಿ 'ದೀಕ್ಷೆ' ನೀಡಲಾಯಿತು ಎಂದು ವರದಿಯಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ಲಿಂಗಸಗೂರು ತಹಶೀಲ್ದಾರರು ತನಿಖೆ ನಡೆಸುವಂತೆ ಆದೇಶಿಸಿದ್ದಾರೆ. ಜಿಲ್ಲಾಡಳಿತ ಈ ಅನಿಷ್ಟ ಪದ್ಧತಿಯನ್ನು ತಡೆಯುವಲ್ಲಿ ನಿಷ್ಕ್ರಿಯವಾಗಿದೆ ಎಂಬುದು ಸ್ಪಷ್ಟ.

● ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕೊಂಕಣಿ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯವು ಕೈಗೊಳ್ಳಲು ಉದ್ದೇಶಿಸಿರುವ ಮಹದಾಯಿ ನೀರಾವರಿ ಮತ್ತು ವಿದ್ಯುತ್ ಯೋಜನೆಗೆ ವಿರೋಧ ವ್ಯಕ್ತಪಡಿಸಿ ನಿರ್ಣಯವೊಂದನ್ನು ಕೈಗೊಂಡು ಇನ್ನೊಂದು ವಿವಾದ ಸೃಷ್ಟಿಯಾಗಿದೆ. ರಾಜಕೀಯ ಸ್ವರೂಪದ ಇಂಥ ನಿರ್ಣಯ ಅಂಗೀಕರಿಸುವುದರಿಂದ ಸಮ್ಮೇಳನದ ಅಖಿಲ ಭಾರತ ಸ್ವರೂಪಕ್ಕೆ ಧಕ್ಕೆ ಬರುತ್ತದೆ ಎಂದು ಕರ್ನಾಟಕದ ಪ್ರತಿನಿಧಿಗಳು ಪ್ರತಿಭಟಿಸಿ ವಾದಿಸಿದರೂ ಈ ನಿರ್ಣಯ ಅಂಗೀಕರಿಸಲಾಗಿದೆ. ಬೆಳಗಾವಿ ಜಿಲ್ಲೆಯಿಂದ ಮಲಪ್ರಭಾ ನದಿಗೆ ಮಹದಾಯಿ ನದಿಯ 9 ಟಿಎಂಸಿ ನೀರನ್ನು ತಿರುಗಿಸುವುದು ಈ ಯೋಜನೆಯ ಉದ್ದೇಶ. ಇದರಿಂದ ಗೋವಾ ರಾಜ್ಯದ ಜೀವನದಿಯಾದ ಮಾಂಡೋವಿಗೆ ಕಂಟಕವೊದಗುವ ಅಪಾಯ ಇದೆ, ಕರ್ನಾಟಕ ಸರ್ಕಾರ ಈ ಬಗ್ಗೆ ಮರುಚಿಂತನೆ ನಡೆಸಬೇಕು ಎಂದು ನಿರ್ಣಯದ ಸಾರಾಂಶ.

ಗಿರೀಶ್ ಕಾರ್ನಾಡರಿಗೆ ಜ್ಞಾನಪೀಠ ಪ್ರಶಸ್ತಿ ಸಿಪಿಐ(ಎಂ) ಅಭಿನಂದನೆ

[illegible]

ಹಲವು ವರ್ಷಗಳ ಕಾಲ ಧರ್ಮನಿರಪೇಕ್ಷತೆ, ಮತಾಂತರ ಇತ್ಯಾದಿಗಳ ಬಗ್ಗೆ ದೀರ್ಘ ಚರ್ಚೆ ನಡೆದ ಮೇಲೆಯೇ ಸ್ವತಂತ್ರ ಭಾರತ ಒಂದು ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ತಳಪಾಯದ ಮೇಲೆ ನಿಂತಿರಬೇಕೆಂಬ ಕಣ್ಣೋಟ ಮೂಡಿಬಂತು. ಈ ಕಣ್ಣೋಟದ ಆಧಾರದ ಮೇಲೆ ಸಂವಿಧಾನವನ್ನು ಅಂಗೀಕರಿಸುವುದರೊಂದಿಗೆ ಈ ಚರ್ಚೆ ಇತ್ಯರ್ಥಗೊಂಡಿತು. ೫೦ ವರ್ಷಗಳ ನಂತರ ಕಾವಿಪಡೆಗಳು ಈ ಪ್ರಶ್ನೆಯನ್ನು ಎತ್ತುತ್ತಿರುವುದು ಜನಗಳ ಗಮನವನ್ನು ಅವರ ವಾಸ್ತವಿಕ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯಲು, ದೇಶದ ಮೇಲೆ ತಮ್ಮ ದುಷ್ಟ 'ಹಿಂದೂರಾಷ್ಟ್ರ' ಯೋಜನೆಯನ್ನು ಹೇರಲು ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ.

ಸೀತಾರಾಂ ಯೆಚೂರಿ

ಕಾವಿಪಡೆಗಳಿಗೆ ಮತ್ತೊಮ್ಮೆ ರಾಷ್ಟ್ರೀಯ ಚರ್ಚೆ ಬೇಕಂತೆ. ಆಧುನಿಕ ಭಾರತದ ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಅಡಿಗಲ್ಲನ್ನು, ನಾಶಪಡಿಸಬೇಕೆಂದಿದ್ದಾಗಲ್ಲೆಲ್ಲಾ ಅವರು ಈ ದಾರಿ ಹಿಡಿಯುತ್ತಾರೆ.

ಹಿಂದೆ ಬಾಬ್ರಿ ಮಸೀದಿ ಧ್ವಂಸಕ್ಕೆ ಪೂರ್ವಭಾವಿಯಾಗಿ ನಡೆದ ಬೆಳವಣಿಗೆಗಳು ಮತ್ತು ಈಗಿನ ಬೆಳವಣಿಗೆಗಳಿಗೂ ಇರುವ ಸಾಮ್ಯ ನಿಜವಾಗಿಯೂ ನಡುಕ ಹುಟ್ಟಿಸು ವಂತದ್ದು. ಆಗಲೂ ಕಾವಿಪಡೆಗಳು ಧರ್ಮನಿರಪೇಕ್ಷತೆಯ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಬೇಕು ಎಂದಿದ್ದರು. 'ಖೋಟಾ ಧರ್ಮ ನಿರಪೇಕ್ಷತೆ', ಅಲ್ಪಸಂಖ್ಯಾತರ ತುಷ್ಟೀಕರಣ' ಇತ್ಯಾದಿ ಅಪಪ್ರಚಾರಗಳ ಮೂಲಕ ಜನಗಳಲ್ಲಿ ಭಾವೋದ್ರೇಕ ಹುಟ್ಟಿಸಿ ಅದರ ಬೆನ್ನ ಹಿಂದೆ ನಡೆದ ರಕ್ತಪಾತ ಈಗಲೂ ಮುಂದುವರಿಯುತ್ತಿದ್ದು ಭಾರತ ತಲೆತಗ್ಗಿಸುವ ಸ್ಥಿತಿ ಉಂಟು ಮಾಡಿದೆ.

ಈಗ ಕ್ರೈಸ್ತ ಕೋಮಿನ ಜನಗಳ ಮೇಲೆ ನಿರಂತರ ಧಾಳಿಗಳ ಹಿನ್ನೆಲೆಯಲ್ಲಿ ಮತಾಂತರದ ಬಗ್ಗೆ ರಾಷ್ಟ್ರೀಯ ಚರ್ಚೆಯಾಗಬೇಕು ಎನ್ನುತ್ತಿದ್ದಾರೆ. ಅಂದು ಧರ್ಮನಿರಪೇಕ್ಷತೆಯ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಬೇಕೆಂದಾಗ ಬಾಬ್ರಿ ಮಸೀದಿಯನ್ನು 'ವಿವಾದಿತ ಕಟ್ಟಡ' ಎಂದಂತೆ ಈಗ ಚರ್ಚುಗಳನ್ನು 'ಪ್ರಾರ್ಥನಾ ಸಭಾಂಗಣ' ಗಳು ಎನ್ನುತ್ತಿ ದ್ದಾರೆ. ಬಲವಂತದಿಂದ, ಆಸೆ- ಆಮೀಷಗಳನ್ನೊಡ್ಡಿ ಮತಾಂತರ ನಡೆಸಲಾಗುತ್ತಿದೆ ಎಂಬುದು ಈ ಕಾವಿಪಡೆ ಮಂದಿಯ ಆಪಾದನೆ.

ಮತಾಂತರ - ದೇಶಾಂತರ

ಆದರೆ ಇದೇ ಮಂದಿ ಅಮೆರಿಕದ ಪಾಶ್ಚಿಮಾತ್ಯ ಬದುಕಿನ ತಳಕು-ಬಳುಕಿನ ಆಸೆ-ಆಮಿಷಗಳಿಗೆ ಬಲಿಯಾಗಿ ಭಾರತದ ನಾಗರೀಕತ್ವವನ್ನು ತ್ಯಜಿಸಿ ಅಮೆರಿಕಾದ 'ಗ್ರೀನ್ ಕಾರ್ಡ್'ಗೆ ಹಾತೊರೆಯುವುದರ ಬಗ್ಗೆ ತುಟಿಪಿಟಿಕ್ಕೆನ್ನುವುದಿಲ್ಲವೇಕೆ! ವಾಸ್ತವವಾಗಿ ಈ ಮಂದಿ ಆರ್.ಎಸ್.ಎಸ್. ಭಾಷೆಯಲ್ಲಿ ಹೇಳುವುದಾದರೆ ತಮ್ಮ 'ಮಾತೃಭೂಮಿ, ಜನ್ಮಭೂಮಿ, ಪುಣ್ಯ ಭೂಮಿಗೆ" ವಿಶ್ವಾಸ ಘಾತ ಮಾಡಿ, 'ಭಾರತ ಮಾತೆ'ಗೆ ಕೈಕೊಟ್ಟು ತಮ್ಮ ದೇಶವನ್ನೇ ಬದಲಿಸ ಹೊರಟವರಲ್ಲದೇ 'ಸ್ವಂತ ಧರ್ಮವನ್ನು ಬಿಡುವುದನ್ನು ನಿಷೇಧಿಸಬೇಕಾದರೆ, ಸ್ವಂತ ದೇಶವನ್ನು ಬಿಡುವವರಿಗೂ ಅದು ಖಂಡಿತವಾಗಿಯೂ ಅನ್ವಯವಾಗಬೇಕಲ್ಲವೇ? ಆದರೆ ಈ ದೇಶಾಂತರಿಗಳೇ ಈಗ ಕಾವಿಪಡೆಗಳ ಅಂತರ್‍ರಾಷ್ಟ್ರೀಯ ಪ್ರತಿಗಾಮಿ ಬೆಂಬಲದ ಆಧಾರವಾಗಿರುವಾಗ ಹಾಗೆ ಮಾಡಲು ಹೇಗೆ ಸಾಧ್ಯ?

ಬುಡಕಟ್ಟು ಜನಗಳು ಹಿಂದೂಗಳೇನು?

ಅದಿರಲಿ, ಬುಡಕಟ್ಟು ಜನಗಳ ಮತಾಂತರ ಪ್ರಶ್ನೆಯನ್ನು ನೋಡೋಣ. ಆರ್ಥಿಕ ಬೆಳವಣಿಗೆ ಹಾಗೂ ಆಧುನೀಕರಣದ ಪ್ರಕ್ರಿಯೆಯಲ್ಲಿ ಹಲವು ಬುಡಕಟ್ಟು ಜನ ಸಾಮಾಜಿಕ ಬೆಳವಣಿಗೆಯ ಮುಖ್ಯ ಪ್ರವಾಹಕ್ಕೆ ಬರುತ್ತಾರೆ. ಈ ಪ್ರಕ್ರಿಯೆಯಲ್ಲಿ ಅವರ ಆಚಾರ-ವಿಚಾರಗಳು ಬದಲಾಗುತ್ತವೆ. ಅವರ ಮೂಲ ಬುಡಕಟ್ಟು ಧರ್ಮಗಳು, ಪೂಜಾ ವಿಧಾನಗಳೂ ಬದಲಾಗುತ್ತವೆ. ಮುಖ್ಯ ಪ್ರವಾಹದಲ್ಲಿನ ಧರ್ಮಗಳಲ್ಲಿ ಅವು ವಿಲೀನಗೊಳ್ಳುತ್ತವೆ ಅಥವಾ ಧರ್ಮ 'ಪರಿವರ್ತನೆ' ಮಾಡುತ್ತಾರೆ. ಭಾರತದಂತಹ ಬಹುಧರ್ಮೀಯ ದೇಶದಲ್ಲಿ ಕೆಲವರು ಹಿಂದೂ ಧರ್ಮ ಅಂಗೀಕರಿಸಬಹುದು, ಅಥವಾ ಕ್ರೈಸ್ತ, ಇಸ್ಲಾಮ್ ಮತ್ತಿತರ ಧರ್ಮಗಳನ್ನು ಅವಲಂಬಿಸ ಬಹುದು. ಬುಡಕಟ್ಟು ಕೋಮುಗಳು ಹಿಂದೂ ಧರ್ಮದ ಭಾಗವಾಗಿ ಬಿಟ್ಟ ಉದಾಹರಣೆಗಳು ಬಹಳ ಇವೆ.

ಪ್ರತಿಯೊಂದು ಬುಡಕಟ್ಟು ಕೂಡಾ ಹಿಂದೂ ಬುಡಕಟ್ಟು ಎಂಬುದು ಕಾವಿಪಡೆಗಳ ಅಪಪ್ರಚಾರದ ಒಂದು ಅಂಶ. ಹೀಗಿರುವಾಗ ಬುಡಕಟ್ಟು ಜನಗಳು ಕ್ರೈಸ್ತ ಧರ್ಮ ಸ್ವೀಕರಿಸುವುದನ್ನಷ್ಟೇ 'ಮತಾಂತರ' ಎನ್ನುವುದು ಹೇಗೆ?

ಇದು ಒಂದು ರೀತಿಯಾದರೆ, ಕೆಲವು ಹೊಸ ಧರ್ಮಗಳು ಮೂಡಿ ಬಂದಿವೆ. ಉದಾ: ಮಹಾವೀರ, ಗುರುನಾನಕ, ಬುದ್ಧರ ಬೋಧನೆಗಳಿಂದ. ಇದನ್ನು 'ಮತಾಂತರ' ಎನ್ನಬಹುದೇ? ವಾಸ್ತವವಾಗಿ ಬ್ರಾಹ್ಮಣ ಜಾತಿ ಪದ್ಧತಿಯ ದಮನದಿಂದ ವಿಮೋಚನೆ ಪಡೆಯಲು ಲಕ್ಷಾಂತರ ಮಂದಿ ಬೌದ್ಧ ಧರ್ಮ ಸ್ವೀಕರಿಸಿದರು. ಬ್ರಾಹ್ಮಣ ವ್ಯವಸ್ಥೆ ಈ ಬೌದ್ಧ ಧರ್ಮವನ್ನು ಧ್ವಂಸ ಮಾಡಲು ಸುಮಾರು ಒಂದು ಸಾವಿರ ವರ್ಷಗಳ ಕಾಲ ಸತತ ಪ್ರಯತ್ನ ನಡೆಸಿತು. ಕೊನೆಗೂ ಏಳನೇ ಶತಮಾನದ ವೇಳೆಗೆ ಬೌದ್ಧಧರ್ಮವನ್ನು ಭಾರತದ ಗಡಿಯಾಚೆ ಅಟ್ಟುವಲ್ಲಿ ಅದು ಯಶಸ್ವಿಯಾಯಿತು. ಈ ಪ್ರಕ್ರಿಯೆಯಲ್ಲಿ ಹಲವಾರು ಬೌದ್ಧ ವಿಹಾರಗಳು, ಭವ್ಯ ನಾಗರಿಕತೆಯ ಜ್ಞಾನ ಭಂಡಾರಗಳೂ ನಾಶವಾದವು.

ಅದೇ ರೀತಿ ಆಧುನಿಕ ಭಾರತೀಯ ಸಂವಿಧಾನದ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ತಮ್ಮ ದಲಿತ ಅನುಯಾಯಿಗಳೊಂದಿಗೆ ಬೌದ್ಧ ಧರ್ಮ ಸ್ವೀಕರಿಸಿದರು. ಹಿಂದೆ ಸ್ವತಃ ಸ್ವಾಮಿ ವಿವೇಕಾನಂದರೇ ಹೇಳಿದಂತೆ "ಮಹಮ್ಮದೀಯ ವಿಜಯ ದಲಿತರಿಗೆ, ಬಡವರಿಗೆ ಒಂದು ವಿಮೋಚನೆಯಾಗಿ ಬಂತು. ಆದ್ದರಿಂದಲೇ ನಮ್ಮ ಜನಗಳಲ್ಲಿ ಐದನೇ ಒಂದು ಭಾಗ ಮಹಮ್ಮದೀಯರಾದರು"

ಇತ್ಯರ್ಥವಾಗಿರುವ ಚರ್ಚೆ

ನಮ್ಮ ಸಂವಿಧಾನವನ್ನು ಅಂಗೀಕರಿಸುವ ಮೊದಲು ಹಲವು ವರ್ಷಗಳ ಕಾಲ ಧರ್ಮನಿರಪೇಕ್ಷತೆ, ಮತಾಂತರ ಇವುಗಳ ಬಗ್ಗೆ ದೀರ್ಘ ಚರ್ಚೆ ನಡೆದ ಮೇಲೆಯೇ ಸ್ವತಂತ್ರ ಭಾರತ ಒಂದು ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ತಳಪಾಯದ ಮೇಲೆ ನಿಲ್ಲಬೇಕೆಂಬ ಕಣ್ಣೋಟವನ್ನು ಸ್ವೀಕರಿಸಲಾಯಿತು. ಈ ಕಣ್ಣೋಟ ದೊಂದಿಗೇ ಈ ಚರ್ಚೆ ಇತ್ಯರ್ಥಗೊಂಡಿತು. ಆದರೆ ಕಾವಿ ಪಡೆಗಳು ತಮ್ಮ ದುಷ್ಟ 'ಹಿಂದೂರಾಷ್ಟ್ರ'ದ ರಾಜಕೀಯಕ್ಕಾಗಿ ಮತ್ತೆ ಇದನ್ನು ತೆರೆಯಬಯಸುತ್ತವೆ.

ಕಾವಿಪಡೆಗಳು ತಮ್ಮ ಈ ದುಷ್ಟ ಯೋಜನೆಯಲ್ಲಿ ಮುಸ್ಲಿಮರು, ಕ್ರಿಶ್ಚಿಯನ್ನರನ್ನು ಮಾತ್ರವೇ ಅಲ್ಲ, ಕಮ್ಯುನಿಸ್ಟರನ್ನೂ ತಮ್ಮ ಶತ್ರುವೆಂದು ಬಗೆಯುತ್ತಾರೆ. ಆರ್.ಎಸ್.ಎಸ್. ನ ಸರಸಂಘಚಾಲಕರಾಗಿದ್ದ ಗೋಲ್ವಲ್ಕರ್ ಮೂವರನ್ನು 'ಆಂತರಿಕ ಬೆದರಿಕೆ'ಗಳೆಂದು ಕರೆದಿದ್ದಾರೆ. ಕಮ್ಯುನಿಸ್ಟರ ಬಗ್ಗೆ ಅವರ ದ್ವೇಷಕ್ಕೆ ಒಂದು ಕಾರಣ ಅವರು ಧರ್ಮನಿರಪೇಕ್ಷತೆಯನ್ನು ಸದಾ ಎತ್ತಿ ಹಿಡಿಯುತ್ತಾರೆ ಎಂಬ ಬಗ್ಗೆ ಮಾತ್ರವೇ ಅಲ್ಲ, ಅವರು ಹಿಂದೂ ಧರ್ಮ ಬಿಟ್ಟು ನಾಸ್ತಿಕರಾದವರು ಎಂಬುದೂ ಅವರ ಆಪಾದನೆ. ಅವರ 'ಹಿಂದೂರಾಷ್ಟ್ರ'ದಲ್ಲಿ ಭಾರತೀಯ ತತ್ವಶಾಸ್ತ್ರದ ಪರಂಪರೆಯ ಅಭಿನ್ನ ಭಾಗವಾದ ಚಾರ್ವಾಕರು, ಲೋಕಾಯತರಿಗೂ ಸ್ಥಾನವಿಲ್ಲ.

ಹಿಂಸಾಚಾರವೇ ಅವರ ದಾರಿ

ಇನ್ನೊಂದು ವಿಚಾರ, ಈ ಅಸಹಿಷ್ಣು, ದಮನಕಾರೀ ಬ್ರಾಹ್ಮಣ ಸಮಾಜ ವ್ಯವಸ್ಥೆಯನ್ನು ಸ್ಥಾಪಿಸುವಲ್ಲಿ ಹಿಂಸಾಚಾರ ಕೂಡಾ ಅವರ ತತ್ವಶಾಸ್ತ್ರದ ಒಂದು ಅಭಿನ್ನ ಭಾಗ. ಗೋಲ್ವಲ್ಕರ್‌ರವರ ಪ್ರಕಾರ ಇದು ಸಮಾಜವನ್ನು 'ಗುಣಪಡಿಸುವ ಶಸ್ತ್ರಕ್ರಿಯೆಯ ಕತ್ತಿ' ಯಂತೆ! ಆದ್ದರಿಂದಲೇ ಹಲವಾರು ವರದಿಗಳು ಆರ್.ಎಸ್.ಎಸ್. ನೇರವಾಗಿ ಹಿಂಸಾಚಾರ ವನ್ನು ಬೋಧಿಸುತ್ತದೆ ಎಂದು ಆಪಾದಿಸಿದೆ. ಆ ವರದಿಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

- 1968 ರ ಅಹ್ಮದಾಬಾದ್ ಗಲಭೆಗಳನ್ನು ಕುರಿತಾದ ಜಗನ್ಮೋಹನ ರೆಡ್ಡಿ ಆಯೋಗ
- 1970 ರ ಭಿಮಂಡಿ ಗಲಭೆಗಳ ಕುರಿತಾದ ಡಿ.ಪಿ.ಮದನ್ ಆಯೋಗ
- 1971 ರ ತಲ್ಲಿಚೇರಿ ಗಲಭೆಗಳ ಕುರಿತಾದ ವಿದ್ಯಾತಿರ್ ಆಯೋಗ
- 1971 ರ ರಾಜಮಹೇರ್‌ಪುರ ಗಲಭೆಗಳ ಕುರಿತಾದ ಜಿತೇಂದ್ರ ನಾರಾಯಣ್ ಆಯೋಗ
- 1982 ರ ಕನ್ಯಾಕುಮಾರಿ ಗಲಭೆಗಳ ಕುರಿತಾದ ವೇಣುಗೋಪಾಲ್ ಆಯೋಗ
- 1992-93 ರ ಮುಂಬೈ-ಗಲಭೆಗಳ ಕುರಿತಾದ ಶ್ರೀ ಕೃಷ್ಣ ಆಯೋಗ.

ಈಗ ದೇಶ ಕಾಣುತ್ತಿರುವ ಕ್ರೈಸ್ತರ ಮೇಲಿನ ಧಾಳಿಗಳು ಕಾವಿಪಡೆಗಳು ಅಂಗೀಕರಿಸಿದ ಹಿಂಸಾಚಾರದ ದಾರಿಯ ಮುಂದುವರಿಕೆಗಳೇ. ಧರ್ಮನಿರಪೇಕ್ಷ

ಪುಟ 6 ನೋಡಿ

ಸಂವಿಧಾನ ಏನು ಹೇಳುತ್ತದೆ?

ನವೆಂಬರ್ 26, 1999 ರಂದು ಸಂವಿಧಾನ ಸಭೆ ಅಂಗೀಕರಿಸಿದ ನಮ್ಮ ಸಂವಿಧಾನ ಏನು ಹೇಳುತ್ತದೆ ನೋಡಿ -

ನಾವು, ಭಾರತದ ಜನತೆ ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ* ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣತಂತ್ರವಾಗಿ ರಚಿಸಲು ಮತ್ತು ಅದರ ಎಲ್ಲಾ ನಾಗರೀಕರಿಗೆ

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ;

ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು ಆರಾಧನೆಯ **ಸ್ವಾತಂತ್ರ್ಯ;**

ಸ್ಥಾನಮಾನ ಹಾಗೂ ಅವಕಾಶದ ಸಮಾನತೆ ಪಡೆಯಲು ಹಾಗೂ ಅವರೆಲ್ಲರ ನಡುವೆ **ಸೋದರತ್ವ**ವನ್ನು ಪ್ರೋತ್ಸಾಹಿಸಲು ವ್ಯಕ್ತಿಯ ಘನತೆ ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯ** ಭರವಸೆ ನೀಡಲು

ನಮ್ಮ ಸಂವಿಧಾನ ಸಭೆಯಲ್ಲಿ ಈ ನವೆಂಬರ್ 26, 1949 ರಂದು ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಶಾಸನವಾಗಿಸಿ ನಮಗೆ ನಾವು ಕೊಟ್ಟಿದ್ದೇವೆ.

ಹೀಗೆಂದೇ ಆರಂಭವಾಗುತ್ತದೆ ನಮ್ಮ ಸಂವಿಧಾನ ('ಸಮಾಜವಾದಿ ಧರ್ಮನಿರಪೇಕ್ಷ' ಎಂಬ ಪದಗಳನ್ನು ಹಾಗೂ ** 'ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯನ್ನು' ಎಂಬುದನ್ನು 1976 ರ 42ನೇ ಸಂವಿಧಾನ ತಿದ್ದುಪಡಿಯ ನಂತರ ಸೇರಿಸಲಾಯಿತು)*

ಧರ್ಮನಿರಪೇಕ್ಷತೆ ನಮ್ಮ ಸಂವಿಧಾನದ ಮೂಲಭೂತ ಅಂಶವೇ ಎಂಬ ಜಿಜ್ಞಾಸೆಗೂ ಈಗ ಆಧಾರವಿಲ್ಲ. 1994 ರ ಬೊಮ್ಮಾಯಿ ಮೊಕದ್ದಮೆಯಲ್ಲಿನ ತೀರ್ಪು ಇದನ್ನು ಸ್ಪಷ್ಟಪಡಿಸಿದೆ. (ಪುಟ 5 ರಲ್ಲಿ ಶ್ರೀರಾಮರೆಡ್ಡಿಯವರ ಲೇಖನ ನೋಡಿ)

ಇಷ್ಟೇ ಅಲ್ಲ, ಸಂವಿಧಾನದ ಪೀಠಿಕೆಯ ಭಾಗ III ರ 'ಮೂಲಭೂತ ಹಕ್ಕುಗಳು' ಎಂಬ ಅಧ್ಯಾಯದಲ್ಲಿ ಇದನ್ನು ಸ್ಪಷ್ಟಗೊಳಿಸಲಾಗಿದೆ. ಈ ಭಾಗದ ಕಲಮು 25 ರಿಂದ 30 ಇದನ್ನು ಇನ್ನಷ್ಟು ಸ್ಪಷ್ಟಪಡಿಸಿದೆ. ಆ ಕಲಮುಗಳನ್ನು ನಮ್ಮ ಓದುಗರಿಗಾಗಿ ಈ ಮುಂದೆ ಕೊಡುತ್ತಿದ್ದೇವೆ.

ಧಾರ್ಮಿಕ ಸ್ವಾತಂತ್ರ್ಯ

25. ಮನಸ್ಸಾಕ್ಷಿಯ ಮತ್ತು ಧರ್ಮದ ಮುಕ್ತ ಪ್ರತಿಪಾದನೆ, ಆಚರಣೆ ಮತ್ತು ಪ್ರಸಾರದ ಸ್ವಾತಂತ್ರ್ಯ

1. ಸಾರ್ವಜನಿಕ ವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯಕ್ಕೆ ಮತ್ತು ಈ ಭಾಗದ ಇತರ ಅಂಶಗಳಿಗೆ ಒಳಪಟ್ಟು ಎಲ್ಲಾ ವ್ಯಕ್ತಿಗಳಿಗೆ ಮನಸ್ಸಾಕ್ಷಿಯ ಸ್ವಾತಂತ್ರ್ಯ ಮತ್ತು ಧರ್ಮವನ್ನು ಮುಕ್ತವಾಗಿ ಪ್ರತಿಪಾದಿಸಲು, ಆಚರಿಸಲು ಮತ್ತು ಪಸರಿಸಲು ಸಮಾನ ಹಕ್ಕು ಇದೆ.

2. ಈ ಕಲಮಿನ ಯಾವ ಅಂಶವೂ ಈಗ ಅಸ್ತಿತ್ವದಲ್ಲಿರುವ ಯಾವುದೇ ಕಾನೂನನ್ನು ತಟ್ಟುವುದಿಲ್ಲ ಅಥವಾ ಪ್ರಭುತ್ವ

ಅ) ಧಾರ್ಮಿಕ ಆಚರಣೆಯೊಂದಿಗೆ ಸಂಬಂಧಪಟ್ಟಿರಬಹುದಾದ ಯಾವುದೇ ಆರ್ಥಿಕ, ಹಣಕಾಸು, ರಾಜಕೀಯ ಅಥವಾ ಇತರ ಧರ್ಮನಿರಪೇಕ್ಷ ಚಟುವಟಿಕೆಗಳನ್ನು ನಿಯಂತ್ರಿಸುವ ಅಥವಾ ಮಿತಿಗೊಳಿಸುವ;

ಆ) ಸಾಮಾಜಿಕ ಕಲ್ಯಾಣಕ್ಕೆ ಅವಕಾಶ ಒದಗಿಸುವ ಮತ್ತು ಸಾಮಾಜಿಕ ಸ್ವರೂಪದ ಹಿಂದೂ ಧಾರ್ಮಿಕ ಸಂಸ್ಥೆಗಳನ್ನು ಹಿಂದೂಗಳ ಎಲ್ಲಾ ವರ್ಗಗಳಿಗೆ ಮತ್ತು ವಿಭಾಗಗಳಿಗೆ ತೆರೆದುಕೊಡುವ ಶಾಸನವನ್ನು ಮಾಡಲು ಅಡ್ಡಿಯಾಗುವುದಿಲ್ಲ.

26. **ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸುವ ಸ್ವಾತಂತ್ರ್ಯ:** ಸಾರ್ವಜನಿಕ ವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯಕ್ಕೆ ಒಳಪಟ್ಟು ಪ್ರತಿಯೊಂದು ಧಾರ್ಮಿಕ ಪಂಗಡ ಅಥವಾ ಅದರ ಯಾವುದೇ ವಿಭಾಗಕ್ಕೆ

ಅ) ಧಾರ್ಮಿಕ ಮತ್ತು ಧರ್ಮಾರ್ಥ ಉದ್ದೇಶಗಳಿಗೆ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ನಡೆಸುವ

ಆ) ಧರ್ಮದ ವಿಷಯದಲ್ಲಿ ತನ್ನ ವ್ಯವಹಾರಗಳನ್ನು ತಾನೇ ನಿರ್ವಹಿಸುವ

ಇ) ಚರ ಮತ್ತು ಸ್ಥಿರಾಸ್ತಿಗಳ ಒಡೆತನದ ಮತ್ತು ಗಳಿಸುವ ಹಾಗೂ

ಈ) ಕಾನೂನಿನ ಪ್ರಕಾರ ಇಂತಹ ಆಸ್ತಿಯ ಆಡಳಿತ ನಡೆಸುವ ಹಕ್ಕು ಇರುತ್ತದೆ.

27. ಯಾವುದೇ ನಿರ್ದಿಷ್ಟ ಧರ್ಮದ ಪ್ರೋತ್ಸಾಹಕ್ಕೆ ತೆರಿಗೆ ತೆರುವುದಕ್ಕೆ ಸಂಬಂಧಪಟ್ಟ ಸ್ವಾತಂತ್ರ್ಯ:

ಯಾವುದೇ ತೆರಿಗೆಯ ಸಂಗ್ರಹ ಯಾವುದೇ ನಿರ್ದಿಷ್ಟ ಧಾರ್ಮಿಕ ಅಥವಾ ಧಾರ್ಮಿಕ ಪಂಗಡ ಪ್ರೋತ್ಸಾಹಕ್ಕೆ ಅಥವಾ ನಡೆಸುವ ಖರ್ಚಿಗೆ ತೆರಲು ನಿರ್ದಿಷ್ಟವಾಗಿ ಬಳಸುವಂತಿದ್ದರೆ ಅಂತಹ ಯಾವುದೇ ತೆರಿಗೆಯನ್ನು ತೆರಬೇಕೆಂದು ಯಾವುದೇ ವ್ಯಕ್ತಿಯನ್ನು ನಿರ್ಬಂಧಪಡಿಸತಕ್ಕದ್ದಲ್ಲ.

28. ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಬೋಧನೆ ಅಥವಾ ಧಾರ್ಮಿಕ ಆರಾಧನೆ ಹಾಜರಾತಿಗೆ ಸಂಬಂಧಪಟ್ಟ ಸ್ವಾತಂತ್ರ್ಯ:

(1) ಸಂಪೂರ್ಣವಾಗಿ ಪ್ರಭುತ್ವದ ಧನದಿಂದ ನಡೆಸುವ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಯಾವುದೇ ಧಾರ್ಮಿಕ ಬೋಧನೆ ನೀಡಲಾಗುವುದಿಲ್ಲ.

(2) ಪ್ರಭುತ್ವ ಆಡಳಿತ ನಡೆಸುವ, ಆದರೆ ಧಾರ್ಮಿಕ ಬೋಧನೆಯನ್ನು ನೀಡಲಾಗುವುದು ಎಂದು ವಿಧಿಸುವ ಯಾವುದೇ ಉಂಬಳಿ ಅಥವಾ ದತ್ತಿಯ ಪ್ರಕಾರ ಸ್ಥಾಪನೆಗೊಂಡ ಒಂದು ಶಿಕ್ಷಣ ಸಂಸ್ಥೆಗೆ ಈ ಮೇಲಿನ ಅಂಶ(1)ರ ಯಾವುದೂ ಅನ್ವಯವಾಗುವುದಿಲ್ಲ.

(3) ಪ್ರಭುತ್ವ ಮಾನ್ಯ ಮಾಡಿದ ಅಥವಾ ಪ್ರಭುತ್ವ ನಿಧಿಯಿಂದ ಅನುದಾನ ಪಡೆಯುವ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಹಾಜರಾಗುವ ಯಾವುದೇ ವ್ಯಕ್ತಿ ಆತ ಒಪ್ಪಿಗೆ ಕೊಟ್ಟಿರದಿದ್ದರೆ ಆತ ಅಪ್ರಾಪ್ತ ವಯಸ್ಕನಾಗಿದ್ದಲ್ಲಿ ಆತನ ಪಾಲಕ ಒಪ್ಪಿಗೆ ಕೊಟ್ಟಿರದಿದ್ದರೆ ಇಂತಹ ಸಂಸ್ಥೆಯಲ್ಲಿ ನೀಡುವ ಯಾವುದೇ ಧಾರ್ಮಿಕ ಬೋಧನೆಯಲ್ಲಿ ಪಾಲ್ಗೊಳ್ಳಬೇಕಾಗಿಲ್ಲ ಅಥವಾ ಇಂತಹ ಸಂಸ್ಥೆಯಲ್ಲಿ ಅಥವಾ ಅದಕ್ಕೆ ಲಗತ್ತಿಸಿದ ಯಾವುದೇ ಆವರಣದಲ್ಲಿ ಯಾವುದೇ ಧಾರ್ಮಿಕ ಆರಾಧನೆಯಲ್ಲಿ ಹಾಜರಾಗಬೇಕಾಗಿಲ್ಲ.

ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು

29. ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ-

(1) ಭಾರತದ ಯಾವುದೇ ಪ್ರದೇಶ ಅಥವಾ ಅದರ ಒಂದು ಭಾಗದಲ್ಲಿ ನೆಲೆಸಿರುವ ಒಂದು ತನ್ನದೇ ಆದ ಭಿನ್ನ ಭಾಷೆ, ಲಿಪಿ ಅಥವಾ ಸಂಸ್ಕೃತಿ ಹೊಂದಿರುವ ನಾಗರೀಕರ ಯಾವುದೇ ವಿಭಾಗ ಅವನ್ನು ಸಂರಕ್ಷಿಸಿಕೊಳ್ಳುವ ಹಕ್ಕು ಹೊಂದಿರುತ್ತದೆ.

(2) ಪ್ರಭುತ್ವ ನಡೆಸುವ ಅಥವಾ ಪ್ರಭುತ್ವದ ನಿಧಿಯಿಂದ ಅನುದಾನ ಪಡೆಯುವ ಯಾವುದೇ ಶಿಕ್ಷಣ ಸಂಸ್ಥೆಗೆ ಧರ್ಮ, ಜನಾಂಗ, ಜಾತಿ, ಭಾಷೆ ಅಥವಾ ಇವುಗಳಲ್ಲಿ ಯಾವುದಾದರೊಂದು ಆಧಾರದಲ್ಲಿ ಯಾವುದೇ ನಾಗರಿಕನಿಗೆ ಪ್ರವೇಶ ನಿರಾಕರಿಸತಕ್ಕದಲ್ಲ.

30. ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಹಾಗೂ ಆಡಳಿತ ನಡೆಸುವ ಅಲ್ಪಸಂಖ್ಯಾತರ ಹಕ್ಕು :

(1) ಧರ್ಮ ಅಥವಾ ಭಾಷೆಯ ಆಧಾರದಲ್ಲಿ ಅಲ್ಪಸಂಖ್ಯಾತರ ಎಲ್ಲರಿಗೂ ತಮ್ಮ ಆಯ್ಕೆಯ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಅದರ ಆಡಳಿತ ನಡೆಸುವ ಹಕ್ಕು ಇರುತ್ತದೆ.

1(ಅ) ಮೇಲಿನ (1) ರಲ್ಲಿ ಪ್ರಸ್ತಾಪಿಸಿದ ಅಲ್ಪಸಂಖ್ಯಾತರು ಸ್ಥಾಪಿಸಿದ ಮತ್ತು ಆಡಳಿತ ನಡೆಸುವ ಒಂದು ಶೈಕ್ಷಣಿಕ ಸಂಸ್ಥೆಯ ಯಾವುದೇ ಆಸ್ತಿಯನ್ನು ಕಡ್ಡಾಯವಾಗಿ ವಹಿಸಿಕೊಳ್ಳುವ ಯಾವುದೇ ಕಾನೂನು ಮಾಡುವಲ್ಲಿ ಪ್ರಭುತ್ವ ಇಂತಹ ಆಸ್ತಿಯನ್ನು ವಹಿಸಿಕೊಳ್ಳಲು ನಿರ್ಧರಿಸಿದ ಮೊತ್ತ ಅಥವಾ ಇಂತಹ ಕಾನೂನಿನಲ್ಲಿ ನಿರ್ಧರಿಸಿದ ಮೊತ್ತ ಈ ಕಲಮಿಲ್ಲಿ ಭರವಸೆ ನೀಡಿದ ಹಕ್ಕನ್ನು ಮಿತಗೊಳಿಸುವಂತದ್ದಾಗಲೀ ಅಥವಾ ರದ್ದು ಪಡಿಸುವಂತದ್ದಾಗಲೀ ಆಗಿರಬಾರದು.

(2) ಶೈಕ್ಷಣಿಕ ಸಂಸ್ಥೆಗಳಿಗೆ ಅನುದಾನ ನೀಡುವಲ್ಲಿ ಪ್ರಭುತ್ವ ಯಾವುದೇ ಶೈಕ್ಷಣಿಕ ಸಂಸ್ಥೆ ಧರ್ಮದ ಆಧಾರದ ಮೇಲಾಗಲಿ, ಭಾಷೆಯ ಆಧಾರದ ಮೇಲಾಗಲಿ ಒಂದು ಅಲ್ಪಸಂಖ್ಯಾತರ ನಿರ್ವಹಣೆಗೊಳಪಟ್ಟಿದೆ ಎಂಬ ಆಧಾರದಲ್ಲಿ ಅದರ ವಿರುದ್ಧ ಪಕ್ಷಪಾತ ಮಾಡಲಾಗದು.

ಸಂವಿಧಾನ ಮತ್ತು ಜಾತ್ಯಾತೀತತೆ

ಜಾತ್ಯಾತೀತತೆ ಅಥವಾ ಧರ್ಮನಿರಪೇಕ್ಷತೆ ನಮ್ಮ ಸಂವಿಧಾನದಲ್ಲಿ ಆರಂಭದಿಂದಲೂ ಅಂತರ್ಗತವಾಗಿದೆ. 1993 ರಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪು ಇದನ್ನು ಸಂದೇಹಕ್ಕೆ ಎಡೆಯಿಲ್ಲದಂತೆ ದೃಢಪಡಿಸಿದೆ. ಇವನ್ನೆಲ್ಲಾ ಗಾಳಿಗೆ ತೂರುತ್ತಿರುವ ಬಿಜೆಪಿ ನೇತೃತ್ವದ ಸರಕಾರ ಸಂವಿಧಾನದ ಹೆಸರಿನಲ್ಲಿ ಸಂವಿಧಾನವನ್ನು ಹೇಗೆ ನಗ್ನವಾಗಿ ಉಲ್ಲಂಘಿಸುತ್ತಿದೆ ಎಂದು ಈ ತೀರ್ಪಿನ ಹಿನ್ನೆಲೆಯಲ್ಲಿ ವಿವರಿಸುತ್ತಾರೆ ಸಿಪಿಐ(ಎಂ) ಶಾಸಕ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ವಿ.ಶ್ರೀರಾಮರೆಡ್ಡಿಯವರು ಇಲ್ಲಿ ಪರಿಶೀಲಿಸಿದ್ದಾರೆ

- ಜಿ.ವಿ.ಶ್ರೀರಾಮರೆಡ್ಡಿ

ನಮ್ಮ ದೇಶದಲ್ಲಿ ಬಹಳಷ್ಟು ಚರ್ಚೆಗೆ, ಜಿಜ್ಞಾಸೆಗೆ, ವಾದ-ವಿವಾದಗಳಿಗೆ ವಿಪರ್ಯಾಸಕ್ಕೆ ಮತ್ತು ವಿರೋಧಾಭಾಸಗಳಿಗೆ ಒಳಗಾಗಿರುವ ವಿಷಯವೆಂದರೆ 'ಜಾತ್ಯಾತೀತತೆ ಮತ್ತು ಜಾತ್ಯಾತೀತ ಭಾವನೆಗಳು'.

ಇಂದು ದೇಶದಲ್ಲಿನ ಬೆಳವಣಿಗೆಗಳನ್ನು ಗಮನಿಸಿದರೆ ದೇಶದ ಸಮಗ್ರತೆ ಮತ್ತು ಐಕ್ಯತೆಯ ಬಗ್ಗೆ ಕನಿಷ್ಟ ಕಾಳಜಿ ಇರುವ ಪ್ರತಿಯೊಬ್ಬ ನಾಗರೀಕನಿಗೂ ಗಂಭೀರವಾದ ಆತಂಕ ಉಂಟಾಗುತ್ತದೆ. ಹಲವಾರು ಶತಮಾನಗಳಿಂದಲೂ ಎಲ್ಲಾ ಧರ್ಮಗಳು ಸಮಾನವಾಗಿ ಬಾಳಿ ಬದುಕಿದ ಈ ದೇಶದಲ್ಲಿ ಧರ್ಮ-ಧರ್ಮಗಳ ಮಧ್ಯೆ, ಜಾತಿ-ಜಾತಿಗಳ ಮಧ್ಯೆ ಸ್ವಾರ್ಥಪರ ಕೋಮುವಾದಿ ಶಕ್ತಿಗಳು ಮತ್ತು ಮೂಲಭೂತವಾದಿ ಶಕ್ತಿಗಳು ಹುಟ್ಟು ಹಾಕಿದ ಬೆಂಕಿಯಲ್ಲಿ ಇಡೀ ದೇಶವೇ ಮಾರಣಹೋಮಕ್ಕೆ ಸಜ್ಜಾಗಿ ನಿಂತಂತೆ ಕಂಡು ಬರುತ್ತಿದೆ. ಬರಲಿರುವ ಮಹಾನ್ ದುರಂತಕ್ಕೆ ಕಾರಣಕರ್ತರಾರು? ಹೊಣೆಗಾರರು ಯಾರು? ಸಹಧರ್ಮ, ಸಹಬಾಳ್ವೆ ಎಂಬ ಭಾರತ ಸಂಸ್ಕೃತಿಯ ಮೂಲ ತತ್ವಗಳನ್ನು ರಕ್ಷಿಸಿ ಈ ದೇಶದ ಸಮಗ್ರತೆಯನ್ನು ರಕ್ಷಿಸುವವರಾರು? ಈ ದೇಶದ ಐಕ್ಯತೆ ಮತ್ತು ಸಮಗ್ರತೆಯ ರಕ್ಷಣೆಗೆ ಮೂಲಾಧಾರವಾದ ಜಾತ್ಯಾತೀತತೆಯನ್ನು ಎತ್ತಿ ಹಿಡಿಯುವವರ್‍ಯಾರು? ಇವು ದೇಶದ ಇಂದಿನ ಪ್ರಮುಖ ಮತ್ತು ಗಂಭೀರ ಪ್ರಶ್ನೆಗಳು.

1989 ರಿಂದ ಆರ್‌ಎಸ್‌ಎಸ್, ವಿಶ್ವಹಿಂದು ಪರಿಷತ್ ಮತ್ತು ಭಜರಂಗ ದಳಗಳು ಮತ್ತು ಅವುಗಳ ರಾಜಕೀಯ ಮುಖವಾಡವಾಗಿರುವ ಬಿಜೆಪಿಗಳು ಪ್ರಾರಂಭ ಮಾಡಿದ ಕೋಮುವಾದಿ ಧಾಳಿಗಳು ಈ ದೇಶದ ಸಾಂಸ್ಕೃತಿಕ ಇತಿಹಾಸವನ್ನು ವಿಕೃತಗೊಳಿಸುವುದರ ಜೊತೆಗೆ ವಿನಾಶಕ್ಕೆ ನಾಂದಿಯನ್ನು ಹಾಡಿವೆ. ಈ ಸಂಘ ಪರಿವಾರದ ರಾಜಕೀಯ ದುರಾಸೆಗೆ ಮತ್ತು ಸಾಂಸ್ಕೃತಿಕ ಐಕ್ಯತೆಯ ಹೆಸರಿನಲ್ಲಿ ದೇಶಕ್ಕೆ ಇಟ್ಟ ಕೊಳ್ಳಿ ಈ ದೇಶ ಮತ್ತು ಸಮಾಜದ ನರನಾಡಿಗಳನ್ನು ಭಸ್ಮ ಮಾಡುತ್ತಿದೆ.

1992 ರ ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ಈ ಸಂಘ ಪರಿವಾರದ ದುಷ್ಟ ಶಕ್ತಿಗಳು ದೇಶದ ಸಮಗ್ರತೆಯ ಮತ್ತು ಐಕ್ಯತೆಗೆ ಕೊಡಲಿ ಪೆಟ್ಟನ್ನು ಕೊಟ್ಟಿದ್ದೇ ಅಲ್ಲದೆ ಹಲವಾರು ದಶಕಗಳಿಂದ ದೇಶ ಕಾಯ್ದುಕೊಂಡು ಬಂದಿದ್ದ ಜಾತ್ಯಾತೀತ ತತ್ವಗಳಿಗೆ ಸವಾಲನ್ನು ಹಾಕಿ ಅವಹೇಳನವನ್ನು ಮಾಡಿತು. ದೇಶದಲ್ಲಿನ ಮತೀಯ ಭಾವನೆಗಳನ್ನು ಕೆರಳಿಸುವುದರ ಮುಖಾಂತರ ಮತೀಯ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಭಾವನೆಯನ್ನು ಹುಟ್ಟಿಸುವುದರ ಮುಖಾಂತರ ಅಧಿಕಾರಕ್ಕೆ ಬರಲು ಸತತ ಪ್ರಯತ್ನ ಮಾಡಿದ ಬಿಜೆಪಿ ಮತ್ತು ಸಂಘ ಪರಿವಾರಗಳು ದಶಕಗಳಿಂದ ದಿವಾಳಿಕೋರತನ ಮತ್ತು ಬೇಜವಾಬ್ದಾರಿ ರಾಜಕಾರಣವನ್ನೇ ತನ್ನ ಧೋರಣೆಯಾಗಿ ಇಟ್ಟುಕೊಂಡಿದ್ದ ಕಾಂಗ್ರೆಸ್ಸಿನ ಹೊಣೆಗೇಡಿತನದಿಂದಾಗಿ 1998 ರ ಮಾರ್ಚ್ ತಿಂಗಳಲ್ಲಿ ಕೋಮುವಾದಿ ಬಿಜೆಪಿ ಕೇಂದ್ರದಲ್ಲಿ ಕೊನೆಗೂ ಅಧಿಕಾರವನ್ನು ಪಡೆಯುವುದರಲ್ಲಿ ಯಶಸ್ವಿಯಾಯಿತು.

ಪ್ರತಿದಿನವೂ ಉಲ್ಲಂಘನೆ

ಸ್ಪಷ್ಟ ಬಹುಮತವಿಲ್ಲದಿದ್ದರೂ 24 ಪಕ್ಷಗಳ ನೆರವಿನಿಂದ ದೇವರ ಹೆಸರಿನಲ್ಲಿ ಪ್ರಮಾಣ ವಚನ ಮಾಡಿ ಸಂವಿಧಾನವನ್ನು ರಕ್ಷಿಸುತ್ತೇವೆಂದು ಅಧಿಕಾರಕ್ಕೆ ಬಂದ ಶ್ರೀ ವಾಜಪೇಯಿ ಅವರ ಸರ್ಕಾರ ಮತ್ತು ಅದರ ಕೆಲವು ಬೆಂಬಲಿತ ಪಕ್ಷಗಳು ಪ್ರತಿ ದಿನವೂ ಸಂವಿಧಾನ ಉಲ್ಲಂಘನೆಯನ್ನು ನಡೆಸುತ್ತಿವೆ. 1950 ರಲ್ಲಿ ಈ ದೇಶದ ಜನತೆ ಒಪ್ಪಿಕೊಂಡ ಸಂವಿಧಾನವು ಧರ್ಮ ನಿರಪೇಕ್ಷತೆಯನ್ನು ಎತ್ತಿ ಹಿಡಿದಿದೆ ಮತ್ತು ಜಾತ್ಯಾತೀತತೆಯನ್ನು ಮೂಲಭೂತ ತತ್ವವನ್ನಾಗಿ ರಕ್ಷಿಸಿದೆ. ಸಂವಿಧಾನವನ್ನು ರಚಿಸಲು ಡಾ।। ಬಿ.ಆರ್.ಅಂಬೇಡ್ಕರ್ ರವರ ನೇತೃತ್ವದಲ್ಲಿ ರಚಿಸಿದ ಸಂವಿಧಾನ ಸಭೆಯು ಬಹಳಷ್ಟು ದೀರ್ಘವಾಗಿ ಚರ್ಚಿಸಿ ಈ ಕೆಳಕಂಡಂತೆ ನಿರ್ಣಯವನ್ನು ಅಂಗೀಕರಿಸಿದೆ.

1. ದೇಶದಲ್ಲಿನ ಎಲ್ಲಾ ವಿಭಾಗದ ಜನತೆಯು ರಾಜಕೀಯ ಮತ್ತು ಆರ್ಥಿಕ ಸಮಾನ ಸ್ಥಾನವನ್ನು ಮತ್ತು ಅನಿಸಿಕೆಗಳನ್ನು ಹೊಂದಲು, ತನಗೆ ಅನ್ನಿಸಿದ್ದನ್ನು ಹೇಳಲು; ತನಗೆ ಇಷ್ಟಬಂದ ವಿಷಯಗಳ ಬಗ್ಗೆ ನಂಬಿಕೆಯನ್ನು ಇಟ್ಟುಕೊಳ್ಳಲು, ತನಗೆ ಇಷ್ಟಬಂದಿದ್ದನ್ನು ಆರಾಧಿಸಲು ಸಂವಿಧಾನ ಪ್ರಕಾರ ಸಮಾನರೆಂದೂ,
2. ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದ ವರ್ಗಗಳಿಗೆ ಸಾಕಷ್ಟು ರಕ್ಷಣೆಯನ್ನು ಕೊಡಲಾಗುವುದೆಂದೂ 1946 ಡಿಸೆಂಬರ್ ತಿಂಗಳ 13 ರಂದು ನಿರ್ಣಯುವನ್ನು ಅಂಗೀಕರಿಸಿದೆ.

ಸಂವಿಧಾನವನ್ನು ರಕ್ಷಿಸುತ್ತೇನೆಂದು ಪ್ರಮಾಣ ವಚನ ಸ್ವೀಕರಿಸಿ ಅಧಿಕಾರಕ್ಕೆ ಬಂದ ಮಾನ್ಯ ಶ್ರೀ ವಾಜಪೇಯಿ ಅವರು ಪ್ರತಿನಿತ್ಯವು ತಾವು ಮತ್ತು ತಮ್ಮ ಪಕ್ಷದ ಸರ್ಕಾರದಿಂದ ಹಾಗೂ ಮಿತ್ರ ಪಕ್ಷಗಳಿಂದ ಸಂವಿಧಾನದ ಉಲ್ಲಂಘನೆ ಆಗುತ್ತಿರುವುದರ ಬಗ್ಗೆ ಈ ದೇಶದ ಜನತೆಗೆ ಉತ್ತರ ಕೊಡಬೇಕಾಗಿದೆ.

ತನ್ನ ಪಕ್ಷವೇ ಅಧಿಕಾರದಲ್ಲಿರುವ ಗುಜರಾತ್‌ನಲ್ಲಿ ಕಳೆದ 4-5 ತಿಂಗಳಿನಿಂದ ಮತೀಯ ಅಲ್ಪಸಂಖ್ಯಾತರಾದ ಕ್ರಿಶ್ಚಿಯನ್ನರ ಮೇಲೆ ಮತ್ತು ಅವರ ಚರ್ಚುಗಳ ಮೇಲೆ ನಡೆಯುತ್ತಿರುವ ದಾಳಿಗಳು ಮತ್ತು ದಬ್ಬಾಳಿಕೆ ನಿಲ್ಲಿಸುವುದರಲ್ಲಿ ಶ್ರೀ ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಗುಜರಾತಿನಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ಸಂಪೂರ್ಣ ವಿಫಲವಾಗಿರುವುದರಿಂದ ಅವರು ಸಂವಿಧಾನಾತ್ಮಕವಾಗಿ ಅಧಿಕಾರ ನಡೆಸಲು ಅನರ್ಹರಲ್ಲವೇ?

ರಾಜಕೀಯ ದಿವಾಳಿಕೋರತನ

ಗಲಭೆಗ್ರಸ್ಥ ಗುಜರಾತ್ ರಾಜ್ಯಕ್ಕೆ ಭೇಟಿ ನೀಡಿದ ಮಾನ್ಯ ಪ್ರಧಾನ ಮಂತ್ರಿಗಳು ಸಂವಿಧಾನಬಾಹಿರವಾಗಿ, ಸಂವಿಧಾನಕ್ಕೆ ವಿರೋಧವಾಗಿ, ಮತೀಯ ಅಲ್ಪಸಂಖ್ಯಾತರ ಮೇಲೆ ಧಾಳಿ ನಡೆಸಿದ ಗುಜರಾತಿನ ಸರ್ಕಾರವನ್ನು ವಜಾ ಮಾಡುವುದರ ಬದಲು ಮತಾಂತರದ ಬಗ್ಗೆ ರಾಷ್ಟ್ರೀಯ ಚರ್ಚೆಯಾಗಬೇಕೆಂದು ಹೇಳಿ ತನ್ನ ರಾಜಕೀಯ ದಿವಾಳಿಕೋರತವನ್ನು ಪ್ರದರ್ಶಿಸಿದ್ದೇ ಅಲ್ಲದೆ ಸ್ವತಃ ಈ ದೇಶದ ಪ್ರಧಾನಿಗಳೇ 'ಸಂವಿಧಾನವನ್ನು ಉಲ್ಲಂಘನೆ ಮಾಡಿದ್ದಾರೆ. ಇವರಿಗೆ ಅಧಿಕಾರದಲ್ಲಿರಲು ನೈತಿಕ ಹಕ್ಕಿರಲಿ, ಕಾನೂನುಬದ್ಧ ಹಕ್ಕಿದೆಯೇ?

1992 ರ ಡಿಸೆಂಬರ್ ತಿಂಗಳ 6 ರಂದು ಬಾಬ್ರಿ ಮಸೀದಿಯನ್ನು ಕೆಡವಿದ ನಂತರ ದೇಶದ ಜನತೆಯು ಒತ್ತಡಕ್ಕೆ ಮಣಿದ ಅಂದಿನ ಕೇಂದ್ರ ಸರ್ಕಾರವು ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಹಿಮಾಚಲ ಪ್ರದೇಶ ಸರ್ಕಾರಗಳನ್ನು ವಜಾ ಮಾಡಿತ್ತು. ಕೇಂದ್ರ ಸರ್ಕಾರದ ಈ ಕ್ರಮವನ್ನು ಪ್ರಶ್ನಿಸಿ ಈ 3 ಸರ್ಕಾರಗಳು ಆಯಾ ರಾಜ್ಯಗಳ ಹೈಕೋರ್ಟುಗಳಲ್ಲಿ ಮೊಕದ್ದಮೆಗಳನ್ನು ಸಲ್ಲಿಸಿದ್ದವು. ಈ ಎಲ್ಲಾ ಕೇಸುಗಳನ್ನು ತನ್ನ ವ್ಯಾಪ್ತಿಗೆ ವರ್ಗಾಯಿಸಿಕೊಂಡ ಸರ್ವೋಚ್ಚ ನ್ಯಾಯಾಲಯದಲ್ಲಿ 9 ಜನರಿಂದ ಕೂಡಿದ ಸರ್ವೋಚ್ಚ ನ್ಯಾಯಾಲಯದ ನ್ಯಾಯಪೀಠವು ಬಹಳ ದೀರ್ಘವಾಗಿ ಮತ್ತು ಆಳವಾಗಿ ಚರ್ಚಿಸಿ ನಮ್ಮ ದೇಶದ ಸಂವಿಧಾನ ಮತ್ತು ಜಾತ್ಯಾತೀತತೆಯ ಬಗ್ಗೆ ಬಹಳ ಪ್ರಮುಖವಾದ ಐತಿಹಾಸಿಕ ತೀರ್ಪನ್ನು 1993 ರಲ್ಲಿ ನೀಡಿದೆ. ಈ ತೀರ್ಪಿನಲ್ಲಿನ ಎಲ್ಲಾ ಅಂಶಗಳನ್ನು ಇಲ್ಲಿ ಹೇಳುವುದು ಸಾಧ್ಯವಿಲ್ಲದ ಕಾರಣ ಜಾತ್ಯಾತೀತತೆಯ ಬಗ್ಗೆ ನ್ಯಾಯಪೀಠವು ನೀಡಿರುವ ಒಂದೆರಡು ಅಂಶಗಳನ್ನು ಹೇಳುವುದು ಇಂದಿನ ಪರಿಸ್ಥಿತಿಯಲ್ಲಿ ಬಹಳ ಅನಿವಾರ್ಯ ಮತ್ತು ಅವಶ್ಯಕತೆ ಇದೆ.

ಜಾತ್ಯಾತೀತತೆಯ ಪರಿಕಲ್ಪನೆ

1976ನೇ ಇಸವಿಯಲ್ಲಿ ಮಾಡಿದ 42ನೇ ಸಂವಿಧಾನದ ತಿದ್ದುಪಡಿಯಲ್ಲಿ ಮೊದಲಬಾರಿಗೆ ಸಮಾಜವಾದ ಮತ್ತು ಜಾತ್ಯಾತೀತತೆಯನ್ನು ಸೇರಿಸಿದ್ದರಾದರೂ 'ಜಾತ್ಯಾತೀತತೆ' ಎಂಬ ಪರಿಕಲ್ಪನೆ ನಮ್ಮ ಸಂವಿಧಾನದಲ್ಲಿ ಪ್ರಾರಂಭದಿಂದಲೂ ಅಡಗಿ ಬಂದಿದೆ. ಪ್ರಾರಂಭದಿಂದ 'ನಮ್ಮ ಸಂವಿಧಾನದಲ್ಲಿ ಅಂತರ್ಗತವಾಗಿ ಅಡಗಿಕೊಂಡು ಬಂದಂತಹ ಈ ಜಾತ್ಯಾತೀತತೆಯು ಈ ತಿದ್ದುಪಡಿಯಿಂದ ಅಂದರೆ 42ನೇ ಸಂವಿಧಾನ ತಿದ್ದುಪಡಿಯಿಂದ ಬಹಿರ್ಗತಗೊಂಡಿದೆ''. ಜಾತ್ಯಾತೀತತೆ ಎಂಬ ತತ್ವ ನಮ್ಮ ಸಂವಿಧಾನದ ಮೂಲಭೂತ ಗುಣವಾಗಿದೆ. ಭಾರತದಲ್ಲಿನ ಎಲ್ಲಾ ಜನಗಳ ಧರ್ಮಗಳಿಗೆ ರಕ್ಷಣೆಯನ್ನು ಖಚಿತಗೊಳಿಸಲಾಗಿದೆ. ಪ್ರಭುತ್ವದ ದೃಷ್ಟಿಯಲ್ಲಿ ಯಾವುದೇ ಒಬ್ಬ ವ್ಯಕ್ತಿಯ ನಂಬಿಕೆ ಮತ್ತು ಭಾವನೆಗಳು ಅಪ್ರಸ್ತುತ. ಪ್ರಭುತ್ವದ ದೃಷ್ಟಿಯಲ್ಲಿ ಎಲ್ಲಾ ಜನರ ನಂಬಿಕೆಗಳು ಮತ್ತು ಭಾವನೆಗಳು ಸಮಾನವಾಗಿ ಇರಬೇಕು. ರಾಜ್ಯದ ಆಡಳಿತ ದೃಷ್ಟಿಯಲ್ಲಿ ಧರ್ಮಗಳಿಗೆ ಯಾವುದೇ ಸ್ಥಾನ ಮತ್ತು ಪಾತ್ರವಿಲ್ಲ. ಯಾವುದೇ ರಾಜ್ಯ ಸರ್ಕಾರವು ಜಾತ್ಯಾತೀತವಲ್ಲದ ಧೋರಣೆಗಳನ್ನು ಅನುಸರಿಸಿದರೆ ಅಥವಾ ಜಾತ್ಯಾತೀತ ವಲ್ಲದ ವಿಧಾನಗಳನ್ನು ಅನುಷ್ಠಾನಗೊಳಿಸಿದರೆ ಅದು ಸಂವಿಧಾನ ಬಾಹಿರವಾಗುತ್ತದೆ ಮತ್ತು ಸಂವಿಧಾನದ 356ನೇ ವಿಧಿಯ ಪ್ರಕಾರ ಅದು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಈ ತೀರ್ಪು ಘೋಷಿಸಿದೆ. ಆದುದರಿಂದ ಜಾತ್ಯಾತೀತತೆಯೆನ್ನುವುದು ಧರ್ಮ ಸಹಿಷ್ಣುತೆಯ ಬಗ್ಗೆ ಹೆಚ್ಚಿನ ನಿರ್ಲಿಪ್ತತೆಯನ್ನು ಹೊಂದಿರಬೇಕಾಗುತ್ತದೆ. ಮತ್ತು ಇದು ಎಲ್ಲಾ ಧರ್ಮಗಳ ಸಮಾನತೆಯ ಬಗ್ಗೆ ಸಕಾರಾತ್ಮಕ ಭಾವನೆಯನ್ನು ಹೊಂದಿರಬೇಕಾಗುತ್ತದೆ ಎಂದು ತೀರ್ಪಿನಲ್ಲಿ ತಿಳಿಸಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ರಾಜ್ಯಾಧಿಕಾರದ ವಿಧಾನಗಳಲ್ಲಿ ಧರ್ಮಕ್ಕೆ ಯಾವುದೇ ರೀತಿಯಾದ ಸ್ಥಾನವಿಲ್ಲ. ಧರ್ಮವೆಂಬುದು ಸಂಪೂರ್ಣವಾಗಿ ಖಾಸಗಿ ವಿಚಾರವಾಗಿರುತ್ತದೆ.

ಮುಂದುವರೆದು, ಸಂವಿಧಾನದಲ್ಲಿನ ಪ್ರಸ್ತಾವನೆಯಲ್ಲಿ ಅಡಕವಾಗಿರುವಂತೆ ಮತ್ತು ಸಂವಿಧಾನದ ಕಲಮು 25, 26, 29, 30, 44, 51ಎ, 14, 15 ಮತ್ತು 16 ರ ಪ್ರಕಾರ ಧರ್ಮದ ಆಧಾರದ ಮೇಲೆ ರಾಜ್ಯದ ರಚನೆ ಮಾಡುವುದನ್ನು ನಿರ್ಬಂಧಿಸುತ್ತದೆ. ಮತ್ತು ರಾಜ್ಯವು ಯಾವುದೇ ಧರ್ಮದ ಧಾರ್ಮಿಕ ಭಾವನೆಗಳ ಜೊತೆ ಗುರುತಿಸಿಕೊಳ್ಳುವುದನ್ನು ನಿಷೇಧಿಸುತ್ತದೆ. ಎಲ್ಲಾ ಧರ್ಮಗಳನ್ನು ಸಮಾನತೆಯಿಂದ ನೋಡುವುದು ಅದರ ಸಂವಿಧಾನಬದ್ಧ ಕರ್ತವ್ಯವಾಗಿರುತ್ತದೆ. ನಮ್ಮ ಸಂವಿಧಾನದ ಪ್ರಕಾರ ರಾಜ್ಯಕ್ಕೆ ಧರ್ಮದ ಬಗ್ಗೆ ಯಾವುದೇ ರೀತಿಯ ದೃಷ್ಟಿಗಳಿದ್ದರೂ ಅದು ಎಂದಿಗೂ ಜಾತ್ಯಾತೀತ ಚಟುವಟಿಕೆಗಳಿಗೆ ಅಡ್ಡಿ ಆಗಬಾರದು. ವಾಸ್ತವಾಂಶವೇನೆಂದರೆ; ಪ್ರಭುತ್ವದ ಜಾತ್ಯಾತೀತ ಚಟುವಟಿಕೆಗಳನ್ನು ಧಾರ್ಮಿಕ ಭಾವನೆಗಳು ಅತಿಕ್ರಮಿಸುವುದನ್ನು ನಮ್ಮ ಸಂವಿಧಾನದಲ್ಲಿ ನಿಷೇಧಿಸಲಾಗಿದೆ.

ನಮ್ಮ ದೇಶದಲ್ಲಿನ ಎಲ್ಲಾ ವಿಭಾಗಗಳ ಜನತೆಯ ಸರ್ವತೋಮುಖ ಅಭಿವೃದ್ಧಿ ಮತ್ತು ಬೆಳವಣಿಗೆಯಾಗಬೇಕಾದರೆ ಇಲ್ಲಿನ ರಾಜಕೀಯ ವ್ಯವಸ್ಥೆಯಲ್ಲಿ ಜಾತ್ಯಾತೀತತೆ ಎನ್ನುವುದು ಅದರ ಮೂಲ ಆಧಾರ ಮತ್ತು ಕಾನೂನು ಆಗಿರಬೇಕು.

ಮೂಲ ನಿಯಮಗಳನ್ನು ಗಾಳಿಗೆ ತೂರಲಾಗುತ್ತಿದೆ

ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅಂಶಗಳನ್ನು ಸಂಘ ಪರಿವಾರ ಮತ್ತು ಅವುಗಳ ರಾಜಕೀಯ ಮುಖವಾಡವಾಗಿರುವ ಬಿ.ಜೆ.ಪಿ. ನೇತೃತ್ವದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಎಷ್ಟು ವಿಕೃತಗೊಳಿಸಿವೆ ಮತ್ತು ಹೇಗೆ ಸಂವಿಧಾನದ ಮೂಲ ನಿಯಮಗಳನ್ನು ಗಾಳಿಗೆ ತೂರಿವೆ ಎಂಬುದು ಸ್ಪಷ್ಟವಾಗುತ್ತದೆ. ನಾಗರೀಕ ಸಮಾಜವೊಂದರ ಕನಿಷ್ಟ ಲಕ್ಷಣಗಳನ್ನು ಸಹ ಗಾಳಿಗೆ ತೂರಿರುವ ಸಂಘ ಪರಿವಾರದ ಚಟುವಟಿಕೆಗಳು ದೇಶದ ಐಕ್ಯತೆ, ಸಮಗ್ರತೆ, ಜಾತ್ಯಾತೀತತೆಯನ್ನು ಒಡೆಯಲು ಬಹಳ ವ್ಯವಸ್ಥಿತವಾಗಿ ನಡೆಸುತ್ತಿರುವ ಪಿತೂರಿಯನ್ನು ನಾವು ಗಮನಿಸಬೇಕಾಗಿದೆ.

ಮಧ್ಯ ಪ್ರದೇಶದಲ್ಲಿ ಕ್ರಿಶ್ಚಿಯನ್ ಸನ್ಯಾಸಿನಿಯರ ಮೇಲೆ ನಡೆದ ಸಾಮೂಹಿಕ ಅತ್ಯಾಚಾರಗಳಿಂದ ಪ್ರಾರಂಭವಾಗಿ ಮತೀಯ ಅಲ್ಪಸಂಖ್ಯಾತರ ಮೇಲೆ ಅವ್ಯಾಹತವಾದ ಧಾಳಿ ನಡೆಯುತ್ತಿದೆ. ಅಲ್ಪಸಂಖ್ಯಾತರು ನಡೆಸುತ್ತಿರುವ ವಿದ್ಯಾಸಂಸ್ಥೆಗಳ ಮಾನ್ಯತೆ ರದ್ದು ಪಡಿಸುವಂತೆ ಒತ್ತಾಯಿಸುತ್ತಿದ್ದು, ಅದರಲ್ಲಿಯೂ ಪ್ರಮುಖವಾಗಿ ಕ್ರಿಶ್ಚಿಯನ್ನರು ನಡೆಸುತ್ತಿರುವ ಶಾಲಾ - ಕಾಲೇಜುಗಳಿಗೆ ಹಿಂದೂ ಧರ್ಮಕ್ಕೆ ಸೇರಿದ ಮಕ್ಕಳನ್ನು ಸೇರಿಸಬಾರದು ಎಂದು ನಾಗರಿಕರಿಗೂ ಒತ್ತಾಯಿಸುತ್ತಿದ್ದಾರೆ. ಅಲ್ಲದೆ ಈ ಧಾಳಿಯನ್ನು ಸಂಘ ಪರಿವಾರದ ನೇತಾರರು ನಿರ್ಲಜ್ಜತೆಯಿಂದ ಸಮರ್ಥಿಸುತ್ತಿರುವುದು ಈ ದೇಶದ ಜನತೆಯ ಅಸಹಾಯಕತೆಯೇ? ಸ್ವಾತಂತ್ರ್ಯ ಚಳುವಳಿಯಲ್ಲಿನ ಬಲಹೀನತೆಗಳು ಮತ್ತು ಸ್ವಾತಂತ್ರ್ಯಾನಂತರ ಆಳುವ ಪಕ್ಷಗಳು ಅನುಸರಿಸಿದ ದಿವಾಳಿಕೋರ ನೀತಿಗಳಿಂದ ಉಂಟಾದ ಪರಿಸ್ಥಿತಿಯನ್ನು ದೇಶದಲ್ಲಿನ ಧಾರ್ಮಿಕ ಮೂಲಭೂತವಾದಿಗಳು ಮತ್ತು ಮತಾಂಧ ಶಕ್ತಿಗಳು ದುರುಪಯೋಗ ಪಡಿಸಿಕೊಂಡು ಈ ದೇಶವನ್ನು ಅನಾಗರೀಕ ವ್ಯವಸ್ಥೆಗೆ ತಳ್ಳುವ ಪ್ರಯತ್ನವನ್ನು ನಡೆಸುತ್ತಿವೆ ಮತ್ತು ನಾಗರೀಕ ಪ್ರಪಂಚದ ಮುಂದೆ ನಮ್ಮನ್ನು ತಲೆ ತಗ್ಗಿಸುವಂತೆ ಮಾಡುತ್ತಿವೆ.

ಅನಾಗರೀಕ ಸರಕಾರ

ಸಂಘಪರಿವಾರದ ಈ ಮದೋನ್ಮತ್ತ ಕೃತ್ಯಗಳು ದೇಶದ ಜನತೆಯಲ್ಲಿ ಗಂಭೀರ ಆತಂಕವನ್ನು ಮೂಡಿಸಿವೆ. ದೇಶದ ಸಮಗ್ರತೆ ಮತ್ತು ಐಕ್ಯತೆಗೆ ಸವಾಲು ಹಾಕಿರುವ ಈ ಶಕ್ತಿಗಳಿಗೆ ಈ ದೇಶದಲ್ಲಿ ರಾಜಾಶ್ರಯ ಸಿಕ್ಕಿದೆ. ಈ ರಾಜಾಶ್ರಯದಿಂದ ಮತೀಯ ಅಲ್ಪಸಂಖ್ಯಾತರು ಆಕ್ರಮಣಕ್ಕೆ ಒಳಗಾಗಿ ಅಭದ್ರ ಸ್ಥಿತಿಯನ್ನು ಅನುಭವಿಸುತ್ತಿದ್ದಾರೆ.

ಸಂವಿಧಾನದ ಹೆಸರಿನಲ್ಲಿ ಅಧಿಕಾರವನ್ನು ನಡೆಸುತ್ತಾ, ಸಂವಿಧಾನವನ್ನು ನಗ್ನವಾಗಿ ಉಲ್ಲಂಘಿಸುತ್ತಿರುವ ಈ ದೇಶದ ಪ್ರಧಾನ ಮಂತ್ರಿಗಳು ಮತ್ತು ಅವರ ಪಕ್ಷ ಬಿಜೆಪಿ ಮತ್ತು ಇವರ ಸಂಘ ಪರಿವಾರದ ನಿಜ ಬಣ್ಣ ಈಗ ಬಯಲಾಗಿದೆ. ದೇಶದ ಜನತೆ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಂಪೂರ್ಣ ವಿಫಲವಾಗಿರುವ ಬಿಜೆಪಿ ಸರ್ಕಾರ ಜನರ ಗಮನವನ್ನು ಬೇರೆಡೆಗೆ ತಿರುಗಿಸಲು ಮತ್ತು ಕೋಮುಭಾವನೆಗಳನ್ನು ಕೆರಳಿಸುವ ಹುನ್ನಾರವನ್ನು ನಡೆಸುತ್ತಿದೆ. ಸಂವಿಧಾನಬಾಹಿರವಾದ ಮತ್ತು ಜಾತ್ಯಾತೀತ ವಿರೋಧದ ನಿಲುವುಗಳಿಂದ ದೇಶವನ್ನು ಛಿದ್ರಮಾಡಲು ಹೊರಟಿರುವ ಈ ಶಕ್ತಿಗಳ ವಿರುದ್ಧ ಇಂದು ವ್ಯಾಪಕವಾದ ಮತ್ತು ಸಮರಶೀಲವಾದ ಹೋರಾಟವೊಂದು ಬೆಳೆದು ಬರಬೇಕಾಗಿದೆ.

ದೇಶದ ಈ ದುರಂತಕ್ಕೆ ಹೊಣೆಗಾರರಾದ ಆರ್.ಎಸ್.ಎಸ್., ವಿಶ್ವಹಿಂದೂ ಪರಿಷತ್, ಭಜರಂಗ ದಳ ಮತ್ತು ಅವರ ಮಿತ್ರರಾದ ಶಿವಸೇನೆಗಳ ವಿರುದ್ಧ ಬಲಿಷ್ಟ ತಾತ್ವಿಕ ಹೋರಾಟವು ಅನಿವಾರ್ಯವಾಗಿದೆ. ಈ ಸಂವಿಧಾನ ಬಾಹಿರ ಅನಾಗರೀಕ ಸರ್ಕಾರವನ್ನು ಕಿತ್ತೊಗೆಯುವುದೇ ನಮ್ಮ ಮುಂದಿನ ಆದ್ಯ ಕರ್ತವ್ಯ ಮತ್ತು ಸವಾಲು.

ಪಶ್ಚಿಮ ಬಂಗಾಲದಲ್ಲಿ 20002 ಇಸ್ವಿಯೊಳಗೆ ನಿರಕ್ಷರತೆ ನಿರ್ಮೂಲನೆ

"ಎಲ್ಲರಿಗೂ ಶಿಕ್ಷಣ ಎಲ್ಲರಿಗೂ ಆರೋಗ್ಯ"

ಕಾರ್ಯಕ್ರಮ ಕೈಗೊಳ್ಳಲು ಸಿಪಿಐ(ಎಂ) ರಾಜ್ಯ ಸಮಿತಿ ನಿರ್ಧಾರ

ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯ ಸಮಿತಿ 2002 ಇಸ್ವಿಯೊಳಗೆ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ಹಾಗೂ ನಿರಕ್ಷರತೆಯನ್ನು ನಿರ್ಮೂಲ ಮಾಡಲು ಒಂದು ತೀವ್ರ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದೆ. ರಾಜ್ಯದಲ್ಲಿ ಸಾರ್ವತ್ರಿಕ ಆರೋಗ್ಯ ಜಾಗೃತಿ ಮೂಡಿಸಲು ಕೂಡಾ ಅಷ್ಟೇ ತೀವ್ರವಾದ ಇನ್ನೊಂದು ಪ್ರಚಾರಾಂದೋಲನ ನಡೆಸಲಾಗುವುದು. ಪಕ್ಷದ ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳೂ ಭಾಗವಹಿಸಿದ್ದ ರಾಜ್ಯ ಕಾರ್ಯದರ್ಶಿ ಮಂಡಳಿ ಸಭೆಯಲ್ಲಿ ಈ ಕ್ರಮ ಕೈಗೊಳ್ಳಲು ನಿರ್ಧರಿಸಲಾಯಿತು. ಜನವರಿ 15 ರಂದು ಕಲ್ಕತ್ತೆಯಲ್ಲಿ ಈ ಸಭೆ ನಡೆಯಿತು.

ಬಿನೋಯ್ ಚೌಧುರಿಯವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಹಣಕಾಸು ಮಂತ್ರಿ ಅಸೀಮ್ ದಾಸ್‌ಗುಪ್ತಾ, ಪಂಚಾಯತ್ ಮಂತ್ರಿ ಸೂರ್ಯ ಕಾಂತ್ ಮಿಶ್ರಾ, ತಾಂತ್ರಿಕ ಶಿಕ್ಷಣ ಮಂತ್ರಿ ಬಂಗ್ಶಗೋಪಾಲ್ ಚೌಧುರಿ, ಸಾಮೂಹಿಕ ಶಿಕ್ಷಣ ಮಂತ್ರಿ ಅಂಜುಕರ್ ಹಾಗೂ ಶಾಲಾ ಶಿಕ್ಷಣ ಮಂತ್ರಿ ಶಾಂತಿ ಬಿಸ್ವಾಸ್ ಹಾಜರಿದ್ದರು. ಆರಂಭದಲ್ಲಿ ರಾಜ್ಯಕಾರ್ಯದರ್ಶಿ ಅನಿಲ್ ಬಿಸ್ವಾಸ್ ಕಾರ್ಯದರ್ಶಿ ಮಂಡಳಿ ತಯಾರಿಸಿದ ಟಿಪ್ಪಣಿಯನ್ನು ಮಂಡಿಸಿದರು. ತೀವ್ರ ಚರ್ಚೆಯ ಮೂಲಕ ಅದನ್ನು ಅಂತಿಮಗೊಳಿಸಲಾಯಿತು.

ಸೂರ್ಯಕಾಂತ್ ಮಿಶ್ರಾ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ರಾಜ್ಯ ಸರಕಾರದ ಯೋಜನೆಯ ವಿವರ ನೀಡಿದರು. ನಂತರ ಪೊಲಿಟ್‌ಬ್ಯೂರೋ ಸದಸ್ಯ ಬಿಮನ್ ಬಸು ಈ ಯೋಜನೆಯನ್ನು ಯಶಸ್ವಿಗೊಳಿಸುವಲ್ಲಿ ಪಕ್ಷದ ಸಂಘಟನಾ ಜವಾಬ್ದಾರಿ ಬಗ್ಗೆ ಹೇಳಿದರು. 2002 ಇಸ್ವಿಯೊಳಗೆ 5 ರಿಂದ 8 ವರ್ಷದ ವಯೋಮಾನದ ಎಲ್ಲಾ ಮಕ್ಕಳನ್ನು ಸಾರ್ವತ್ರಿಕ ಶಿಕ್ಷಣದ ವ್ಯಾಪ್ತಿಯಲ್ಲಿ ತರಬೇಕು ಎಂದು ನಿರ್ಧರಿಸಲಾಯಿತು. ಅದೇ ಅವಧಿಯಲ್ಲಿ 9 ರಿಂದ 15 ವರ್ಷ ವಯೋ ಗುಂಪಿನ ಮಕ್ಕಳಿಗೆ ಒಂದು ಕನಿಷ್ಠ ಮಟ್ಟದ ಪ್ರಾಥಮಿಕ ಶಿಕ್ಷಣ ಹಾಗೂ ಮುಂದುವರಿದ ಶಿಕ್ಷಣ ಒದಗಿಸಲಾಗುವುದು. ಇದಕ್ಕೆ ಪಂಚಾಯತ್ ಇಲಾಖೆ ನಡೆಸುತ್ತಿರುವ ಮಕ್ಕಳ ಶಿಕ್ಷಣ ಕೇಂದ್ರಗಳನ್ನು ವಿಸ್ತರಿಸಿ ಇನ್ನಷ್ಟು ಬೆಳೆಸಬೇಕಾಗುತ್ತದೆ. ಈ ಸಂಸ್ಥೆಗಳನ್ನು ನಡೆಸುವಲ್ಲಿ ಹೆಚ್ಚೆಚ್ಚು ಗ್ರಾಮೀಣ ಜನ ಪಾಲ್ಗೊಳ್ಳುವಂತೆ ಮಾಡಬೇಕಾಗುತ್ತದೆ. ಜನಗಳ ಪಾಲ್ಗೊಳ್ಳುವಿಕೆಯಿಂದ ಮಕ್ಕಳ ಶಿಕ್ಷಣ ಕೇಂದ್ರಗಳು ಹೆಚ್ಚು ದಕ್ಷತೆಯಿಂದ ಕೆಲಸ ಮಾಡಲು, ಕೆಲಸದ ಪ್ರಗತಿಯನ್ನು ತ್ವರಿತಗೊಳಿಸಲು ಸಾಧ್ಯವಾಗುತ್ತದೆ.

ರಾಜ್ಯದ ಜನತೆ ನಿರಕ್ಷರತೆಯ ಹಿಡುಗಿನಿಂದ ಪಾರಾಗುವಂತೆ ಮಾಡಲು ಒಂದು ಸಮಗ್ರ ರೂಪದ ಕೆಲಸವನ್ನು ಕೂಡಾ ಆರಂಭಿಸಲಾಗುವುದು. ಸಾಕ್ಷರತೆಯ ನಂತರದ ಕೆಲಸಗಳನ್ನು ಹೆಚ್ಚಿಸಲು ವೃತ್ತಿ ಶಿಕ್ಷಣವನ್ನು ಇನ್ನಷ್ಟು ವಿಸ್ತರಿಸಲಾಗುವುದು. ರಾಜ್ಯದ ಎಡರಂಗ ಸರ್ಕಾರದ ಸಂಬಂಧಪಟ್ಟ ಇಲಾಖೆಯು ಈ ಇಡೀ ಪ್ರಕ್ರಿಯೆಯಲ್ಲಿ ತೊಡಗುವಂತೆ ಹೇಳಲಾಗುವುದು.

'ಜನ್ಮಸಿದ್ಧ ಹಕ್ಕು'

ಜನಗಳಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಒಂದು ತೀವ್ರ ಪ್ರಚಾರಾಂದೋಲನ ನಡೆಸಲಾಗುವುದು. ರಾಜ್ಯ ಸರಕಾರದ ಸಂಬಂಧಪಟ್ಟ ಇಲಾಖೆಗಳು ಮಕ್ಕಳಿಗೆ 'ಆರೋಗ್ಯ ಕಾರ್ಡು'ಗಳನ್ನು ನೀಡಲು ವಿನಂತಿ ಮಾಡಲಾಗುವುದು. ಆರೋಗ್ಯ ಮತ್ತು ಶಿಕ್ಷಣ ಮಾನವನ ಜನ್ಮಸಿದ್ಧ ಹಕ್ಕು ಎಂಬುದು ಪ್ರಚಾರಕಾರ್ಯದ ಕೇಂದ್ರ ವಸ್ತು. ಪ್ರತಿಜಿಲ್ಲೆಯ ಪ್ರತಿ ಸ್ಥಳವನ್ನು ಈ ಪ್ರಚಾರಾಂದೋಲನದ ವ್ಯಾಪ್ತಿಗೆ ತರಲಾಗುವುದು. ಅಲ್ಲಿ ಸಂಬಂಧಪಟ್ಟ ಪಕ್ಷದ ಘಟಕಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ನಗರ ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಮಿಕರು ಮತ್ತು ಅವರ ಕುಟುಂಬಗಳ ಶಿಕ್ಷಣ ಮತ್ತು ಆರೋಗ್ಯದ ಜವಾಬ್ದಾರಿ ಉದ್ದಿಮೆದಾರರ ಜವಾಬ್ದಾರಿಯಾಗಿರುತ್ತದೆ ಎಂಬುದು ಪಕ್ಷದ ನಂಬಿಕೆ.

(ಐಎನ್‌ಎನ್)

ಗುಜರಾತ್ ರಾಜ್ಯಪಾಲರ ವರ್ಗ

ಬಿಜೆಪಿಯ ಸಿನಿಕತನಕ್ಕೆ ಇನ್ನೊಂದು ಸಾಕ್ಷಿ

ಗುಜರಾತದ ರಾಜ್ಯಪಾಲರನ್ನು ವರ್ಗ ಮಾಡಿರುವುದು ಒಂದು ಪ್ರಶ್ನಾರ್ಹ ಕ್ರಮ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಟೀಕಿಸಿದೆ. ನ್ಯಾಯಮೂರ್ತಿ ಅಂಶುಮಾನ್ ಸಿಂಗ್‌ರನ್ನು ಕೆಲವೇ ಸಮಯದ ಹಿಂದೆಯಷ್ಟೇ ನೇಮಕ ಮಾಡಲಾಗಿತ್ತು. ರಾಜ್ಯದಲ್ಲಿ ಕ್ರೈಸ್ತ ಕೋಮಿನ ಮೇಲೆ ವ್ಯಾಪಕ ಹಾಗೂ ಯೋಜಿತ ಧಾಳಿಗಳು ನಡೆಯುತ್ತಿರುವಾಗ, ರಾಜ್ಯ ಸರ್ಕಾರ ಇದನ್ನು ತಡೆಯಲು ಕ್ರಮ ಕೈಗೊಳ್ಳುವಲ್ಲಿ ವಿಫಲಗೊಳ್ಳುತ್ತಿರುವಾಗ ರಾಜ್ಯಪಾಲರ ಈ ರೀತಿಯ ಹಠಾತ್ ವರ್ಗ ಖಂಡಿತಾ ಕೇಂದ್ರ ಸರ್ಕಾರದ ಉದ್ದೇಶದ ಬಗ್ಗೆ ಸಂದೇಹ ಮೂಡಿಸುತ್ತದೆ ಎಂದು ಸಿಪಿಐ(ಎಂ) ಹೇಳಿದೆ. ರಾಜಸ್ತಾನದಲ್ಲಿ ರಾಜ್ಯಪಾಲರ ಸ್ಥಾನ ತೆರವಾಗಿದ್ದರೆ ಅಲ್ಲಿಗೆ ಹೊಸ ರಾಜ್ಯಪಾಲರನ್ನು ನೇಮಿಸಬಹುದಿತ್ತು. ಅಥವಾ ಗುಜರಾತದ ರಾಜ್ಯಪಾಲರನ್ನೇ ಅಂತಹ ನೇಮಕ ಆಗುವವರೆಗೆ ಈ ಕಾರ್ಯಭಾರವನ್ನು ವಹಿಸಲು ಕೇಳಿಕೊಳ್ಳಬಹುದಿತ್ತು. ಅದರ ಬದಲು ಕೇವಲ ಕೆಲವೇ ಸಮಯದ ಹಿಂದೆ ನೇಮಿಸಿದ್ದ ಅವರನ್ನು ಈ ಅಲ್ಪ ಅವಧಿಯೊಳಗೇ ವರ್ಗ ಮಾಡಬೇಕಾದರೆ ಕೇಂದ್ರ ತನ್ನ ಹಿತಾಸಕ್ತಿಗಳಿಗೆ ಹೆಚ್ಚು ಸೂಕ್ತವಾದ ವ್ಯಕ್ತಿಯೊಬ್ಬರನ್ನು ಗುಜರಾತಕ್ಕೆ ರಾಜ್ಯಪಾಲರಾಗಿ ನೇಮಿಸಬೇಕೆಂದಿರಬೇಕು ಎಂದಿರುವ ಸಿಪಿಐ(ಂ) ಪೊಲಿಟ್‌ಬ್ಯೂರೋ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ತನ್ನ ಸಂಕುಚಿತ ಹಿತಾಸಕ್ತಿಗಳಿಗಾಗಿ ರಾಜ್ಯಪಾಲರ ಹುದ್ದೆಯನ್ನು ದುರುಪಯೋಗ ಪಡಿಸಿಕೊಳ್ಳಬಲ್ಲದು ಎಂಬುದನ್ನು ಸಾಬೀತು ಪಡಿಸಿದೆ ಎಂದು ಟೀಕಿಸಿದೆ.

ಪಶ್ಚಿಮ ಬಂಗಾಳದಲ್ಲಿ 40 ಲಕ್ಷ ಅಸಂಘಟಿತ ಕಾರ್ಮಿಕರ ಮುಷ್ಕರ

ಜನವರಿ 2 ರಂದು ಪಶ್ಚಿಮ ಬಂಗಾಳದ 40 ಲಕ್ಷಕ್ಕೂ ಹೆಚ್ಚು ಅಸಂಘಟಿತ ಕಾರ್ಮಿಕರು ಒಂದು ದಿನದ ಮುಷ್ಕರ ನಡೆಸಿದರು. ಸಿಐಟಿಯು ಈ ಮುಷ್ಕರಕ್ಕೆ ಕರೆ ನೀಡಿತ್ತು. ಇಂಟಕ್, ಎಐಟಿಯುಸಿ ಕೂಡಾ ಇದನ್ನು ಬೆಂಬಲಿಸಿದವು. ಕನಿಷ್ಠ ಕೂಲಿಯನ್ನು 70 ರೂ. ಗೇರಿಸಬೇಕು ಮತ್ತು ಇತರ ಏಳು ಬೇಡಿಕೆಗಳನ್ನು ಮುಂದಿಟ್ಟು ಈ ಮುಷ್ಕರ ನಡೆಸಿತು.

ಕೇಂದ್ರ ಸರ್ಕಾರದ ತಪ್ಪು ನೀತಿಗಳಿಂದ ಬೆಲೆಗಳು ಗಗನಕ್ಕೇರಿರುವ, ಸಣ್ಣ ಪ್ರಮಾಣದ ಉದ್ದಿಮೆಗಳು, ಗುಡಿ ಕೈಗಾರಿಕೆಗಳು ನಾಶವಾಗುತ್ತಿವೆ, ಇವೆಲ್ಲಾ ಅಸಂಘಟಿತ ವಲಯದ ಕಾರ್ಮಿಕರನ್ನು ತೀವ್ರವಾಗಿ ತಟ್ಟುತ್ತವೆ ಎಂದಿರುವ ಸಿಐಟಿಯು ರಾಜ್ಯ ಕಾರ್ಯದರ್ಶಿ ಮೃಣಾಲ್ ದಾಸ್ ಈಗಿನ ಕನಿಷ್ಠ ಕೂಲಿ 40 ರೂ. ಬಡತನ ರೇಖೆಗಿಂತ ಕೆಳಗಿದೆ ಎಂದಿದ್ದಾರೆ. ಹಲವು ವಲಯಗಳನ್ನು ಕನಿಷ್ಠ ಕೂಲಿಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ, ಹಲವೆಡೆ ಇವನ್ನು ವಿವಿಧ ಕಾರಣಗಳಿಂದಾಗಿ ಜಾರಿ ಮಾಡಲಾಗಿಲ್ಲ. ಇವನ್ನೆಲ್ಲಾ ಸರಿಪಡಿಸುವುದಲ್ಲದೆ ಈ ಕಾನೂನನ್ನು ವಿಧಾನದ ಒಂಭತ್ತನೇ ಶೆಡ್ಯೂಲಿಗೆ ಹಾಕಬೇಕು ಎಂಬುದು ಮುಷ್ಕರದ ಮುಖ್ಯ ಬೇಡಿಕೆಗಳು.

ಮುಷ್ಕರದ ದಿನ ಇಡೀ ರಾಜ್ಯದಲ್ಲಿ ಮೆರವಣಿಗೆಗಳು, ಘೋಷಣೆಗಳು ಪ್ರತಿಧ್ವನಿಸಿದವು. ಗ್ರಾಮೀಣ ಪ್ರದೇಶದಲ್ಲೂ ಮುಷ್ಕರ ಭಾರೀ ಪ್ರಭಾವ ಬೀರಿತು. ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಅಸಂಘಟಿತರು ಈ ಮುಷ್ಕರಕ್ಕಿಳಿಯಬೇಕಾಗಿ ಬಂದಿದೆ, ರಾಜ್ಯದ ಎಡರಂಗ ಸರ್ಕಾರ ಅವರ ಈ ಬೇಡಿಕೆಗಳನ್ನು ಕೇಂದ್ರದ ಮುಂದಿಡುವುದಾಗಿ ಹೇಳಿದೆ.

ಸಿಐಟಿಯು ರಾಜ್ಯ ಕಾರ್ಯದರ್ಶಿಯವರ ಪ್ರಕಾರ 98% ಅಸಂಘಟಿತ ಕಾರ್ಮಿಕರು ಈ ಮುಷ್ಕರದಲ್ಲಿ ಭಾಗವಹಿಸಿದರು.

ದೇಶದ 24 ಕೋಟಿ ಕಾರ್ಮಿಕರಲ್ಲಿ 22 ಕೋಟಿ ಅಸಂಘಟಿತ ವಲಯದಲ್ಲಿದ್ದಾರೆ. ಇವರಿಗೆ ಯಾವುದೇ ಭದ್ರತೆಯಿಲ್ಲ. ಈ ದೊಡ್ಡ ವಿಭಾಗಕ್ಕೆ ಸಾಮಾಜಿ ಭದ್ರತೆ ನೀಡಲು 50% ಖರ್ಚನ್ನು ಕೇಂದ್ರ ಸರ್ಕಾರ ನೀಡಬೇಕು ಎಂದು ಒತ್ತಾಯಿಸಿರುವ ಮನೋಜ್ ದಾಸ್ ರಾಜ್ಯ ಸರಕಾರದೊಂದಿಗೆ ಮಾತುಕತೆಯ ಬಗ್ಗೆ ತಿಳಿಸುತ್ತಾ ರಾಜ್ಯ ಸರಕಾರ ಒಂದು ತಿಂಗಳೊಳಗೆ ಕನಿಷ್ಠ ಕೂಲಿ ಶಾಸನವನ್ನು ತಿದ್ದುಪಡಿ ಮಾಡುವುದಾಗಿ ಹೇಳಿರುವುದಾಗಿ ತಿಳಿಸಿದರು. ○

ಪುಸ್ತಕ ಪರಿಚಯ

ವಿಶ್ವ

ವಿಜ್ಞಾನ ಕೋಶದ ಜ್ಞಾನ ನಿಧಿ ಜ್ಞಾನವಿಜ್ಞಾನ ಕೋಶ

ತೆರೆದ ಕಿಟಕಿ ಮನೆಯ ಬೆಳಕಿಗೆ
ತೆರೆದ ಪುಸ್ತಕ ಮನದ ಬೆಳಕಿಗೆ

ಕನ್ನಡದಲ್ಲಿ ವಿಜ್ಞಾನ ಕಲಿಕೆ, ವಿಜ್ಞಾನ ಸಾಹಿತ್ಯ ಕಷ್ಟದ ಕೆಲಸ ಎಂಬ ನಂಬಿಕೆಯನ್ನು ಹುಸಿಗೊಳಿಸಲೋ ಎನ್ನುವಂತಿದೆ ಕನ್ನಡ ಸಾರಸ್ವತ ಲೋಕವನ್ನು ಪ್ರವೇಶಿಸಿರುವ ಜ್ಞಾನವಿಜ್ಞಾನ ಕೋಶ.

ವಿಶೇಷವಾಗಿ ವೈಚಾರಿಕ ಸಾಹಿತ್ಯಕ್ಕೆ ಕನ್ನಡದಲ್ಲಿ ಗಟ್ಟಿನೆಲೆ ಒದಗಿಸಿರುವ ನವಕರ್ನಾಟಕ ಪ್ರಕಾಶನ ಭಾರತದ ಸ್ವಾತಂತ್ರ್ಯ ಸ್ವರ್ಣ ಮಹೋತ್ಸವಕ್ಕೆ ಸಲ್ಲಿಸಿರುವ ಅರ್ಥಪೂರ್ಣ ಕಾಣಿಕೆ.

ಕನ್ನಡದಲ್ಲಿ ವಿಜ್ಞಾನ ಕೋಶ ಬಂದೇ ಇಲ್ಲ ಎಂದಲ್ಲ. ಈ ವಿಚಾರದಲ್ಲಿ ಹಿಂದೆ ಹಲವು ಪ್ರಯತ್ನಗಳು ನಡೆದಿವೆ. ಖ್ಯಾತ ಸಾಹಿತಿ ಡಾ. ಶಿವರಾಮ ಕಾರಂತರೂ ಈ ಕ್ಷೇತ್ರದಲ್ಲಿ ಕೈಯಾಡಿಸಿದ್ದರು. ಸದಾ ಹರಿಯುವ ನದಿಯಂತಿರುವ ವಿಜ್ಞಾನ ಎಂಬ ಮಹಾಸಾಗರದ ತೀರಾ ಈಚಿನ ಬೆಳವಣಿಗೆ, ವಿದ್ಯಮಾನಗಳನ್ನು ಸೇರಿಸಿ ಹಲವು ಶಾಖೆಗಳ ಸಮಗ್ರ ಪರಿಚಯ ಮಾಡಲು ಯತ್ನಿಸಿರುವುದು ಜ್ಞಾನವಿಜ್ಞಾನ ಕ್ಷೇತ್ರದ ಹೆಚ್ಚುಗಾರಿಕೆ.

ಸರಳ ಭಾಷೆಯಲ್ಲಿ ವಿಜ್ಞಾನವನ್ನು ಪರಿಚಯಿಸುವುದರ ಜತೆ ಜತೆಯಲ್ಲಿ ವೈಜ್ಞಾನಿಕತೆಯನ್ನು ರೂಢಿಗೊಳಿಸಿಕೊಳ್ಳುತ್ತ ನೆರವಾಗುವುದೂ ಉದ್ದೇಶ.

'........... ನಮ್ಮ ವಿದ್ಯಾರ್ಥಿಗಳು ಜ್ಞಾನ ಸಂಪನ್ನರಾಗಬೇಕು, ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳಬೇಕು ಎಂಬ ಕಳಕಳಿಯೂ ಈ ಪ್ರಕಟಣೆಯ ಹಿಂದಿರುವ ಪ್ರೇರಣೆಯಾಗಿದೆ' ಎಂಬ ಪ್ರಕಾಶಕರ ನುಡಿ ಅವರ ಧ್ಯೇಯಕ್ಕೆ ಹಿಡಿದ ಕನ್ನಡಿ.

ನಾಲ್ಕು ಸಂಪುಟಗಳು ಹೀಗಿವೆ

ಸಂಪುಟ 1: ಭೌತ, ರಸಾಯನ, ಗಣಿತ ವಿಜ್ಞಾನ
ಸಂಪುಟ 2: ಖಗೋಳ, ಭೂ, ಸಾಗರ, ಪರಿಸರ, ಅಂತರಿಕ್ಷ ವಿಜ್ಞಾನ
ಸಂಪುಟ 3: ವೈದ್ಯ, ನರ-ಮನೋ ವಿಜ್ಞಾನ, ದಂತ ವೈದ್ಯ, ಸಸ್ಯ, ಪ್ರಾಣಿ ವಿಜ್ಞಾನ
ಸಂಪುಟ 4: ಕೃಷಿ ವಿಜ್ಞಾನ, ವಾತಾವರಣ ವಿಜ್ಞಾನ, ಮಾನವ ನಿರ್ಮಿತ ಅದ್ಭುತಗಳು, ಕಂಪ್ಯೂಟರ್ ತಂತ್ರಜ್ಞಾನ, ಮಿಲಿಟರಿ ತಂತ್ರಜ್ಞಾನ, ನೊಬೆಲ್ ಪ್ರಶಸ್ತಿ ವಿಜೇತರು

ಈ ರೀತಿಯಾಗಿ ವಿಜ್ಞಾನ ರಂಗದಿಂದ ನಾನಾ ವಿಷಯಗಳನ್ನು ವಿಂಗಡಿಸಿ ಪ್ರತ್ಯೇಕ ಸಂಪುಟಗಳಲ್ಲಿ ಸ್ಥೂಲವಾಗಿ ವಿವರಿಸಿದ್ದಾರೆ.

ಆಯಾ ಕ್ಷೇತ್ರಗಳ 28 ಪರಿಣತ ಲೇಖಕರು ಬರೆದಿರುವ ಪುಟ್ಟ ಪುಟ್ಟ ಹಾಗೂ ದೀರ್ಘ ಲೇಖನಗಳು ಇವೆ. ಲೇಖನಕ್ಕೆ ಒತ್ತಾಸೆ ನೀಡುವಂತೆ 1600 ಕ್ಕೂ ಹೆಚ್ಚಿನ ವರ್ಣರಂಜಿತ ರೇಖಾ ಚಿತ್ರಗಳು ಮತ್ತ ಛಾಯಾ ಚಿತ್ರಗಳುಗಳೂ ಇವೆ. ಇವು ಸಾಮಾನ್ಯ ಓದುಗರಿಗೂ ವಿಷಯವನ್ನು ಅರ್ಥಮಾಡಿಕೊಳ್ಳುವಲ್ಲಿ ಗಣನೀಯ ಪ್ರಮಾಣದಲ್ಲಿ ನೆರವಾಗುವಲ್ಲಿ ಸಂಶಯವಿಲ್ಲ. ಇಲ್ಲಿ ವಿಜ್ಞಾನ ಕ್ಷೇತ್ರದ ನಾನಾ ಅಂಶಗಳ ಪರಿಚಯ ಆಗುವುದರ ಜತೆಗೆ ಹಲವಾರು ವಿಜ್ಞಾನಿಗಳ ವಿಶಿಷ್ಟ ಹಾಗೂ ಕುತೂಹಲಕಾರಿ ಗುಣಗಳೂ ನಮ್ಮ ಅರಿವಿಗೆ ಬರುತ್ತವೆ.

ಪರಮಾಣು ಬಾಂಬ್ ತಯಾರಿಸಲು ನಿರಾಕರಿಸಿದ ಲೀಸ್ ಮೇಟ್ನರ್, ವಿಜ್ಞಾನಿಯಾಗಿ ಅಷ್ಟೇ ಅಲ್ಲ ವಿಜ್ಞಾನವನ್ನು ಜನಪ್ರಿಯಗೊಳಿಸಲು ಕತೆಗಳ ವಿಶಿಷ್ಟ ಹಾದಿ ತುಳಿದ ಐಸಾಕ್ ಅಸಿಮೊವ್ ... ಹೀಗೆ ಈ ಪಟ್ಟಿ ಬೆಳೆಯುತ್ತದೆ. ಕಮ್ಮಾರನ ಪುತ್ರನಾಗಿ ಕಡುಬಡತನದಲ್ಲಿ ಬೆಂದರೂ ಕೆಸರಲ್ಲಿ ಅರಳಿದ ಕಮಲದಂತೆ ವಿಜ್ಞಾನ ಕ್ಷೇತ್ರದಲ್ಲಿ ಅಮರರಲ್ಲೊಬ್ಬರಾದ ಮೈಕೆಲ್ ಫ್ಯಾರಡೆ ಅಂಥವರ ಜೀವನ ಯಾರಲ್ಲಾದರೂ ಸ್ಫೂರ್ತಿಯ ಬುಗ್ಗೆ ಚಿಮ್ಮಿಸದಿರದು. ಅಂತರಿಕ್ಷಯಾನ ಪರಿಕಲ್ಪನೆಯ ಪಿತಾಮಹ ಕೋನ್‌ಸ್ತಾಂತಿನ್ ತ್ಸಿಯೋಲ್ಕೋವ್‌ಸ್ಕಿ ಕಿವುಡನಾಗಿದ್ದ ಎಂಬ ಅಂಶ ಮನಸ್ಸಿದ್ದಲ್ಲಿ ಮಾರ್ಗವಿದೆ ಎಂಬ ನಾಣ್ಣುಡಿಗೆ ಇಂಬು ಕೊಡುತ್ತದೆ.

ಸೂರ್ಯಕೇಂದ್ರ ಸಿದ್ಧಾಂತವನ್ನು ಪ್ರತಿಪಾದಿಸಿ ಸಂಪ್ರದಾಯ ವಾದಿಗಳ ಕೆಂಗಣ್ಣಿಗೆ ಬಲಿಯಾದ ಗೆಲಿಲಿಯೋ ವಿಚಾರ ಬಹುತೇಕ ಎಲ್ಲರಿಗೆ ತಿಳಿದಿದೆ(ಸಂಪುಟ 2, ಪುಟ 13). ಇದು ಖಗೋಳ ಕ್ಷೇತ್ರಕ್ಕೆ ಸಂಬಂಧಿಸಿದ್ದು. ಅದೇ ರೀತಿ ಭೂ ವಿಜ್ಞಾನ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿದ ಸಂಪ್ರದಾಯ ಶರಣರ ಕೋಪಕ್ಕೆ ತುತ್ತಾದ ಜೇಮ್ಸ್ ಹಟ್ಟನ್(1726-1797) ವಿಷಯ ಬಹಳಷ್ಟು ಜನರಿಗೆ ಗೊತ್ತಿರಲಿಕ್ಕಿಲ್ಲ. ಅದು ಇಲ್ಲಿ ದಾಖಲಾಗಿದೆ.

ನಾಲ್ಕು ಸಂಪುಟಗಳಲ್ಲಿ ಹರಡಿರುವ ಇಂಥ 150 ವ್ಯಕ್ತಿ ವಿಷಯ-ವಿಜ್ಞಾನಿಗಳ ಪರಿಚಯ ಅಂಕಣ ಅಮೂಲ್ಯವಾಗಿದೆ. 31 ನಿಮಗೆ

ಪ್ರಧಾನ ಸಂಪಾದಕರು:
ಪ್ರೊ. ಎಂ.ವಿ.ಸೇತುರಾವ್,
ಕೆ.ಎಲ್.ಗೋಪಾಲಕೃಷ್ಣ ರಾವ್
ನವಕರ್ನಾಟಕ ಪ್ರಕಾಶ
ನಾಲ್ಕು ಸಂಪುಟಗಳು
ಬೆಲೆ 1800 ರೂಪಾಯಿಗಳು

ತಿಳಿದಿರಲಿ ಹಾಗೂ 328 ಮಾಹಿತಿ ಅಂಕಣಗಳೂ ಉಪಯುಕ್ತವಾಗಿವೆ. ಕೆಲವು ಆಧುನಿಕ ವಿಜ್ಞಾನಿಗಳ ಫೋಟೋಗಳೇ ಇಲ್ಲದಿರುವುದು ಪುಟ್ಟಕೊರತೆಗಳಲ್ಲಿ ಒಂದು.

ಶಿಲೆಗಳ ವಯಸ್ಸು ತಿಳಿಯುವ ಕುರಿತ ಸರಳ ನಿರೂಪಣೆ (ಸಂಪುಟ 2, ಪುಟ 43) ಒಂದು ಉದಾಹರಣೆ. ಅದೇ ರೀತಿ ಅದೇ ಸಂಪುಟದ ಪುಟ 45 ರಲ್ಲಿನ ಭೂಗರ್ಭಕ್ಕೆ ಕಿಂಡಿ ಓದುಗರ ಕುತೂಹಲವನ್ನು ಕೆರಳಿಸುತ್ತದೆ.

ಕೃಷಿ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿರುವ ಕರ್ನಾಟಕದವರಾದ ಡಾ. ಮನಮೋಹನ ಅತ್ತಾವರ ವ್ಯಕ್ತಿವಿಚಾರ ದಾಖಲಾಗಿರುವುದು ಹೆಮ್ಮೆಯ ಸಂಗತಿ (ಸಂಪುಟ 4, ಪುಟ 52)

ಉತ್ತರ ಕನ್ನಡ ಜಿಲ್ಲೆಯ ಕವಳಾ ಗುಹೆಯ ತೊಂಗಲು ಚಿತ್ರ(ಸಂ.2, ಪು.65) ಉಳವಿಯ ಸುಣ್ಣ ಶಿಲಾಗುಹೆಗಳು, ಮಲ್ಪೆಯ ಸಂತಮೇರಿ ದ್ವೀಪದ ಶಿಲಾಕಂಬಗಳು ಸಂ.2, ಪು.79) ಮೊದಲಾದ ಕರ್ನಾಟಕದ ಭೂ ವಿಸ್ಮಯಗಳು ಇಲ್ಲಿ ಸ್ಥಾನ ಪಡೆದಿವೆ.

ಆಯಾಯ ಸಂಪುಟದ ಕೊನೆಯಲ್ಲಿ 20ನೇ ಶತಮಾನದಲ್ಲಿ ಆಯಾ ಕ್ಷೇತ್ರದಲ್ಲಿ ನಡೆದ ಪ್ರಮುಖ ಘಟನೆಗಳು ಹಾಗೂ ಮಹತ್ವದ ಸಾಧನೆಗಳ ಪಟ್ಟಿ ಕೊಟ್ಟಿರುವುದು ಉಪಯುಕ್ತ ಮಾಹಿತಿ. ಕೊನೆಯ ಸಂಪುಟದಲ್ಲಿ ಒಂದು ಅಧ್ಯಾಯವನ್ನೇ ವಿಜ್ಞಾನ ಕ್ಷೇತ್ರದ ನೊಬೆಲ್ ಪ್ರಶಸ್ತಿ ವಿಜೇತರ ಪಟ್ಟಿಗೆಂದು ಮೀಸಲಿಟ್ಟಿರುವುದು ಮಹತ್ವದ್ದಾಗಿದೆ.

ಮನುಷ್ಯನ ಆರೋಗ್ಯಕರ ಬದುಕಿಗೆ ಆಹಾರ ಮುಖ್ಯ. ಸರಿಯಾದ ಆಹಾರ ಸೇವನೆ ಇಲ್ಲದಿದ್ದರೆ ಬದುಕು ದುರ್ಭರ. ಜ್ಞಾನ ವಿಜ್ಞಾನ ಕೋಶದ 3ನೇ ಸಂಪುಟದ 50 ಮತ್ತು 51ನೇ ಪುಟಗಳಲ್ಲಿ ನೀಡಲಾಗಿರುವ ಎರಡು ಕೋಷ್ಟಕಗಳು ಸಮತೂಕದ ಆಹಾರ ಮತ್ತು ದಿನನಿತ್ಯ

ಪುಟ 8 ನೋಡಿ

ದಾರಿ ತಪ್ಪಿಸುವ ತಂತ್ರ.........

ಪುಟ 4 ರಿಂದ

ಪ್ರಜಾಸತ್ತಾತ್ಮಕ ಭಾರತವನ್ನು ಒಂದು ಅತ್ಯಂತ ಅಸಹಿಷ್ಣು 'ಹಿಂದೂರಾಷ್ಟ್ರ' ವಾಗಿ ಪರಿವರ್ತಿಸುವ ಕಾವಿಪಡೆಗಳ ಪ್ರತಿಗಾಮಿ ಗುರಿಸಾಧನೆಗಾಗಿ ಅವರು ಈ ಅಮಾನವೀಯ ಧಾಳಿಗಳನ್ನು ನಡೆಸುತ್ತಿದ್ದಾರೆ. ವಾಸ್ತವವಾಗಿ ಬಲವಂತದಿಂದ ಧರ್ಮಪರಿವರ್ತನೆ ನಡೆಸುತ್ತಿರುವವರು ಈ ಕಾವಿ ಪಡೆಗಳೇ.

ಮಹಾತ್ಮಗಾಂಧಿಯವರ ಜೀವ ನುಂಗಿದವರು

ನಮ್ಮ ದೇಶ ಬಾಂಧವರು ಆರ್ಥಿಕ ಸಮಸ್ಯೆಗಳಿಂದ ತಲ್ಲಣಿಸುತ್ತಿರುವಾಗ ನಮ್ಮ ದೇಶ ಇಂತಹ ಪಡೆಗಳ ಮುತ್ತಿಗೆಗೊಳಗಾಗಿರುವುದು ನಿಜವಾಗಿ ನಾಚಿಕೆ ಗೇಡಿನ ಸಂಗತಿ. ಜನಗಳ ಸಮಸ್ಯೆಗಳಿಗೆ ತುಸುವಾದರೂ ಪರಿಹಾರ ನೀಡುವ ಪ್ರಯತ್ನ ಮಾಡುವ ಬದಲು ಈ ಬಿಜೆಪಿ ನೇತೃತ್ವದ ಸರಕಾರ ಅವರ ಮೇಲೆ ಕೋಮುವಾದೀ ಅಜೆಂಡಾವನ್ನು ಹೇರುತ್ತಿದೆ.

ಇಂತಹ ಕೋಮುವಾದಿ ಶಕ್ತಿಗಳು ಮಹಾತ್ಮಗಾಂಧಿಯವರ ಜೀವವನ್ನು ಬಲಿತೆಗೆದುಕೊಂಡ 50ನೇ ವಾರ್ಷಿಕದ ಅಂತ್ಯವನ್ನು ಆಚರಿಸುವಾಗ ಅವರ ಕೋಮು ಸಹಿಷ್ಣುತೆಯ ಕಣ್ಣೋಟವನ್ನು ಜನಪ್ರಿಯಗೊಳಿಸುವ ಯೋಜನೆ ಹಾಕಿಕೊಳ್ಳದೆ 'ರಾಷ್ಟ್ರೀಯ ಗೋ ಸೇವಾ ಆಯೋಗ' ರಚಿಸಲು ಶಿಫಾರಸು ಮಾಡಿದ್ದರೆ ಆಶ್ಚರ್ಯವೇನು? ಜನಗಳ ದಿನನಿತ್ಯದ ವಾಸ್ತವತೆಗಳಿಗೆ ಕುರುಡಾದ ಈ ಅಲ್ಪಮತದ ಸರಕಾರವನ್ನು ಭಾರತೀಯರು ಸಹಿಸಬೇಕಾಗಿ ಬಂದಿರುವುದು ನಿಜವಾಗಿಯೂ ಒಂದು ವಿಪರ್ಯಾಸ.

ಇಷ್ಟೇ ಅಲ್ಲ, ನಾವು 20ನೇ ಶತಮಾನದ ಕೊನೆಯ ವರ್ಷಕ್ಕೆ ಕಾಲಿಡುವಾಗ, ನಾಗರಿಕತೆ ಹೊಸ ಮಟ್ಟವನ್ನು ತಲುಪುವ ಯತ್ನದಲ್ಲಿರುವಾಗ ಭಾರತವನ್ನು ಮಧ್ಯಯುಗದ ಬರ್ಬರತೆಯತ್ತ ಹಿಂದಕ್ಕೊಯ್ಯುವ ಒಂದು ರಾಜಕೀಯ ಮುಖಂಡತ್ವವನ್ನು ಪಡೆದಿದ್ದೇವೆ.

ಸ್ವತಂತ್ರ ಭಾರತದಲ್ಲಿ ಒಂದು ಧರ್ಮನಿರಪೇಕ್ಷ ಪ್ರಜಾಪ್ರಭುತ್ವ ಸ್ಥಾಪಿಸಿದ ಕಳೆದ 50 ವರ್ಷಗಳಲ್ಲಿ ಬಹುಪಾಲು ಭಾರತೀಯರು ತಮ್ಮ ಬಹುಸ್ವರೂಪದ, ಸಮನ್ವಯದ ಮನೋಭಾವದ ಬಗ್ಗೆ ಹೆಮ್ಮೆಪಟ್ಟುಕೊಳ್ಳುತ್ತಾ ನಮ್ಮ ಜನಗಳ ಐಕ್ಯತೆಯನ್ನು ಬಲಪಡಿಸಲು ಪ್ರಯತ್ನಿಸಿದ್ದಾರೆ. ಬಹುಸ್ವರೂಪದ ಭಾರತದ ಐಕ್ಯತೆಯನ್ನು ಬಲಪಡಿಸಬೇಕಾದರೆ ವೈವಿಧ್ಯತೆಗಳ ನಡುವಿರುವ ಏಕತೆಯ ಬಂಧನಗಳನ್ನು ಬಲಪಡಿಸಬೇಕು ಎಂಬ ಸರಳ ಸತ್ಯವನ್ನು ಈಗ ಮರೆಯಲಾಗುತ್ತಿದೆ. ಬಹುಸಂಖ್ಯಾತವೆನಿಸುವ ಧರ್ಮವನ್ನು, ಸಂಸತಿಯನ್ನು ಹೇರುವ ಕೋಮುವಾದಿಗಳ ಪ್ರಯತ್ನ ಬಲವಾದ ವಿಚ್ಛಿದ್ರಕಾರಿ ಪ್ರವೃತ್ತಿಗಳನ್ನು ಹುಟ್ಟುಹಾಕಿ ನಮ್ಮ ದೇಶ, ಜನಗಳ ಚೈತನ್ಯ ತಿಳಿಗೇಡಿ ಕಿತ್ತಾಟ, ಗಲಭೆಗಳಲ್ಲಿ ಉಡುಗಿಹೋಗುವಂತೆ ಮಾಡುತ್ತಿದೆ. ○

ಬ್ರೆಜಿಲ್ ನಾಣ್ಯ ಅಪಮೌಲ್ಯ- ಮತ್ತೆ ಜಾಗತಿಕ ಆರ್ಥಿಕ ಕರಗಿ ಹೋಗುವ ಮುನ್ಸೂಚನೆ?

ಬ್ರೆಜಿಲ್‌ನ ಆರ್ಥಿಕ ಬಿಕ್ಕಟ್ಟು ಬಿಗಡಾಯಿಸುತ್ತಾ, ಅಲ್ಲಿನ ನಾಣ್ಯ 'ರಿಯಲ್'ನ್ನು ಶೇಕಡಾ 8 ರಷ್ಟು ಅಪಮೌಲ್ಯಗೊಳಿಸಲಾಗಿದೆ. ಬ್ರೆಜಿಲ್‌ನ ಕೇಂದ್ರೀಯ ಬ್ಯಾಂಕ್ ಅಧ್ಯಕ್ಷ ರಾಜೀನಾಮೆ ಕೊಟ್ಟಿದ್ದಾರೆ ಎಂಬ ಸುದ್ದಿ ಹರಡುತ್ತಿದ್ದಂತೆ ತೀವ್ರ ಆತಂಕ, ಭಯವೂ ಇಡೀ ಜಾಗತಿಕ ಹಣಕಾಸು ವಲಯಗಳಲ್ಲಿ ಕಾಡ್ಗಿಚ್ಚಿನಂತೆ ಹಬ್ಬಿದೆ. ಇತ್ತೀಚಿನ ದಕ್ಷಿಣ ಪೂರ್ವ ಏಶ್ಯಾ ಆರ್ಥಿಕ ಬಿಕ್ಕಟ್ಟು ಹೊಸ ಪದವೊಂದನ್ನು ಚಾಲನೆಗೆ ತಂದಿದೆ- ಆರ್ಥಿಕ ಕರಗಿ ಹೋಗುವಿಕೆ (Economic Meltdown)-ಹಲವು ದೇಶಗಳ ಸಣ್ಣ ಆರ್ಥಿಕ ತೀವ್ರವಾಗಿ ಅಲ್ಲೋಲ ಕಲ್ಲೋಲವಾಗುವುದು, ಹಲವರ ಆಸ್ತಿ ಪಾಸ್ತಿ ಕೆಲವೇ ಗಂಟೆಗಳಲ್ಲಿ ಕರಗಿ ಹೋಗಿ ಅವರು ದೀವಾಳಿಯೇಳುವುದು. ಬ್ರೆಜಿಲ್‌ನ ನಾಣ್ಯದ ಅಪಮೌಲ್ಯ ಇಂತಹುದೇ ಇನ್ನೊಂದು ಜಾಗತಿಕ ಆರ್ಥಿಕ ಕುರಗುವಿಕೆಯು ಮುನ್ಸೂಚನೆ ಎಂದು ಹಲವರ ಆತಂಕ, ಅಭಿಪ್ರಾಯ ಸಹ.

ಬ್ರೆಜಿಲ್‌ನ ಅಪಮೌಲ್ಯ ಬಿಕ್ಕಟ್ಟು ಜಾಗತಿಕ ಆತಂಕ ಹಬ್ಬಿಸಿರುವುದಕ್ಕೆ ಕಾರಣವೆಂದರೆ ಅದು ಜಗತ್ತಿನ ಎಂಟನೇ ದೊಡ್ಡ ಆರ್ಥಿಕ. ದಕ್ಷಿಣ ಅಮೇರಿಕಾದಲ್ಲಿ ಅತಿದೊಡ್ಡ ಆರ್ಥಿಕ (ಆ ಖಂಡದ ಒಟ್ಟು ಉತ್ಪನ್ನದ ಶೇಕಡಾ 40 ಬ್ರೆಜಿಲ್‌ನದ್ದು) ಯುರೋಪಿಯನ್ ಒಕ್ಕೂಟದ ದೇಶಗಳು ಜರ್ಮನಿ, ಸ್ಪೈನ್, ಇಟಲಿ, ಹಾಲಂಡ್‌ನ ಬಹುರಾಷ್ಟ್ರೀಯ ಕಂಪನಿಗಳದ್ದು ಬ್ರೆಜಿಲ್‌ನ ಆರ್ಥಿಕದಲ್ಲಿ ದೊಡ್ಡ ಪಾಲು ಇದೆ. ಈ ಕಂಪನಿಗಳ ಶೇರು ಬೆಲೆಗಳು ಶೇಕಡಾ 5-10 ರಷ್ಟು ಇಳಿದಿದ್ದು ಈ ಆತಂಕಕ್ಕೆ ಕಾರಣ.

ಬ್ರೆಜಿಲ್ ಇತ್ತೀಚೆಗೆ ಐ.ಎಂ.ಎಫ್. ಸಾಲ ಪಡೆಯಲು ತೆಗದುಕೊಂಡ ಆರ್ಥಿಕ ಕ್ರಮಗಳ ಹಿನ್ನೆಲೆಯಲ್ಲಿ ಈ ಬಿಕ್ಕಟ್ಟು. ಈವರೆಗೆ ವಿಕಾಸ ಶೀಲ ದೇಶಗಳನ್ನು ಕಾಡುತ್ತಿರುವ ಬಿಕ್ಕಟ್ಟು ಎಲ್ಲ ಅಮೇರಿಕಾ ಯೂರೋಪು-ಜರ್ಮನ್‌ಗಳ ಆರ್ಥಿಕವನ್ನು ಬುಡಮೇಲು ಮಾಡುವುದೇ ಎಂಬ ಆತಂಕ ಈಗ.

ಜಪಾನಿಗೆ ಹೊಸ ಸಮ್ಮಿಶ್ರ ಸರ್ಕಾರ

ಜಪಾನ್‌ನಲ್ಲಿ ಆಳುತ್ತಿದ್ದ ಸಮ್ಮಿಶ್ರ ರಂಗದ ಸರ್ಕಾರಕ್ಕೆ ಇನ್ನೊಂದು ಪಕ್ಷ ಸೇರಿ ಹೊಸ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ.

ವಿರೋಧ ಪಕ್ಷವಾಗಿದ್ದ ಒಝಾವಾರ ನಾಯಕತ್ವದ ಬಲಪಂಥೀಯ ಲಿಬರಲ್ ಪಕ್ಷದ 12 ಜನರು ಆಳುವ ಸಮ್ಮಿಶ್ರ ರಂಗ ಸೇರಿ ಮಂತ್ರಿ ಮಂಡಲ ಪುನರ್ರಚಿಸಲಾಗಿದೆ. ಲಿಬರಲ್ ಪಕ್ಷದ ಇಬ್ಬರನ್ನು ಮಂತ್ರಿ ಮಂಡಲಕ್ಕೆ ಸೇರಿಸಲಾಗಿದೆ. ಒಬುಚಿ ಪ್ರಧಾನ ಮಂತ್ರಿಯಾಗಿ ಮುಂದುವರಿದಿದ್ದಾರೆ. ಆರ್ಥಿಕಕ್ಕೆ ಸಂಬಂಧಿಸಿದ ಯಾವ ಖಾತೆಗಳಲ್ಲೂ ಬದಲಾವಣೆ ತರಲಾಗಿಲ್ಲ.

ಹೊಸ ಸಮ್ಮಿಶ್ರ ಸರ್ಕಾರಕ್ಕೂ ಹಲವು ಪ್ರಮುಖ ಮಸೂದೆಗಳನ್ನು ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಲು ಇನ್ನೂ 11 ವೋಟುಗಳ ಕೊರತೆ ಇದೆ. ಸಣ್ಣ ಪಕ್ಷಗಳು, ಪಕ್ಷೇತರರ ಮೇಲೆ ಅವಲಂಬಿಸಬೇಕಾಗಿದೆ. ಆದರೆ ಲಿಬರಲ್ ಪಕ್ಷ ಸರ್ಕಾರ ಸೇರದಿದ್ದರೆ, ಒಬುಚಿ ಸರ್ಕಾರದ ಮುಂದುವರಿಕೆಯೇ ಅಸಾಧ್ಯವಾಗುತ್ತಿತ್ತು.

ಈ ಹೊಸ ಸಮ್ಮಿಶ್ರ ಸರ್ಕಾರಕ್ಕೆ ಮಾತುಕತೆ ಹಲವು ವಾರಗಳಿಂದ ನಡೆಯುತ್ತಿತ್ತು. ಆರ್ಥಿಕ ಸುಧಾರಣೆಗಳು ಅಧಿಕಾರ ಶಾಹಿಯಲ್ಲಿ ಬದಲಾವಣೆ, ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿ ಜಪಾನ್‌ನ ಮಿಲಿಟರಿ ತಂತ್ರ ಈ ಬಗ್ಗೆ ಎರಡೂ ಪಕ್ಷಗಳ ನಡುವೆ ಭಿನ್ನಾಭಿಪ್ರಾಯ ವಿತ್ತು. ಎರಡನೇ ಮಹಾಯುದ್ಧ ನಂತರದ ನಾಲ್ಕು ದಶಕಗಳ ಕಾಲ ಸತತವಾಗಿ ಆಳಿದ ಜಪಾನ್‌ನ ಆಳುವ ಬೂರ್ಜ್ವಾ ವರ್ಗದ ಪ್ರಮುಖ ಪಕ್ಷ ಲಿಬರಲ್ ಡೆಮೊಕ್ರಾಟಿಕ್ ಪಕ್ಷ ಇತ್ತೀಚಿನ ವರ್ಷಗಳಲ್ಲಿ ಹೋಳಾಗಿದ್ದರಿಂದ, ಬೂರ್ಜ್ವ ಆಳುವ ವರ್ಗ ತೀವ್ರ ರಾಜಕೀಯ ಬಿಕ್ಕಟ್ಟು ಎದುರಿಸುತ್ತಿದೆ. ಲಿಬರಲ್ ಪಕ್ಷ ಇಂತಹ ಆಳುವ ಪಕ್ಷ ಹೋಳು ಹೋಳಾದಾಗ ಉದ್ಭವಿಸಿದ ಒಂದು ಪಕ್ಷ. ಈ ಬೆಳವಣಿಗೆಯೊಂದಿಗೆ ಆಳುವ ರಂಗ ಇನ್ನಷ್ಟು ಬಲ ಪಂಥದತ್ತ ನಡೆದಂತಾಗಿದೆ. ಬೂರ್ಜ್ವಾದ ರಾಜಕೀಯ ಬಿಕ್ಕಟ್ಟನ್ನು ಸ್ವಲ್ಪಮಟ್ಟಿಗೆ ತಾತ್ಕಾಲಿಕವಾಗಿಯಾದರೂ ಪರಿಹರಿಸುವ ದೇಶದ ರಾದಕೀಯವನ್ನು ಬಲಪಂಥದತ್ತ ಒಯ್ಯುವಈಬೆಳವಣಿಗೆನಕಾರಾತ್ಮಕವಾದದ್ದೇ.

ಇರಾಕ್ ಭದ್ರತಾ ಸಮಿತಿ, ಅಮೇರಿಕ-ಬ್ರಿಟನ್‌ಗಳಿಗೆ ನುಂಗಲಾಗದ ತುತ್ತು

ಇರಾಕ್‌ನ ಬಿಕ್ಕಟ್ಟನ್ನು ಹೇಗೆ ಪರಿಹರಿಸುವುದು ಎಂಬುದು ಭದ್ರತಾ ಸಮಿತಿಗೆ ಅದರಲ್ಲೂ ಅಮೇರಿಕ ಬ್ರಿಟನ್ ಗಳಿಗೆ ನುಂಗಲಾರದ ತುತ್ತಾಗಿದೆ. ಅಮೇರಿಕ ಬ್ರಿಟನ್‌ಗಳು ಪುನ: ಶಸ್ತ್ರ ತಪಾಸಣೆ ತಂಡ (UNSCOM) ಪುನ: ಇರಾಕ್‌ಗೆ ತೆರಳಬೇಕು ಎಂದರೆ ರಶ್ಯಾ ಅದನ್ನು ಬರ್ಖಾಸ್ತು ಮಾಡಬೇಕು ಎನ್ನುತ್ತಿದೆ. ಫ್ರಾನ್ಸ್, ಚೀನಾಗಳು ಇದರ ಕೆಲಸ, ತಂಡ ಬದಲಾಯಿಸುವ ಬಗ್ಗೆ ಸಲಹೆಗಳನ್ನಿಟ್ಟಿದ್ದಾರೆ. ರಶ್ಯಾ ಇರಾಕ್ ಮೇಲೆ ದಿಗ್ಬಂಧನ ತೆಗೆಯಬೇಕು ಅಥವಾ ಗಮನಾರ್ಹವಾಗಿ ಸಡಿಲಿಸ ಬೇಕು, ಆಗ ಇರಾಕ್‌ನ ಶಸ್ತ್ರಾಸ್ತ್ರ ಕಾರ್ಯಕ್ರಮಗಳ ಮೇಲೆ ದೂರಗಾಮಿ ನಿಯಂತ್ರಣ ಇಡುವ ಕೆಲಸ ಸುಗಮವಾಗು ತ್ತದೆ ಎನ್ನುತ್ತಿದೆ. ಅಮೇರಿಕ ಬ್ರಿಟನ್‌ಗಳು ಇದನ್ನು ವಿರೋಧಿಸುತ್ತಿವೆ. ಇದರಿಂದ ಯಾವುದೇ ನಿರ್ಧಾರವಾಗದೆ ಇರಾಕ್ ವಿಷಯ ನೆನೆಗುದಿಗೆ ಬಿದ್ದಿದೆ. ಅಮೆರಿಕ UNSCOM ತಂಡವನ್ನು ಗೂಢಚರ್ಯೆಗೆ ಬಳಸಿತ್ತು ಎನ್ನುವ ಆಪಾದನೆ ವಿಶ್ವಸಂಸ್ಥೆ ಭದ್ರತಾ ಸಮಿತಿಗೆ ಇನ್ನಷ್ಟು ಮುಜುಗರ ತಂದಿದೆ.

ಈ ನಡುವೆ ಇರಾಕ್ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಯಾವುದೇ ನಿರ್ಧಾರಗಳನ್ನು ಮನ್ನಿಸುವುದಿಲ್ಲ ಎಂದು ಘೋಷಿಸಿದೆ. ದಿಗ್ಬಂಧನ ಸಡಿಲಿಸದೆ ಭದ್ರತಾ ಸಮಿತಿಯ ನಿರ್ಣಯಗಳನ್ನು ನಿರ್ಲಕ್ಷಿಸ ಲಾಗುವುದು ಎಂದಿದೆ. ಇದರಿಂದ ಎದುರಿಸ ಬೇಕಾದ ವಿಶ್ವ ಸಂಸ್ಥೆಯ ಕ್ರಮಗಳನ್ನು ಇರಾಕ್ ದೃಢವಾಗಿ ಎದುರಿಸುವುದು ಎಂದು ಸ್ಪಷ್ಟವಾಗಿ ಹೇಳಿದೆ.

ತುರ್ಕಿ ಗೊಂದಲ ಹೊಸ ಸರ್ಕಾರ

ತುರ್ಕಿಯಲ್ಲಿ ಬುಲೆಂಟ್ ಇಸೆವಿಟ್‌ರ ನಾಯಕತ್ವದಲ್ಲಿ ರಚಿಸಿದ ಜಾತ್ಯತೀತ ಸರ್ಕಾರ ಅಧಿಕಾರ ವಹಿಸಿಕೊಳ್ಳಲಿದೆ. ಅವರ ಡೆಮೊಕ್ರಾಟಿಕ್ ಎಡ ಪಕ್ಷದ ಬಲ ಪಾರ್ಲಿಮೆಂಟಿನಲ್ಲಿ ಸಣ್ಣದಾದರೂ ಎರಡು ದೊಡ್ಡ ಮಧ್ಯಮ ಬಲ ಪಂಥೀಯ ಪಕ್ಷಗಳ ಬೆಂಬಲದಿಂದ ಸರ್ಕಾರ ರಚಿತವಾಗಲಿದೆ. ಇಸ್ಲಾಮಿಕ್ ಮೂಲಭೂತವಾದಿ ಪಕ್ಷವನ್ನು ಅಧಿಕಾರದಿಂದ ಹೊರಗಿಟ್ಟು ಜಾತ್ಯಾತೀತ ಪಕ್ಷಗಳು ಸರ್ಕಾರ ನಡೆಸಬೇಕೆಂಬ ಉದ್ದೇಶದಿಂದ ಈ ವ್ಯವಸ್ಥೆ ಆಗಿದೆ. ಈ ಸರ್ಕಾರ ರಚನೆಯಿಂದ ತುರ್ಕಿಯಲ್ಲಿ ಇದ್ದ ಆರುವಾರಗಳ ರಾಜಕೀಯ ಬಿಕ್ಕಟ್ಟು ಕೊನೆಗಂಡಂತಾಗಿದೆ. ತುರ್ಕಿಯಲ್ಲಿ ಅತಿ ದೊಡ್ಡ ಪಕ್ಷವಾದ ಇಸ್ಲಾಮಿಕ್ ಮೂಲ ಭೂತವಾದಿ ಪಕ್ಷವನ್ನು ಅಧಿಕಾರದಿಂದ ಹೊರಗಿಡುವ ಪ್ರಯತ್ನದಲ್ಲಿ ರಚಿತವಾದ ಎರಡು ಮಧ್ಯಮ-ಬಲ ಪಂಥೀಯ ಪಕ್ಷಗಳ ಸರ್ಕಾರ ಭ್ರಷ್ಟಾಚಾರದ ಆಪಾದನೆಯಿಂದ ರಾಜೀನಾಮೆ ನೀಡಿದಾಗಿಂದ ತುರ್ಕಿಯಲ್ಲಿ ಸರ್ಕಾರ ಇರಲಿಲ್ಲ.



ಚೀನಾ-ವಿಯೆಟ್ನಾಂ ನಡುವೆ ಅಂಚೆ ಸೇವೆ ಪುನರಾರಂಭ

ಚೀನಾ ವಿಯೆಟ್ನಾಂಗಳ ನಡುವೆ ಹಿಂದೆ ನಿಂತಿದ್ದ ಅಂಚೆ ಸೇವೆ ಪುನರಾರಂಭ ವಾಗಿದೆ. ಇದು ಎರಡು ದೇಶಗಳ ನಡುವೆ ಸಂಬಂಧ ಉತ್ತಮಗೊಳ್ಳುತ್ತಿರುವುದರ ಭಾಗ. ಈ ಬಗ್ಗೆ ಕಳೆದ ತಿಂಗಳಲ್ಲಿ ಒಪ್ಪಂದವಾಗಿದ್ದು ಈಗ ಜಾರಿಯಾಗುತ್ತಿದೆ. 1979 ರಲ್ಲಿ ಈ ಎರಡು ದೇಶಗಳ ನಡುವೆ ಯುದ್ಧವಾದಾಗಿಂದ ಅಂಚೆ ಸೇವೆ ನಿಂತು ಹೋಗಿತ್ತು. ದಕ್ಷಿಣ ಚೀನಾ ಸಮುದ್ರದ ಮೇಲೆ ಹತೋಟಿ ಬಗ್ಗೆ, ಕೆಲವು ಗಡಿವಿವಾದ ಬಗೆಹರಿಯದಿದ್ದರೂ ಮಾತುಕತೆ ಮೂಲಕ ಬಗೆಹರಿಸುವ ಬಗ್ಗೆ ಒಮ್ಮತವಿದೆ. ಸಂಬಂಧ ಸಾಮಾನ್ಯಗೊಳಿಸುವ ಬಗ್ಗೆ ಎರಡೂ ದೇಶಗಳು ಮುತುವರ್ಜಿ ವಹಿಸುತ್ತಿವೆ.

ಯುರೋಪಿಯನ್ ಕಮೀಶನ್‌ನಲ್ಲಿ ಭ್ರಷ್ಟಾಚಾರ ವಾಗ್ದಂಡನೆ ನಿಲುವಳಿ ರದ್ದು

ಯುರೋ ಈಗಷ್ಟೇ ಆರಂಭವಾಗಿರುವ ಹಿನ್ನೆಲೆಯಲ್ಲಿ ಯುರೋಪಿಯನ್ ಒಕ್ಕೂಟ ತೀವ್ರ ಬಿಕ್ಕಟ್ಟು ಎದುರಿಸಿತು ಇತ್ತೀಚೆಗೆ. ಯುರೋಪಿಯನ್ ಒಕ್ಕೂಟದ ಅಧ್ಯಕ್ಷರಿಗೆ ಯುರೋಪಿಯನ್ ಒಕ್ಕೂಟ ಸರ್ಕಾರ ನಡೆಸಲು ಸಹಾಯ ಮಾಡುವ 20 ಸದಸ್ಯರ ಯುರೋಪಿಯನ್ ಕಮೀಶನ್ ಚುನಾಯಿತ ಸಂಘಟನೆ ಅಲ್ಲ. ಆದರೆ ಇಡೀ ಯುರೋಪಿಯನ್ ಸರ್ಕಾರ ಚುನಾಯಿತ ಒಕ್ಕೂಟದ ಎಲ್ಲಾ ವಿಭಾಗಗಳ ಅಧಿಕಾರಿ ಉದ್ಯೋಗಿಗಳನ್ನು ನಿಯಂತ್ರಿಸುವ ಅಪಾರ ಅಧಿಕಾರ ಹೊಂದಿದೆ. ಒಕ್ಕೂಟದ ಆಡಿಟ್ ಕೋರ್ಟ್ ಪ್ರಕಾರ ವ್ಯಾಪಕ ಬಜೆಟ್‌ನ ಶೇಕಡಾ 5 ರಷ್ಟು (ಸುಮಾರು ಮೂರು ಶತಕೋಟಿ ಪೌಂಡು) ಅವ್ಯವಹಾರ ಭ್ರಷ್ಟಾಚಾರ ನಡೆದಿದೆ. ಕಲ್ಯಾಣ ಯೋಜನೆಗಳ ಹಣವನ್ನು ಬೇರೆಡೆಗೆ ತಿರುಗಿಸಿದ್ದು ಮುಖ್ಯ ಆಪಾದನೆ. ಇದರಿಂದ ಕುಪಿತರಾದ ಯುರೋ ಪಾರ್ಲಿಮೆಂಟಿನ ಎಡಪಂಥೀಯ ಸದಸ್ಯರು ಇಡೀ ಕಮೀಶನ್ ವಾಗ್ದಂಡನೆ ವಿಧಿಸುವ ಹಾಗೂ ಇಬ್ಬರು ನಿರ್ದಿಷ್ಟ ಆಪಾದನೆಗಳಿರುವ ಇಬ್ಬರು ಕಮೀಶನರ್ ಗಳನ್ನು ರಾಜೀನಾಮೆ ಕೊಡಬೇಕು ಎಂಬ ಗೊತ್ತುವಳಿ ತಂದಿದ್ದರು. ಆದರೆ ಮತದಾನದ ಸಮಯದಲ್ಲಿ ಅದು ತಿರಸತವಾಗಿದೆ. ಯುರೋ ಪಾರ್ಲಿಮೆಂಟಿನ 626 ಸದಸ್ಯರಲ್ಲಿ 552 ಸದಸ್ಯರು ಮತದಾನ ಮಾಡಿದ್ದಾರೆ. ಗೊತ್ತುವಳಿ ಪರ 232 ವಿರುದ್ಧ 293 ಮತ ನೀಡಿ. ಈ ಗೊತ್ತುವಳಿ ತಿರಸತವಾದರೂ ಯುರೋಪಿಯನ್ ಒಕ್ಕೂಟದ ಈ ಕರ್ಮಕಾಂಡ ಎಲ್ಲರೂ ಹುಬ್ಬೇರಿಸುವಂತೆ ಮಾಡಿದೆ. ಯುರೋಪಿಯನ್ ಕಮೀಶನ್ ಪ್ರಜಾಸತ್ತೆ ವಿರೋಧಿ ಸ್ವರೂಪವನ್ನು ಬಯಲಿಗೆಳೆದಿದೆ. ಈ ಗೊತ್ತುವಳಿ ಮಂಜೂರಾಗಿದ್ದರೆ ಇಡೀ ಕಮೀಶನ್‌ನ 20 ಸದಸ್ಯರನ್ನು ಬದಲಾಯಿಸಬೇಕಾಗಿತ್ತು. ○

ಕಝಾಕ್ ಚುನಾವಣೆಯಲ್ಲಿ ಪ್ರಸ್ತುತ ಅಧ್ಯಕ್ಷರಿಗೆ ಜಯ

ಮಾಜಿ ಸೋವಿಯೆತ್ ಗಣರಾಜ್ಯ ಕಝಾಕಿಸ್ತಾನದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಪ್ರಸ್ತುತ ಅಧ್ಯಕ್ಷ ನಜರ್‌ಬಯೆವ್ ಪುನರಾಯ್ಕೆಯಾಗಿದ್ದಾರೆ. ಅವರಿಗೆ ಶೇಕಡಾ 78 ಮತಗಳು ದೊರಕಿದ್ದು, ಅವರ ಪ್ರಮುಖ ಪ್ರತಿಸ್ಪರ್ಧಿ ಕಮ್ಯುನಿಸ್ಟ್ ಪಕ್ಷದ ಅಹ್‌ದಿಲ್‌ದಿನ್‌ರಿಗೆ ಶೇಕಡಾ 13.5 ಮತಗಳು ದೊರಕಿದ್ದವು. ಆದರೆ ಚುನಾವಣೆ ನ್ಯಾಯಯುತವಾಗಿರಲಿಲ್ಲ. ಮಾಮೂಲು ಅವಧಿ ಮುಗಿಯುವುದಕ್ಕಿಂತ ಮೊದಲೇ ಹಠಾತ್ತಾಗಿ ಚುನಾವಣೆ ಘೋಷಿಸಿದ್ದು, ಕೆಲವು ಪ್ರತಿ ಸ್ಪರ್ಧಿಗಳ ಮೇಲೆ ಸ್ಪರ್ಧಿಸದಂತೆ ಒತ್ತಡ ಹಾಕುವುದು ಇತ್ಯಾದಿ ಅಕ್ರಮಗಳು ನಡೆದಿವೆ ಎನ್ನಲಾಗಿದೆ.

ಕ್ಯೂಬಾ ಕ್ರಾಂತಿಗೆ 40 ವರ್ಷಗಳು ದೇಶದಾದ್ಯಂತ ವಿಜಯೋತ್ಸವ



ಕ್ಯೂಬಾದಾದ್ಯಂತ ಅಲ್ಲಿನ ಕ್ರಾಂತಿಯ 40 ವರ್ಷಗಳ ವಾರ್ಷಿಕೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಸಾಮಾನ್ಯವಾಗಿ ರಾಜಧಾನಿ ಹವಾನದಲ್ಲಿ ದೇಶವನ್ನುದ್ದೇಶಿಸಿ ಮಾಡುವ ಭಾಷಣದ ಬದಲು ಕ್ಯಾಸ್ಟ್ರೋ ಅಲ್ಲಿಂದ 800 ಕಿ.ಮೀ. ಪೂರ್ವದಲ್ಲಿರುವ ಸ್ಯಾಂಟಿಯಾಗೊ ಡಿ ಕ್ಯೂಬಾ ಎಂಬ ಪಟ್ಟಣದಲ್ಲಿ ಭಾಷಣ ಮಾಡಿದ್ದರು. ಆ ಪಟ್ಟಣದಲ್ಲೇ ಕ್ಯಾಸ್ಟ್ರೋದ ನಾಯಕತ್ವದಲ್ಲಿ ಗೆರಿಲ್ಲಾ ಪಡೆಗಳು ಸರ್ವಾಧಿಕಾರಿ ಬ್ಯಾಟಿಸ್ಟಾ ಪಡೆಗಳನ್ನು ಹಿಮ್ಮೆಟ್ಟಿಸುತ್ತಿದ್ದಂತೆ ಆತ ಜನವರಿ 1, 1959 ರಂದು ದೇಶ ಬಿಟ್ಟು ಓಡಿಹೋಗಿದ್ದ ಆತನ ಸರ್ಕಾರದ ಅಧಿಕಾರಿಗಳು ಇತರರು ದಿಕ್ಕಾಪಾಲಾಗಿ ಓಡಿದ್ದರು. ಕ್ಯೂಬನ್ ಕ್ರಾಂತಿ ವಿಜಯವಾದುದನ್ನು ದೇಶಕ್ಕೆ ಘೋಷಿಸಿ ಇಡೀ ದೇಶವನ್ನುದ್ದೇಶಿಸಿ ಕ್ಯಾಸ್ಟ್ರೋ ಆಗ ಇಲ್ಲಿಂದ ಭಾಷಣ ಮಾಡಿದ್ದರು. 7 ದಿನಗಳ ನಂತರ ಹವಾನ ವನ್ನು ಗೆರಿಲ್ಲಾ ಪಡೆಗಳು ವಶಪಡಿಸಿಕೊಂಡು ಕ್ಯಾಸ್ಟ್ರೋ ನಗರವನ್ನು ಪ್ರವೇಶಿಸಿದ್ದರು. ಸ್ಯಾಂಟಿಯಾಗೋ ಡಿ ಕ್ಯೂಬಾದ 40 ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಇಬ್ಬರು ಎಡಪಂಥೀಯ ಕ್ಯೂಬಾದ ಗೆಳೆಯರಾದ ನೊಬೆಲ್ ಪ್ರಶಸ್ತಿ ವಿಜೇತ ಸಾಹಿತಿಗಳು ವಿಶೇಷ ಆಹ್ವಾನಿತರಿದ್ದರು. ಅವರೆಂದರೆ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೇಝ್ ಮತ್ತು ಈ ವರ್ಷದ ನೊಬೆಲ್ ಪ್ರಶಸ್ತಿ ವಿಜೇತ ಪೋರ್ಚುಗಲ್‌ನ ಜೋಸ್ ಸರಮಾಗೊ.

39 ವರ್ಷಗಳ ಹಿಂದೆ ಮಾರ್ಚ್ 5 1960 ರಂದು ಲಾಕೂಬರ್ ಹಡಗಿನ ಮೇಲೆ ಅಮೆರಿಕಾ ಹಾಕಿದ ಬಾಂಬ್ ಸ್ಫೋಟದಲ್ಲಿ ಆಹುತಿಯಾದವರ ಅಂತಿಮ ಮೆರವಣಿಗೆಯಲ್ಲಿ ಕೈಕೈ ಹಿಡಿದು ಸಾಗಿರುವ ಕ್ಯೂಬಾ ಕ್ರಾಂತಿಯ ಮುಖಂಡರು - ಕ್ಯಾಸ್ಟ್ರೋ ಮತ್ತು ಚೆ ಯವರನ್ನು ಇಲ್ಲಿ ಗುರುತಿಸಬಹುದು.



ಹವಾನದಲ್ಲಿ ಕಮ್ಯುನಿಸ್ಟ್ ಯುವಜನ ಒಕ್ಕೂಟದ ಅಧ್ಯಕ್ಷ ಒಟ್ಟೊ ರಿವೆರೊ ಮಾತನಾಡಿದರು. ಕ್ಯೂಬಾದ ಅತ್ಯಂತ ಜನಪ್ರಿಯ ಕ್ರಾಂತಿಕಾರಿ ಹಾಡು 'ಗುಂತನಮೆರಾ' ಹಾಡುತ್ತಿದ್ದಂತೆ ಪಾರಿವಾಳಗಳು ಮೇರಿತೆಲ್ ಸುತ್ತ ಹಾರಾಡುತ್ತಿದ್ದವು. 1959 ರಲ್ಲಿ ಕ್ಯಾಸ್ಟ್ರೋ ಇದೇ ಜಾಗದಲ್ಲಿ ಭಾಷಣ ಮಾಡುತ್ತಿದ್ದಾಗ ಪಾರಿವಾಳಗಳು ಆತನ ಭುಜದ ಮೇಲೆ ಕುಳಿತದ್ದು ಎಲ್ಲರಿಗೂ ನೆನಪಿಸಿತಂತೆ (ಸ್ವತಃ 40 ವರ್ಷಗಳನ್ನು ನೋಡಿದ್ದವರಿಗೆ ಅವರ ಬಗ್ಗೆ ಕೇಳಿದ್ದವರಿಗೆ)

ಈ ಸಂದರ್ಭದಲ್ಲಿ 8 ದಿನಗಳ ಕಾಲ ಯುವಕರ ಜಾಥಾವೊಂದು ಸ್ಯಾಂಟಿಯಾಗೊ ದಿಂದ ಹವಾನದವರೆಗೆ 40 ವರ್ಷಗಳ ಹಿಂದೆ ಕ್ಯಾಸ್ಟ್ರೋನ ಗೆರಿಲ್ಲಾ ಪಡೆಗಳು ಹಿಡಿದ ಹಾದಿಯನ್ನು ಪುನ: ಹಿಡಿಯಿತು. ಈ ಜಾಥಾ ನಿಂತಲ್ಲೆಲ್ಲಾ ಮಕ್ಕಳು ಕ್ಯಾಸ್ಟ್ರೋನಂತೆ ಮಿಲಿಟರಿ ಸಮವಸ್ತ್ರ ತೊಟ್ಟು ಗಡ್ಡಗಳನ್ನು ಅಂಟಿಸಿಕೊಂಡು ಕ್ಯಾಸ್ಟ್ರೋ ಬಾಷಣಗಳನ್ನು ಹೊಡೆಯುತ್ತಿದ್ದುದು ರೋಚಕವಾಗಿತ್ತು.

40 ವರ್ಷಗಳ ವಾರ್ಷಿಕೋತ್ಸವ ಆಚರಿಸುತ್ತಿದ್ದಂತೆ ಒಂದು ಕೋಟಿ ಕ್ಯೂಬನ್ನರು ತಾವು ಈ ವರ್ಷಗಳಲ್ಲಿ ಸಾಧಿಸಿದ ಪುರಾವೆ ಸಾಧನೆಗಳ ಬಗ್ಗೆ ಹೆಮ್ಮೆ ಪಟ್ಟುಕೊಂಡಿರಬೇಕು. 37 ವರ್ಷಗಳ ಕಾಲ ಜಗತ್ತಿನ ಚರಿತ್ರೆಯಲ್ಲಿ ಅತ್ಯಂತ ಪ್ರಬಲ ದೇಶ ಮಿಲಿಟರಿ ಆರ್ಥಿಕ ದಿಗ್ಬಂಧನವನ್ನು ಮೆಟ್ಟಿ ನಿಂತ ಕೆಚ್ಚು ಹೆಮ್ಮೆ ಎಲ್ಲರಿಗಿತ್ತು. ಕ್ಯಾಸ್ಟ್ರೋ, ಕ್ಯೂಬಾ ಕ್ರಾಂತಿಗಳನ್ನು ಹೊಸಕಿ ಹಾಕಲೆತ್ನಿಸಿದ ನಲ್ವತ್ತು ವರ್ಷಗಳ 11 ಅಮೆರಿಕನ್ ಅಧ್ಯಕ್ಷರುಗಳ ಅವರ ಸರಕಾರಗಳ ನೂರಾರು ಪ್ರಯತ್ನಗಳನ್ನು ಹಿಮ್ಮೆಟ್ಟಿಸಿದವರು ಅದನ್ನು ನೆನೆದರು. ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನದ ಮೂರು ಪಟ್ಟು 60 ಶತಕೋಟಿ ಡಾಲರುಗಳಷ್ಟು ನಷ್ಟ ದಿಗ್ಬಂಧನದಿಂದ ಅನುಭವಿಸಿದರೂ ಸಾಮಾಜಿಕ ಪ್ರಗತಿಯ ಸೂಚಕಗಳಲ್ಲಿ ಅಮೆರಿಕವನ್ನು ಮೀರಿಸಿದ ಕೀರ್ತಿ ಅವರದು.

ನಾಲ್ಕು ದಶಕಗಳ ಕೆಚ್ಚು, ಕ್ರಾಂತಿಕಾರಿ ಉತ್ಸಾಹ ಅತ್ಯಂತ ಪ್ರಬಲ ಅಮೆರಿಕನ್ ಸಾಮ್ರಾಜ್ಯಶಾಹಿಯ ದಿಗ್ಬಂಧನವನ್ನು ಅರ್ಥಹೀನವಾಗಿಸಿದೆ. 351 ಕಂಪನಿಗಳು ಕ್ಯೂಬಾದಲ್ಲಿ ಬಂಡವಾಳ ಹೂಡಿವೆ. ಅವುಗಳಲ್ಲಿ 181 ಕಂಪನಿಗಳು ಅಮೆರಿಕ ಕ್ಯೂಬಾದಲ್ಲಿ ಬಂಡವಾಳ ಹೂಡಿದರೆ ಶಿಕ್ಷೆ ವಿಧಿಸುವ ಕಾನೂನನ್ನು ತಂದ ಮೇಲೆ ಬಂದಂಥವು. ಕಳೆದ ವರ್ಷ ಪೋಪರ ಭೇಟಿ ನಂತರ ಅಮೇರಿಕ ಕ್ಯೂಬಾವನ್ನು ಒಬ್ಬಂಟಿಗಗೊಳಿಸ ಹೋಗಿ ತಾನೇ ಒಬ್ಬಂಟಿಯಾಗಿದೆ. ಕ್ಯೂಬಾದ ವಿರುದ್ಧ ದಿಗ್ಬಂಧನ ಸಹ ಹಾಕಲಾಗಿದೆ ಅದನ್ನು ಸಡಿಸಿಲಿ ಕಿತ್ತುಹಾಕಿ ಎಂದು ಅಮೇರಿಕ ದೊಳಗೆ ಧ್ವನಿ ಎದ್ದಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಅಧ್ಯಕ್ಷ ಕ್ಲಿಂಟನ್ ಕಾಟಾಚಾರ ಕ್ಕಾದರೂ ಕೆಲವು ಸಡಿಲಿಕೆಗಳನ್ನು 40 ನೇ ವಾರ್ಷಿಕದ ಕೆಲವು ದಿನಗಳ ಹಿಂದೆ ಪ್ರಕಟಿಸಿದರು. ಕ್ಯೂಬಾಕ್ಕೆ ನೇರ ವಿಮಾನ ಯಾನ ಆರಂಭ ಹಾಗೂ ಅಮೆರಿಕದಲ್ಲಿ ನೆಲೆಸಿದ ಕ್ಯೂಬನ್ನರು ತಮ್ಮ ಕುಟುಂಬಗಳಿಗೆ 1200 ಡಾಲರು ಪ್ರತಿ ತಿಂಗಳು ಕಳುಹಿಸಬಹುದು ಎಂಬ ಸಡಿಲಿಕೆಯನ್ನು ಕ್ಯೂಬಾ ನಗಣ್ಯ ಎಂದು ತಳ್ಳಿಹಾಕಿದರೂ ಅದು ಕ್ಯೂಬಾದ ಕೆಚ್ಚಿನ ಮುಂದೆ ಅಮೇರಿಕ ಸ್ವಲ್ಪವಾದರೂ ಮಣಿದದ್ದರ ದ್ಯೋತಕ

ಇದು ಚರ್ಚೆಯ ಸಮಯವಲ್ಲ ಸ್ವಾಮಿ, ಹಿಂಸಾಚಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕಾದ ಸಮಯ

ಪ್ರಧಾನ ಮಂತ್ರಿಗಳಿಗೆ ಮಹಿಳಾ ಸಂಘಟನೆಗಳ ಆಗ್ರಹ

ಜನವರಿ 16 ರಂದು ನವದೆಹಲಿಯಲ್ಲಿ ನೂರಾರು ಮಹಿಳೆಯರು ರಾಷ್ಟ್ರೀಯ ಮಹಿಳಾ ಸಂಘಟನೆಗಳ ಆಶ್ರಯದಲ್ಲಿ ನಡೆದ ಒಂದು ಧರಣಿ ಕಾರ್ಯಕ್ರಮ ಹಾಗೂ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ ಗುಜರಾತ್ ಮತ್ತಿತರ ಕಡೆ ಸಂಘ ಪರಿವಾರದ ಧಾಳಿಗಳಿಗೆ ತುತ್ತಾಗಿರುವ ಕ್ರೈಸ್ತ ಸಮುದಾಯದ ಜನಗಳೊಡನೆ ಸೌಹಾರ್ದತೆ ವ್ಯಕ್ತಪಡಿಸಿದರು. "ಚರ್ಚೆಯಲ್ಲ - ಕ್ರಮ ಬೇಕು", "ಕ್ರೈಸ್ತರ ಮೇಲೆ ಧಾಳಿ - ಸಂವಿಧಾನದ ಮೇಲೆ ಧಾಳಿ" ಇವು ಆ ಸಭೆಯಲ್ಲಿ ಕೇಳಿ ಬಂದ ಘೋಷಣೆಗಳು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಅಖಿಲ ಭಾರತ ಮಹಿಳಾ ಸಮ್ಮೇಳನ, ಮಹಿಳಾ ಅಭಿವೃದ್ಧಿ ಅಧ್ಯಯನ ಕೇಂದ್ರ, ಮಹಿಳಾ ದಕ್ಷತಾ ಸಮಿತಿ, ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ, ಯಂಗ್ಸ್ ವಿಮೆನ್ಸ್, ಕ್ರಿಶ್ಚಿಯನ್ ಅಸೋಸಿಯೇಷನ್ ಆಫ್ ಇಂಡಿಯಾ, ಮಹಿಳಾ ಆಯೋಗ(ಸಿಬಿಸಿಐ) ಮುಂತಾದ ಸಂಸ್ಥೆಗಳು ಭಾಗವಹಿಸಿದ್ದ ಈ ಸಭೆಯ ನಂತರ ಪ್ರಧಾನ ಮಂತ್ರಿಗಳಿಗೆ ಒಂದು ಮನವಿ ಪತ್ರ ಸಲ್ಲಿಸಲಾಯಿತು ಎಂದು ಈ ಸಂಸ್ಥೆಗಳ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.


ಕೇವಲ ಗುಜರಾತಿನಲ್ಲೇ ಕಳೆದ ಕೆಲವು ತಿಂಗಳಲ್ಲಿ 113 ಇಂತಹ ಧಾಳಿಗಳು ನಡೆದಿವೆ. ಆದರೂ ಗುಜರಾತ್ ಸರಕಾರ ಮೂಕ ಪ್ರೇಕ್ಷಕನಾಗಿ ಉಳಿದಿವೆ. ಸಂಘ ಪರಿವಾರದ ಈ ಅಜೆಂಡಾವನ್ನು ದಾರಿದ್ರ್ಯದಲ್ಲಿ ತೊಳಲಾಡುತ್ತಿರುವ, ಅತ್ಯಂತ ಹೀನ ಆರ್ಥಿಕ ಮತ್ತು ಸಾಮಾಜಿಕ ಶೋಷಣೆಗೆ ಒಳಗಾಗಿರುವ ಬುಡಕಟ್ಟು ಜನಗಳೇ ಹೆಚ್ಚಾಗಿರುವ ಪ್ರದೇಶಗಳಲ್ಲಿ ಜ್ಯಾರಿಗೆ ತರುತ್ತಿರುವುದು ಒಂದು ಅತಿದೊಡ್ಡ ದುರಂತ ಎಂದಿರುವ ಈ ಮನವಿ ಪತ್ರ ಧರ್ಮದ ಹೆಸರಲ್ಲಿ ಬುಡಕಟ್ಟು ಜನಗಳನ್ನು ವಿಭಜಿಸಿ ಕೋಮುವಾದಿ ಶಕ್ತಿಗಳು ಆ ಜನಗಳನ್ನು ಶೋಷಿಸಿ ಸಿರಿವಂತರಾಗಿರುವ ದೊಡ್ಡ ವ್ಯಾಪಾರಸ್ಥರು, ಕಾಳ ಸಂತೆಕೋರರು, ಲೇವಾದೇವಿಗಾರರು ಮತ್ತಿತರ ಪಟ್ಟಭದ್ರ ಹಿತಾಸಕ್ತಿಗಳಿಗೆ ನೆರವಾಗುತ್ತಿದ್ದಾರಷ್ಟೇ ಎಂದಿದೆ.

'ಪ್ರಧಾನ ಮಂತ್ರಿಗಳು ಅಲ್ಪಸಂಖ್ಯಾತರಿಗೆ ರಕ್ಷಣೆಯ ಭರವಸೆ ನೀಡುತ್ತಾರೆಂದು ನಿರೀಕ್ಷಿಸಿದ್ದಾಗ ನೀವು ರಾಷ್ಟ್ರೀಯ ಚರ್ಚೆಯ ಕರೆ ನೀಡಿದ್ದೀರಿ. ಸ್ವಾಮಿ, ಧಾರ್ಮಿಕ ಗ್ರಂಥಗಳನ್ನು ಸುಡುತ್ತಿರುವಾಗ, ಪ್ರಾರ್ಥನಾ ಸ್ಥಳಗಳನ್ನು ಧ್ವಂಸ ಮಾಡುತ್ತಿರುವಾಗ, ಅಪವಿತ್ರಗೊಳಿಸುತ್ತಿರುವಾಗ ಕ್ರೈಸ್ತ ಪುರೋಹಿತರು, ಸನ್ಯಾಸಿನಿಯರ ಮೇಲೆ ಹಿಂಸಾಚಾರ ಧಾಳಿ ನಡೆಯುತ್ತಿರುವಾಗ ರಾಷ್ಟ್ರೀಯ ಚರ್ಚೆ ಸಾಧ್ಯವೇ?" ಎಂದು ಪ್ರಧಾನಿಗಳನ್ನು ಖಾರವಾಗಿ ಪ್ರಶ್ನಿಸಿರುವ ಈ ಮನವಿ ಖಂಡಿತಾ ಇದು ರಾಷ್ಟ್ರೀಯ ಚರ್ಚೆಯ ಸಮಯವಲ್ಲ, ಸಂವಿಧಾನವನ್ನು ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಸಮಯ ಎಂದು ನೆನಪಿಸಿತು. "ನಿಮ್ಮ ಸಂದೇಶವನ್ನು ಹಿಂದೂ ಜಾಗರಣಾ ಮಂಚ್‌ನ ವಿಕೃತ ತರ್ಕದ ಸಮರ್ಥನೆ ಎಂದು ಬಗೆದು ನಿಮ್ಮ ಭೇಟಿಯ ಬೆನ್ನ ಹಿಂದೆಯೇ ಅದೇ ಪ್ರದೇಶದಲ್ಲಿ ಇನ್ನೆರಡು ಧಾಳಿಗಳು ನಡೆದಿವೆ' ಎಂದೂ ಮನವಿ ಪತ್ರ ಪ್ರಧಾನಿಗಳ ಗಮನಕ್ಕೆ ತಂದಿತು.

ಈ ಧಾಳಿಗಳು ಯುವಜನರ 'ದೇಶಭಕ್ತಿ ಹಿಂದುವಿನ' ಸಂಕೇತ ಎಂದು ವಿಹೆಚ್‌ಪಿ, ಭಜರಂಗ ದಳ ಹೇಳಿಕೊಳ್ಳುತಿರುವುದನ್ನು ಖಂಡಿಸಿದ ಮಹಿಳಾ ಸಂಘಟನೆಗಳ ಈ ಮನವಿ ಪತ್ರ, ಇದು ಕೋಮುವಾದಿ ಅಪಪ್ರಚಾರವಲ್ಲದೆ ಬೇರೇನೂ ಅಲ್ಲ, ಬಹುಸಂಖ್ಯಾತರಷ್ಟೇ ದೇಶಭಕ್ತರಲ್ಲ, ಅಲ್ಪಸಂಖ್ಯಾತರಿಗೆ ಇಂತಹ ಹಿಂಸಾಚಾರಗಳಿಂದ ದೇಶಭಕ್ತಿಯ ಪಾಠ ಬೇಕಿಲ್ಲ ಎಂದು ಖಂಡತುಂಡಾಗಿ ಪ್ರಧಾನಿಗಳಿಗೆ ಹೇಳಿದೆ. ದೇಶಪ್ರೇಮದ ಹೆಸರಲ್ಲಿ ಇಂತಹ ಹಿಂಸಾಚಾರವನ್ನು ಸಮರ್ಥಿಸುವುದೇ ರಾಷ್ಟ್ರ-ವಿರೋಧಿಗಳು, ಅವರನ್ನು ಬಂಧಿಸಿ ವಿಚಾರಣೆ ನಡೆಸಬೇಕು ಎಂದು ಈ ಸಂಘಟನೆಗಳು ಪ್ರಧಾನ ಮಂತ್ರಿಗಳನ್ನು ಆಗ್ರಹಪಡಿಸಿವೆ.

"ಸ್ವಾಮೀ, ಪ್ರಧಾನ ಮಂತ್ರಿಯಾಗಿ ನೀವು ಸಂಕುಚಿತ ಪರಿಗಣನೆಗಳಿಂದ ಮೇಲೆದ್ದು ನಿಂತು ಭಾರತದ ಸಂವಿಧಾನವನ್ನು ಎತ್ತಿ ಹಿಡಿಯಬೇಕು ಎಂದು ನಿಮ್ಮನ್ನು ಆಗ್ರಹ ಪಡಿಸುತ್ತೇವೆ" ಎನ್ನುತ್ತಾ "ಮಹಿಳೆಯರಾಗಿ ನಮಗೆ ಶಾಂತಿ-ಸೌಹಾರ್ದ ಅತಿ ಅಗತ್ಯ. ನಾವು ಕೋಮುವಾದಿ ದ್ವೇಷ ಪ್ರಸಾರದ ವಿರುದ್ಧ ಎಲ್ಲಾ ಜಾತಿ-ಮತಗಳ ಮಹಿಳೆಯರ ನಡುವೆ ನಿರಂತರವಾಗಿ ಕೆಲಸ ಮಾಡಿದ್ದೇವೆ, ನಮ್ಮ ದೇಶದ ಧರ್ಮನಿರಪೇಕ್ಷ ಹಂದರವನ್ನು ರಕ್ಷಿಸಿದ್ದೇವೆ. ಏನೇ ಬರಲಿ ಈ ನೀತಿಗಳನ್ನು ಎತ್ತಿ ಹಿಡಿಯಲು ನಾವು ಬದ್ಧ ಕಂಕಣರು ಎಂಬ ಭರವಸೆ ನಿಮಗೆ ನೀಡುತ್ತೇವೆ" ಎನ್ನುತ್ತಾ ಮನವಿ ಪತ್ರ ಗುಜರಾತ್ ಸರ್ಕಾರ ರಾಜೀನಾಮೆ ನೀಡಬೇಕು, ಅಲ್ಪಸಂಖ್ಯಾತರಲ್ಲಿ ಭಯೋತ್ಪಾದನೆ ಉಂಟು ಮಾಡಿರುವವರ ಮೇಲೆ ತಕ್ಷಣ ಕ್ರಮ ಕೈಗೊಳ್ಳಬೇಕು, ಹಾಳುಗೆಡವಲ್ಪಟ್ಟ ಪ್ರಾರ್ಥನಾ ಸ್ಥಳಗಳಿಗೆ, ಸಂಸ್ಥೆಗಳಿಗೆ ಪರಿಹಾರ ನೀಡಬೇಕು ಹಾಗೂ ತಕ್ಷಣ ಅಲ್ಪಸಂಖ್ಯಾತರ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.





ಜನವರಿ 2, 1999 ರಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್‌ರವರು 'ಕ್ರಿಯಾ ಪ್ರಕಾಶನ'ದ ನೂತನ ಕಾರ್ಯಾಲಯವನ್ನು ಸರಳ ಸಮಾರಂಭವೊಂದರಲ್ಲಿ ಉದ್ಘಾಟಿಸಿದರು. 'ಕ್ರಿಯಾ'ದ ನಿರ್ದೇಶಕ ವಿ.ಜೆ.ಕೆ.ನಾಯರ್‌ರವರನ್ನು ಚಿತ್ರದಲ್ಲಿ ಕಾಣಬಹುದು

ಪೇಟೆಂಟ್ ಕಾನೂನು ಮತ್ತು ವಿಮಾ ಮಸೂದೆಯ ವಿರುದ್ಧ ಹೋರಾಟ ತೀವ್ರ

ರಾಷ್ಟ್ರೀಯ ವೇದಿಕೆ ನಿರ್ಧಾರ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ (ಎನ್.ಪಿ.ಎಂ.ಓ) ಜನವರಿ 14 ರಂದು ಸಿಐಟಿಯು ಕಛೇರಿಯಲ್ಲಿ ಸಭೆ ಸೇರಿ ಡಿಸೆಂಬರ್ 11, 1998 ರ ಬೃಹತ್ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದ ನಂತರದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿತು. 40 ಸಂಘಟನೆಗಳ ಪ್ರತಿನಿಧಿ ಗಳು ಇದರಲ್ಲಿ ಭಾಗವಹಿಸಿದ್ದರು. ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಕೆ.ಎಲ್.ಮಹೇಂದ್ರ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಡಿಸೆಂಬರ್ 11 ರ ಮುಷ್ಕರದಲ್ಲಿ ವ್ಯಕ್ತಗೊಂಡ ವ್ಯಾಪಕ ಕ್ರೋಧ ಹಾಗೂ ಹುರುಪನ್ನು ಗಮನಿಸಿ ಮುಂದುವರಿಯುತ್ತಿರುವ ಭಾರತ ಸರಕಾರದ ವಿನಾಶಕಾರಿ ಆರ್ಥಿಕ ನೀತಿಗಳು ಹಾಗೂ ಕೋಮುವಾದಿ ಶಕ್ತಿಗಳಿಗೆ ಪೋಷಣೆಯ ಹಿನ್ನೆಲೆಯಲ್ಲಿ ಹೋರಾಟವನ್ನು ಉನ್ನತ ಮಟ್ಟಗಳಿಗೆ ಕೊಂಡೊಯ್ಯಬೇಕು ಎಂದು ನಿರ್ಧರಿಸಲಾಯಿತು.

ಭಾರತೀಯ ಪೇಟೆಂಟ್ ಕಾನೂನಿಗೆ ತಿದ್ದುಪಡಿ ತಂದು ಬಹುರಾಷ್ಟ್ರೀಯ ಕಂಪನಿಗಳಿಗೆ ಮಾತ್ರ ವಿಶೇಷ ಮಾರಾಟ ಹಕ್ಕು ನೀಡಿರುವುದನ್ನು ವಿದೇಶಿ ವಿಮಾ ಕಂಪನಿಗಳೂ ಸೇರಿದಂತೆ ಗುತ್ತೇದಾರಿಗಳಿಗೆ 40% ದವರೆಗೆ ಬಂಡವಾಳ ಹೂಡಲು ಅವಕಾಶ ನೀಡಿರುವುದು ದೇಶದ ಸ್ವಾವಲಂಬನೆಯನ್ನು ಬುಡಮೇಲು ಮಾಡಿ ನಮ್ಮ ಸಾರ್ವಭೌಮತೆಗೆ ಏಟು ನೀಡಿವೆ ಎಂದಿರುವ ರಾಷ್ಟ್ರೀಯ ವೇದಿಕೆ ವಿರೋಧ ಪಕ್ಷವಾಗಿರುವಾಗ 'ಸ್ವದೇಶಿ' ಯ ಬಗ್ಗೆ ಮಾತನಾಡುತ್ತಿದ್ದ ಬಿಜೆಪಿಯ ತಿಪ್ಪರಲಾಗ ವನ್ನು ಖಂಡಿಸಿದೆ. ಈ ಕೆಳಗಿನ ಕಾರ್ಯಾಚರಣೆಗಳಿಗೆ ಅದು ಕರೆ ನೀಡಿದೆ.

1. ಫೆಬ್ರವರಿ 7 ರಂದು ಪೇಟೆಂಟ್ ತಿದ್ದುಪಡಿ ಕಾನೂನು ಮತ್ತು ಐಆರ್‌ಎ ಬಿಲ್ಲ ವಿರುದ್ಧ ರಾಷ್ಟ್ರೀಯ ಸಮಾವೇಶ. ಸಂಸತ್ತಿನ ಬಜೆಟ್ ಅಧಿವೇಶನದ ಆರಂಭದ ದಿನ **ಫೆಬ್ರವರಿ 22 ರಂದು ಅಖಿಲ ಭಾರತ ಪ್ರತಿಭಟನಾ ದಿನಾಚರಣೆ** - ಹಲವು ಕೇಂದ್ರಗಳಲ್ಲಿ ಸಮಾವೇಶಗಳು

2. ಮುಂದಿನ ಹಂತದ ಪ್ರಚಾರಾಂದೋಲನ - ಪೇಟೆಂಟ್ ಕಾನೂನು ತಿದ್ದುಪಡಿ, ವಿಮಾ ಮಸೂದೆ, ಬೆಲೆಯೇರಿಕೆ, ನಿರುದ್ಯೋಗ, ಖಾಸಗೀಕರಣ, ಶೇರು ಮಾರಾಟ, ರೋಗಗ್ರಸ್ತ ಸಾರ್ವಜನಿಕ ವಲಯದ ಉದ್ದಿಮೆಗಳ ಪುನಶ್ಚೇತನ, ಕೃಷಿ ಕಾರ್ಮಿಕರ ಮಸೂದೆ, 33% ಮಹಿಳಾ ಮೀಸಲಾತಿ, ಕಡ್ಡಾಯ ಪ್ರಾಥಮಿಕ ಶಿಕ್ಷಣ ಈ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸಿ ಚಳುವಳಿ. ಶಿಕ್ಷಣವನ್ನು ಕೋಮುವಾದಗ್ರಸ್ತ ಗೊಳಿಸುವ ಪ್ರಯತ್ನ, ಭಾರತ-ಪಾಕಿಸ್ತಾನ ಕ್ರಿಕೆಟ್ ಪಂದ್ಯಗಳನ್ನು ಅಸ್ತವ್ಯಸ್ತಗೊಳ್ಳುವ ಬೆದರಿಕೆ, ಅಲ್ಪಸಂಖ್ಯಾತರ ಮೇಲೆ ಹಲ್ಲೆ ಇವೆಲ್ಲದರ ವಿರುದ್ಧ ವ್ಯಾಪಕ ಐಕ್ಯ ಪ್ರಚಾರ.


3. ಮಾರ್ಚ್ ತಿಂಗಳಲ್ಲಿ ಕೋಮುವಾದ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ರಾಷ್ಟ್ರೀಯ ಸಮಾವೇಶ

4. ಈ ಹಂತದ ಕೊನೆಯಲ್ಲಿ ಏಪ್ರಿಲ್ ಅಂತ್ಯದ ವೇಳೆಗೆ ಒಂದು ಬೃಹತ್ ಸಮರಶೀಲ ಸಂಸತ್‌ಚಲೋ

ರಾಷ್ಟ್ರೀಯ ವೇದಿಕೆಯ ಈ ಸಭೆ ಹರ್ಯಾಣ ಸರಕಾರ ಡಿಸೆಂಬರ್ 11 ರ ಮುಷ್ಕರದಲ್ಲಿ ಪಾಲ್ಗೊಂಡ ಸರಕಾರೀ ನೌಕರರ ವಿರುದ್ಧ ತೀವ್ರ ದಮನ ಹರಿಯಬಿಟ್ಟದ್ದನ್ನು ಖಂಡಿಸಿತು. ಹರ್ಯಾಣ ಸರಕಾರ ಹಲವಾರು ನೌಕರರನ್ನು ಅಮಾನತುಗೊಳಿಸಿದಲ್ಲದೆ ಸರ್ವ ಕರ್ಮಚಾರಿ ಸಂಘ್‌ನ ಪ್ರಧಾನ ಕಾರ್ಯದರ್ಶಿಗೆ 15 ಲಕ್ಷ ರೂ. ದಂಡ ಹಾಕಿದ್ದು ಅಘೋಷಿತ ತುರ್ತುಪರಿಸ್ಥಿತಿಯ ಸರ್ವಾಧಿಕಾರಿ ಕ್ರಮ ಎಂದಿರುವ ಸಭೆ ಫೆಬ್ರವರಿ ಆರಂಭದಲ್ಲಿ ಚಂಢೀಗಡದಲ್ಲಿ ಒಂದು ಪ್ರತಿಭಟನಾ ರ್‍ಯಾಲಿ ನಡೆಸಲು ನಿರ್ಧರಿಸಿತು. ರಾಷ್ಟ್ರೀಯವೇದಿಕೆಯ ಮುಖಂಡರ ಒಂದು ನಿಯೋಗ ಮುಖ್ಯ ಮಂತ್ರಿ ಅಥವಾ ರಾಜ್ಯಪಾಲರನ್ನು ಭೇಟಿ ಮಾಡುತ್ತದೆ. ವೇದಿಕೆಯ ಎಲ್ಲಾ ಘಟಕಗಳು ತಕ್ಷಣವೇ ಈ ಕ್ರಮಗಳನ್ನೆಲ್ಲಾ ಹಿಂತೆಗೆದುಕೊಳ್ಳುವಂತೆ ಮುಖ್ಯಮಂತ್ರಿ ಗಳಿಗೆ ತಂತಿ ಕಳಿಸುತ್ತವೆ (ಐಎನ್‌ಎನ್)

ವಾರದ ವ್ಯಂಗ್ಯ ಚಿತ್ರ

'ದಿ ಹಿಂದು'ನಲ್ಲಿ ಕೇಶವ್



........ಪುಸ್ತಕ ಪರಿಚಯ

ಪುಟ 6 ರಿಂದ

ಭಾರತೀಯರು ಸೇವಿಸಬೇಕೆಂದು ನಿಗದಿಪಡಿಸಿರುವ ಪೌಷ್ಟಿಕಾಂಶಗಳ ಪ್ರಮಾಣಗಳನ್ನು ಪಟ್ಟಿ ಮಾಡಿವೆ. ಜನರ ಜೀವನವನ್ನು ಉತ್ತಮಪಡಿಸಬೇಕೆಂಬ ಸಮಾಜ ರಚನೆಗಾಗಿ ಹೋರಾಟದಲ್ಲಿ ತೊಡಗಿರುವವರಿಗೆ ಒಂದು ಉಪಯುಕ್ತವಾದ ಮಾಹಿತಿಯಿದು. ವಾಸ್ತವವಾಗಿ ಭಾರತೀಯರಿಗೆ ಸಿಗುತ್ತಿರುವ ಕ್ಯಾಲೋರಿ ಪ್ರಮಾಣವನ್ನು ಪಟ್ಟಿ ಮಾಡಿದ್ದಿದ್ದರೆ ಈ ಕೋಷ್ಟಕ ಪರಿಪೂರ್ಣ ಆಗುತ್ತಿತ್ತು.

ಖಗೋಳ ವಿಜ್ಞಾನ ವಿಭಾಗದ ಲೇಖಕರ ಪಟ್ಟಿಯಲ್ಲಿ ಜಿ.ಟಿ.ನಾರಾಯಣ ರಾವ್ ಇಲ್ಲದಿರುವುದು ಒಂದು ನಿರಾಸೆಯ ಸಂಗತಿ.

3ನೇ ಸಂಪುಟದ ನರ ಮನೋವಿಜ್ಞಾನ ವಿಭಾಗದಲ್ಲಿ ಜ್ಞಾಪಕ ಶಕ್ತಿ ಹೆಚ್ಚಿಸುವ ಔಷಧಗಳಿಲ್ಲ ಎಂಬ ವಿವರಣೆ(ಪುಟ 66) ಜ್ಞಾಪಕ ಶಕ್ತಿ 'ಹೆಚ್ಚಳ'ಕ್ಕಾಗಿ ವಂಚಕರ ಬಲೆಗೆ ಬೀಳುವ ಜನರಿಗೆ ಎಚ್ಚರಿಕೆ ಗಂಟೆಯಾಗಲಿದೆ.

ಮೂಢನಂಬಿಕೆಗಳು, ಪವಾಡಗಳು ಮೊದಲಾದವುಗಳ ಬಗ್ಗೆ ಅನುಬಂಧ ರೂಪದಲ್ಲಿಯಾದರೂ ಒಂದು ಲೇಖನವನ್ನು ಸೇರಿಸಿದಿದ್ದರೆ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಪ್ರಕಾಶಕರ ಆಶಯಕ್ಕೆ ಇಂಬು ಸಿಗುತ್ತಿತ್ತೆನ್ನುವುದು ನನ್ನ ಅನಿಸಿಕೆ.

ಒಟ್ಟಿನಲ್ಲಿ ಹೇಳುವುದಾದರೆ ವಿಜ್ಞಾನವೆಂದರೆ ಕಬ್ಬಿಣದ ಕಡಲೆ ಕಾಯಿ ಎಂದು ಹೌಹಾರಿ ಬೀಳುವ ಸನ್ನಿವೇಶದ ನಡುವೆ ವಿಜ್ಞಾನದ ನಾನಾ ಮಜಲುಗಳನ್ನು ಸರಳವಾಗಿ ಸಚಿತ್ರವಾಗಿ ನಿರೂಪಿಸಲು ಮುಂದಾಗಿರುವ ಈ ನಾಲ್ಕು ಸಂಪುಟಗಳು 'ವಿಜ್ಞಾನ ಕ್ಷೇತ್ರದ ಜ್ಞಾನ ನಿಧಿ'ಯೇ ಆಗಿವೆ. ಸಂಪುಟಗಳ ಜತೆ 36 ಪುಟಗಳ ಸಂದರ್ಭಸೂಚಿ ಪುಸ್ತಕವನ್ನೇ ಕೊಟ್ಟಿರುವುದು ವಿಶೇಷ.

ವಿದ್ಯಾರ್ಥಿಗಳು ಮಾತ್ರವಲ್ಲದೆ ವಿಜ್ಞಾನ ಶಿಕ್ಷಕ ಶಿಕ್ಷಕಿಯರಿಗೂ ಇದು ಸಹಕಾರಿ ಗ್ರಂಥವಾಗಿದೆ.

ಇದರ ಬೆಲೆ (ಒಟ್ಟು 1800 ರೂಪಾಯಿ) ಜನಸಾಮಾನ್ಯರ ಕೈಗೆ ಎಟುಕದ್ದು. ಅಕಾಡೆಮಿಕ್ ಆಸಕ್ತಿ ಇರುವವರಷ್ಟೆ ಕೊಂಡಾರು. ಆದರೆ ಈ ಸಂಪುಟಗಳ ಮಹತ್ವ ಬೆಲೆ ಕಟ್ಟಲಾಗದಂಥದ್ದು. ಕನಿಷ್ಠ ಪಕ್ಷ ರಾಜ್ಯದ ಪ್ರತಿಯೊಂದು ಶಾಲೆ-ಕಾಲೇಜುಗಳ ಗ್ರಂಥ ಭಂಡಾರದಲ್ಲಿ ಇದಕ್ಕೆ ಸ್ಥಾನ ಸಿಗಬೇಕು. ಒಮ್ಮೆ ಖರೀದಿಸಿದ ಈ ಆಸ್ತಿ ನೂರಾರು ವರ್ಷ ಕಾಲ ಸಾವಿರಾರು ಜನರ ಜ್ಞಾನಾಸ್ತಿ ಆಗುವುದರಲ್ಲಿ ಅನುಮಾನವಿಲ್ಲ.

ಈ ಸಂಪುಟಗಳ ಮೇಲೆ ಕಣ್ಣಾಡಿಸುವಾಗ ಅಬ್ಬಾ ಜ್ಞಾನ-ವಿಜ್ಞಾನದ ದಿಗಂತ ಎಷ್ಟೊಂದು ವಿಸ್ತಾರವಾದುದಲ್ಲವೇ ಎಂಬ ಭಾವನೆ ಬಾರದಿರದು. ಅಂತಿರುವಾಗ, ಅದ್ಭುತ ವೇಗದೊಂದಿಗೆ ವಿಜ್ಞಾನ ರಂಗದ ಚಕ್ರ ಉರುಳುತ್ತಿರುವಾಗ ದೇವರು- ಧರ್ಮ- ಜಾತಿ-ಭಾಷೆಗಳ ಹೆಸರಿನಲ್ಲಿ ಪ್ರಗತಿಯ ಚಕ್ರವನ್ನು ಹಿಂದಕ್ಕೆ ತಿರುಗಿಸಲು ಪ್ರಯತ್ನಿಸುತ್ತಿರುವ ಜನಗಳ ಪರಿಯ ಕಂಡು ದಾಸರ ಈ ಪದ ನೆನಪಾಗುತ್ತದೆ .... ನಗೆಯು ಬರುತ್ತಿದೆ ಎನಗೆ ನಗೆಯು ಬರುತಿದೆ.....

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor: G.N. NAGARAJ